
ಶುಕ್ರವಾರ, ಮಾರ್ಚ್ 5, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 64 | ಪುಟ 12 + 4
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ನಿರ್ದೇಶಕರಾಗಿ ಚಂದನವನಕ್ಕೆ ಕಾಲಿಟ್ಟ ರಿಷಬ್ ಶೆಟ್ಟಿ ಕಳೆದ ವರ್ಷ ಲಾಕ್‌ಡೌನ್‌ನಲ್ಲಿ 'ಹೀರೋ' ಆಗಿ ಇಂದು ತೆರೆ ಮೇಲೆ ಅನ್‌ಲಾಕ್ ಆಗುತ್ತಿದ್ದಾರೆ.



ಅನುಭವ ಮಂಟಪ 'ಮೀಸಲಾತಿ' ಶಿಫಾರಸು ನಮ್ಮದು, 'ಪ್ರಮಾಣ' ಸರ್ಕಾರದ್ದು'

ಮೀಸಲಾತಿ ಪ್ರಮಾಣ ಶೇ 50 ಮೀರದಿರಲಿ: ಸುಪ್ರೀಂ 10

ಚಿರತೆ ಪಾಲಾಗುತ್ತಿರುವ ಹರಕೆ ಕರುಗಳು! 6

ಸೆನ್ಸೆಕ್ಸ್	ನಿಫ್ಟಿ	₹/$
50,846	15,081	72.83

ಇಪಿಎಫ್: ಶೇಕಡ 8.5ರಷ್ಟು ಬಡ್ಡಿ

ನವದೆಹಲಿ (ಪಿಟಿಐ): ಹಾಲಿ ಆರ್ಥಿಕ ವರ್ಷದಲ್ಲಿ ಉದ್ಯೋಗಿಗಳ ಭವಿಷ್ಯ ನಿಧಿ ಠೇವಣಿಗಳಿಗೆ (ಇಪಿಎಫ್) ಶೇಕಡ 8.5ರಷ್ಟು ಬಡ್ಡಿ ನೀಡಲು ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಗುರುವಾರ ತೀರ್ಮಾನಿಸಿದೆ. ಸಂಘಟನೆಯು ಐದು ಕೋಟಿಗೂ ಹೆಚ್ಚಿನ ಚಂದಾದಾರರನ್ನು ಹೊಂದಿದೆ.

ಉದ್ಯೋಗಿಗಳ ಭವಿಷ್ಯ ನಿಧಿ ಸಂಘಟನೆಯ ಅತ್ಯುನ್ನತ ಸಮಿತಿಯಾದ ಕೇಂದ್ರ ಧರ್ಮದರ್ಶಿಗಳ ಮಂಡಳಿಯ ಸಭೆಯು ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವ ಸಂತೋಷ್ ಕುಮಾರ್ ಗಂಗ್ವಾರ್ ಅಧ್ಯಕ್ಷತೆಯಲ್ಲಿ ಶ್ರೀನಗರದಲ್ಲಿ ನಡೆಯಿತು. 2020–21ನೇ ಸಾಲಿನ ಬಡ್ಡಿ ದರವನ್ನು ಸಭೆಯಲ್ಲಿ ಅಂತಿಮಗೊಳಿಸಲಾಯಿತು.

ನಡೆಯದ ಚರ್ಚೆ • ಉಭಯ ಸದನಗಳಲ್ಲಿ ಕಾಂಗ್ರೆಸ್ ಧರಣಿ

ಒಂದೇ ಚುನಾವಣೆ: ಇಲ್ಲ ಮನ್ನಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ರಾಷ್ಟ್ರ– ಒಂದು ಚುನಾವಣೆ' ಕುರಿತು ವಿಶೇಷ ಚರ್ಚೆ ನಡೆಸುವುದನ್ನು ವಿರೋಧಿಸಿ ವಿಧಾನ ಮಂಡಲದ ಉಭಯ ಸದನಗಳಲ್ಲೂ ಕಾಂಗ್ರೆಸ್ ಪಕ್ಷ ಧರಣಿ ನಡೆಸಿತು.

ಧಿಕ್ಕಾರ, ಕೂಗಾಟ, ಕಲಾಪ ಮುಂದೂಡಿಕೆ, ಮತ್ತೆ ಆರಂಭ, ಸಭಾತ್ಯಾಗದ ವಿದ್ಯಮಾನಗಳು ಪದೇ ಪದೇ ನಡೆದಿದ್ದರಿಂದ ವಿಧಾನಸಭೆಯಲ್ಲಿ ಮೊದಲ ದಿನದ ಕಲಾಪ ನಡೆಯಲಿಲ್ಲ. ಪರಿಷತ್ತಿನಲ್ಲಿ ಅರ್ಧದಿನ ಮಾತ್ರ ಕಲಾಪ ನಡೆಯಿತು.

ಈ ವಿಷಯದ ವಿಶೇಷ ಚರ್ಚೆಗಾಗಿ ಎರಡು ದಿನಗಳನ್ನು ನಿಗದಿ ಮಾಡಲಾಗಿತ್ತು. ಗುರುವಾರ ಬೆಳಿಗ್ಗೆ ಕಲಾಪ ಆರಂಭವಾದಾಗ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಪ್ರಾಸ್ತಾವಿಕ ಮಾತುಗಳನ್ನು ಆರಂಭಿಸುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ ಧರಣಿ ನಡೆಸಿದರು. ವಿಧಾನಪರಿಷತ್ತಿನಲ್ಲಿ ಪ್ರಶ್ನೋತ್ತರ, ಶೂನ್ಯವೇಳೆ, ಗಮನಸೆಳೆಯುವ ಸೂಚನೆಯ ನಿಗದಿತ ಕಾರ್ಯಸೂಚಿ ಬಳಿಕ ಕಾಂಗ್ರೆಸ್ ಸದಸ್ಯರು ಇದೇ ಹಾದಿ ಅನುಸರಿಸಿದರು.

4 ನೇ ಪುಟ ನೋಡಿ

ಅಂಗಿ ಬಿಚ್ಚಿದ್ದಕ್ಕೆ ಸಂಗಮೇಶ್ವರ ಅಮಾನತು



ಶಾಸಕ ಬಿ.ಕೆ. ಸಂಗಮೇಶ್ವರ ಅವರು ವಿಧಾನಸಭೆಯಲ್ಲಿ ಗುರುವಾರ ಅಂಗಿ ಬಿಚ್ಚಿ ಪ್ರತಿಭಟನೆ ನಡೆಸಿದರು

ವಿಧಾನಸಭೆಯಲ್ಲಿ ಗುರುವಾರ 'ಒಂದು ರಾಷ್ಟ್ರ– ಒಂದು ಚುನಾವಣೆ'ಯ ವಿಶೇಷ ಚರ್ಚೆ ವಿರೋಧಿಸಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸುತ್ತಿದ್ದ ವೇಳೆ ಅಂಗಿ ಬಿಚ್ಚಿ ಪ್ರತಿಭಟಿಸಿದ್ದಕ್ಕೆ ಭದ್ರಾವತಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ಕೆ. ಸಂಗಮೇಶ್ವರ ಅವರನ್ನು ಸದನದಿಂದ ಒಂದು ವಾರ ಕಾಲ ಅಮಾನತು ಮಾಡಲಾಯಿತು. 'ಸಂಗಮೇಶ್ವರ ಸದನಕ್ಕೆ ಅಗೌರವ ತೋರಿದ್ದಾರೆ. ಇದನ್ನು ಸಹಿಸಲು ಸಾಧ್ಯವಿಲ್ಲ' ಎಂದು ಸಭಾಧ್ಯಕ್ಷ ಕಾಗೇರಿ ತಮ್ಮ ಕ್ರಮ ಸಮರ್ಥಿಸಿಕೊಂಡರು. ಭೋಜನ ವಿರಾಮ ವೇಳೆ ಮೊಗಸಾಲೆ ಪ್ರವೇಶಿಸಲು ಬಂದ ಸಂಗಮೇಶ್ವರ್ ಅವರನ್ನು ಮಾರ್ಷಲ್‌ಗಳು ತಡೆದರು. ಬಳಿಕ ನಡೆದ ಕಲಾಪದ ಸಂದರ್ಭದಲ್ಲಿ 'ಅಮಾನತು ಆದೇಶ ಹಿಂದಕ್ಕೆ ಪಡೆಯಬೇಕು. ಇಲ್ಲವಾದರೆ ನಮ್ಮೆಲ್ಲರನ್ನೂ ಅಮಾನತು ಮಾಡಿ' ಎಂದು ಸಿದ್ದರಾಮಯ್ಯ ಹೇಳಿದರು.

ಇನ್ನೊಂದು ಸುದ್ದಿ 3D

ವಿಶೇಷ ಚರ್ಚೆಯಲ್ಲಿ ಭಾಗವಹಿಸುವುದಾಗಿ ಹೇಳಿ ಒಪ್ಪಿಕೊಂಡಿದ್ದಿರಿ. ಈಗ ಚರ್ಚೆ ಮಾಡುವುದಿಲ್ಲ ಎನ್ನುತ್ತೀರಿ. ಇದು ನಿಮಗೆ (ಕಾಂಗ್ರೆಸ್) ಶೋಭೆ ತರುವುದಿಲ್ಲ
ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿ

ಈ ವಿಷಯ ಸಂಸತ್ತಿನಲ್ಲಿ ಚರ್ಚೆ ಆಗಲಿ. ನಾವು ಇಲ್ಲಿ ಚರ್ಚೆ ಮಾಡುವುದರಿಂದ ಯಾವುದೇ ಪ್ರಯೋಜನ ಇಲ್ಲ. ಇದು ಆರ್‌ಎಸ್‌ಎಸ್ ಅಜೆಂಡಾ
ಸಿದ್ದರಾಮಯ್ಯ
ವಿರೋಧ ಪಕ್ಷದ ನಾಯಕ

ಹಿಂದೆ ನೀವೇ (ಸಿದ್ದರಾಮಯ್ಯ) ಒಂದು ದೇಶ ಒಂದು ಚುನಾವಣೆ ಆಗಲಿ ಎಂದಿದ್ದಿರಿ. ಬಿಎಸಿ ಸಭೆಯಲ್ಲೂ ಚರ್ಚೆಗೆ ಒಪ್ಪಿಗೆ ಸೂಚಿಸಿದ್ದಿರಿ. ಈಗ ಹಿಂದೇಟು ಏಕೆ
ಬಸವರಾಜ ಬೊಮ್ಮಾಯಿ
ಕಾನೂನು ಮತ್ತು ಸಂಸದೀಯ ಸಚಿವ

ಪಿಎಚ್‌ಸಿಗಳಲ್ಲೂ ಕೋವಿಡ್ ಲಸಿಕೆ: ಸುಧಾಕರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮುಂದಿನ ದಿನಗಳಲ್ಲಿ ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳು (ಪಿಎಚ್‌ಸಿ) ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲೂ (ಸಿಎಚ್‌ಸಿ) ಕೋವಿಡ್ ಲಸಿಕೆ ಹಾಕಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಪತ್ರಕರ್ತರ ಜತೆ ಗುರುವಾರ ಮಾತನಾಡಿದ ಅವರು, 'ಈಗ ತಾಲ್ಲೂಕು ಆಸ್ಪತ್ರೆಗಳಲ್ಲಿ ಮಾತ್ರ ಲಸಿಕೆ ಹಾಕಲಾಗುತ್ತಿದೆ. ಹೆಚ್ಚು ಜನರು ಲಸಿಕೆ ಪಡೆಯಲು ಅನುಕೂಲವಾಗುವಂತೆ, ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ಸೌಲಭ್ಯಗಳ ಆಧಾರದಲ್ಲಿ ಕೋವಿಡ್ ಪಿಎಚ್‌ಸಿ ಮತ್ತು ಸಿಎಚ್‌ಸಿಗಳಲ್ಲೂ ಕೋವಿಡ್ ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಲಾಗುವುದು' ಎಂದರು.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಲಸಿಕೆ ವಿತರಣೆ ನಡೆಯಲಿದೆ. ಖಾಸಗಿ ಆರೋಗ್ಯ ಕೇಂದ್ರಗಳಿಗೂ ಲಸಿಕೆ ವಿತರಣೆಗೆ ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

ವರ್ಗಾವಣೆಗೆ ಮುಖ್ಯಮಂತ್ರಿ 'ಕಡಿವಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 2021ನೇ ಸಾಲಿನ ಸಾಮಾನ್ಯ ವರ್ಗಾವಣೆ ಆರಂಭಗೊಳ್ಳುವವರೆಗೆ ಇಲಾಖಾ ಹಂತದಲ್ಲಿ ಯಾವುದೇ ವರ್ಗಾವಣೆ ಮಾಡಕೂಡದು. ವರ್ಗಾವಣೆ ಮಾಡಲೇಬೇಕಾಗಿದ್ದಲ್ಲಿ ಮುಖ್ಯಮಂತ್ರಿ ಅನುಮೋದನೆ ಅಗತ್ಯ ಎಂದು ಸರ್ಕಾರ ಷರತ್ತು ವಿಧಿಸಿದೆ.

'ಎಲ್ಲ ವರ್ಗಾವಣೆಗಳಿಗೆ ಮುಖ್ಯಮಂತ್ರಿಯ ಆದೇಶ ಕಡ್ಡಾಯ' ಎಂದು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣರೆಡ್ಡಿ ಸೂಚನೆ ನೀಡಿದ್ದಾರೆ.

ವರ್ಗಾವಣೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಿರ್ಧರಿಸಿದ್ದಾರೆ. ಅದಕ್ಕಾಗಿಯೇ ಟಿಪ್ಪಣಿ ರೂಪದಲ್ಲಿ ಈ ರೀತಿಯ ಸೂಚನೆ ಹೊರಡಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಇದರಿಂದ ಇನ್ನು ಮುಂದೆ ಸಚಿವರು, ಶಾಸಕರಿಂದ ಪಡೆದ ವರ್ಗಾವಣೆ ಶಿಫಾರಸು ಪತ್ರಗಳಿಗೆ ಯಾವುದೇ ಬೆಲೆ ಇಲ್ಲ. ಅಲ್ಲದೆ, ಈಗಾಗಲೇ ಟಿಪ್ಪಣಿ, ನಡವಳಿ, ಸ್ವೀಕೃತಿ ಮೇಲೆ ಷರಾ ರೂಪದಲ್ಲಿ ಮುಖ್ಯಮಂತ್ರಿಯಿಂದ ವರ್ಗಾವಣೆಗೆ ಸಮ್ಮತಿ ಪಡೆದ ವರ್ಗಾವಣೆಗಳಿಗೂ ತಡೆ ನೀಡಲಾಗಿದೆ. ಅಂಥವುಗಳನ್ನೂ ಮುಖ್ಯಮಂತ್ರಿಗೆ ಕಡತದ ಮೂಲಕ ಸಲ್ಲಿಸಿ ಒಪ್ಪಿಗೆ ಪಡೆಯಬೇಕು.

2021ನೇ ಸಾಲಿನಲ್ಲಿ ಸರ್ಕಾರಿ ನೌಕರರ ಸಾಮಾನ್ಯ ವರ್ಗಾವಣೆ ಎಷ್ಟು ಪ್ರಮಾಣದಲ್ಲಿ ಇರಬೇಕು ಎಂಬ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಆಗಬೇಕಿದೆ. ಅಲ್ಲಿಯವರೆಗೆ ಆಡಳಿತಾತ್ಮಕವಾಗಿ ಅವಶ್ಯವಿರುವ ಖಾಲಿ ಸ್ಥಾನಗಳನ್ನು ತುಂಬಲು ಮಾತ್ರ ವರ್ಗಾವಣೆಗಳನ್ನು ಮಾಡಬಹುದು. ಅದರ ಹೊರತು, ಬೇರೆ ಯಾವುದೇ ವರ್ಗಾವಣೆಗೆ ಅವಕಾಶ ಇಲ್ಲ ಎಂದು ರೆಡ್ಡಿ ಟಿಪ್ಪಣಿಯಲ್ಲಿ ಸೂಚಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು, 'ವರ್ಗಾವಣೆಗೆ ಶಿಫಾರಸು ಮಾಡುವ ಸಚಿವರು, ಶಾಸಕರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಮತ್ತು ಎಲ್ಲ ವರ್ಗಾವಣೆಗಳನ್ನು ಕೇಂದ್ರೀಕೃತಗೊಳಿಸುವ (ಮುಖ್ಯಮಂತ್ರಿ ಮೂಲಕವೇ) ಉದ್ದೇಶದಿಂದ ಈ ಆದೇಶ ಹೊರಡಿಸಲಾಗಿದೆ. ಯಾವುದೇ ವರ್ಗಾವಣೆ ತಮ್ಮ ನಿಯಂತ್ರಣದಲ್ಲಿಯೇ ನಡೆಯಬೇಕು ಎಂದು ಈ ನಿರ್ದೇಶನದ ಮೂಲಕ ಮುಖ್ಯಮಂತ್ರಿ ಪರೋಕ್ಷವಾಗಿ ಸೂಚಿಸಿದ್ದಾರೆ' ಎಂದರು.



ಬಯಲ ಬದುಕಿಗೆ ಊರವರಿಂದ ಸೂರು 7

ಚಿನಕುರಳಿ
ಪ್ರಕಾಶ್ ಶೆಟ್ಟಿ



ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕ ಪಟ್ಟಿ ಬಿಡುಗಡೆ

ವಾಸಕ್ಕೆ ಬೆಂಗಳೂರು ಅತ್ಯುತ್ತಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ವಾಸಕ್ಕೆ ಬೆಂಗಳೂರೇ ಅತ್ಯುತ್ತಮ ನಗರ ಎಂದು ಕೇಂದ್ರ ಸರ್ಕಾರ ಹೇಳಿದೆ. ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಬಿಡುಗಡೆ ಮಾಡಿರುವ 'ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕ' ಪಟ್ಟಿಯಲ್ಲಿ ಬೆಂಗಳೂರು ದೇಶದಲ್ಲೇ ಮೊದಲ ಸ್ಥಾನ ಪಡೆದಿದೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಗುರುವಾರ ಈ ಸೂಚ್ಯಂಕ ಪಟ್ಟಿಯನ್ನು ಪ್ರಕಟಿಸಿದರು. ಸಚಿವಾಲಯವು ದೇಶದ 111 ನಗರಗಳಲ್ಲಿ ಜೀವನ ಗುಣಮಟ್ಟದ ಬಗ್ಗೆ ಸಮೀಕ್ಷೆ ನಡೆಸಿತ್ತು. ಇವುಗಳಲ್ಲಿ 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ 51 ನಗರಗಳು ಸೇರಿದ್ದವು.

ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕದಲ್ಲಿ 66.70 ಅಂಕಗಳನ್ನು ಬೆಂಗಳೂರು ಪಡೆದಿದೆ. 10 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ನಗರಗಳಲ್ಲಿ ದಾವಣಗೆರೆ ಒಂಬತ್ತನೇ ಸ್ಥಾನ ಪಡೆದುಕೊಂಡಿದೆ. ದಾವಣಗೆರೆ 55.25 ಅಂಕ ಪಡೆದಿದೆ.

2019ರ ಸಮೀಕ್ಷೆಯಲ್ಲಿ 58ನೇ ಸ್ಥಾನದಲ್ಲಿದ್ದ ಬೆಂಗಳೂರು ಈ ಬಾರಿ ಅಗ್ರಸ್ಥಾನಕ್ಕೆ ಏರಿದ ಬಗ್ಗೆ ಹರ್ಷ ವ್ಯಕ್ತಪಡಿಸಿದ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್, 'ಸೂಚ್ಯಂಕ ಪಟ್ಟಿಯಲ್ಲಿ ಬೆಂಗಳೂರಿಗೆ ಮೊದಲ ಸ್ಥಾನ ಲಭಿಸಿದ್ದು ಖುಷಿ ತಂದಿದೆ. ಈ ಶ್ರೇಯಕ್ಕೆ ಬಿಬಿಎಂಪಿ ಮಾತ್ರ ಕಾರಣವಲ್ಲ. ಜಲಮಂಡಳಿ, ಬೆಸ್ಕಾಂ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮೆಟ್ರೊ ರೈಲು ನಿಗಮ, ಬಿಎಂಟಿಸಿ ಪಾತ್ರವೂ ಇದರಲ್ಲಿದೆ' ಎಂದರು.

ವಿಡಿಯೊ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಿದ ಸಂಸದ ಪಿ.ಸಿ.ಮೋಹನ್, 'ಕೋವಿಡ್‌ನಂತಹ ಸಂಕಷ್ಟದ ಸಂದರ್ಭದಲ್ಲಿ ಬಿಬಿಎಂಪಿ ವಾರ್ ರೂಂ ರಚಿಸಿ ಸೋಂಕು ನಿಯಂತ್ರಣ ಮಾಡುವ ಮೂಲಕ ಇತರರಿಗೆ ಮಾದರಿಯಾಗಿತ್ತು. ಕೆರೆಗಳ ಪುನರುಜ್ಜೀವನ, ಉದ್ಯಾನಗಳ ನಿರ್ವಹಣೆಗೆ ಕೈಗೊಂಡಿರುವ ಕ್ರಮಗಳು ಕೈ ಹಿಡಿದಿವೆ. ಈ ಸಾಧನೆಗಾಗಿ ಆಯುಕ್ತರನ್ನು ಹಾಗೂ ಬಿಬಿಎಂಪಿಯ ಆಡಳಿತವರ್ಗವನ್ನು ಅಭಿನಂದಿಸುತ್ತೇನೆ' ಎಂದರು.

ನಗರದಲ್ಲಿ ಜೀವನ ಗುಣಮಟ್ಟ ಹೇಗಿದೆ, ಆರ್ಥಿಕ ಸಾಮರ್ಥ್ಯ ಹೇಗಿದೆ, ಪರಿಸರ ನಿರ್ವಹಣೆಯಲ್ಲಿ ಸುಸ್ಥಿರತೆ ಕಾಪಾಡಲಾಗಿದೆಯೇ, ಎಂಬುದರ ಬಗ್ಗೆ ಸ್ವತಂತ್ರವಾಗಿ ಸಮೀಕ್ಷೆ ನಡೆಸಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಪ್ರತಿವರ್ಷ ಈ ಶ್ರೇಯಾಂಕವನ್ನು ಬಿಡುಗಡೆ ಮಾಡುತ್ತದೆ. ನಗರವು 100ರಲ್ಲಿ ಎಷ್ಟು ಅಂಕಗಳನ್ನು ಪಡೆಯುತ್ತದೆ ಎಂಬುದನ್ನು ಆಧರಿಸಿ ಸೂಚ್ಯಂಕವನ್ನು ನಿರ್ಧರಿಸಲಾಗುತ್ತದೆ. ನಗರದ ವ್ಯವಸ್ಥೆಗಳ ಕುರಿತು ಜನಾಭಿಪ್ರಾಯವನ್ನೂ ಸಚಿವಾಲಯವು ಸಂಗ್ರಹಿಸುತ್ತದೆ.

ನಗರಾಡಳಿತ ನಿರ್ವಹಣೆ ಸೂಚ್ಯಂಕಗಳಲ್ಲಿ ಬೆಂಗಳೂರಿಗೆ 31ನೇ ಸ್ಥಾನ ಲಭಿಸಿದೆ. 'ನಗರಾಡಳಿತ ನಿರ್ವಹಣೆ ಸೂಚ್ಯಂಕದಲ್ಲೂ ಅಗ್ರಸ್ಥಾನಕ್ಕೆ ಏರಲು ಪ್ರಯತ್ನಿಸುತ್ತೇವೆ. ಎಲ್ಲಿ ಲೋಪಗಳಿವೆ ಎಂಬುದನ್ನು ಕಂಡುಕೊಂಡು ಸರಿಪಡಿಸಲು ಕ್ರಮ ವಹಿಸುತ್ತೇವೆ' ಎಂದು ಮಂಜುನಾಥ ಪ್ರಸಾದ್ ತಿಳಿಸಿದರು.

ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕ

ನಗರ	ಅಂಕ
ಬೆಂಗಳೂರು	66.70
ಪುಣೆ	66.27
ಅಹಮದಾಬಾದ್	64.87
ಚೆನ್ನೈ	62.61
ಸೂರತ್	61.73

ಈ ಶ್ರೇಯಾಂಕ ಪಡೆಯುವುದಕ್ಕಿಂತಲೂ ಮುಂದೆಯೂ ಉಳಿಸಿಕೊಳ್ಳುವುದು ತೀರಾ ಮುಖ್ಯ. ನಮ್ಮ ಮೇಲೆ ಇಟ್ಟಿರುವ ನಿರೀಕ್ಷೆಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತೇವೆ
ಎನ್.ಮಂಜುನಾಥ ಪ್ರಸಾದ್
ಬಿಬಿಎಂಪಿ ಆಯುಕ್ತ

ಇನ್ನೊಂದು ಸುದ್ದಿ 3C

ಜಿಎಸ್‌ಟಿ ವ್ಯಾಪ್ತಿಗೆ ತೈಲೋತ್ಪನ್ನಗಳನ್ನು ತಂದರೆ...

ಲೀಟರ್ ಪೆಟ್ರೋಲ್‌ಗೆ ₹ 75, ಡೀಸೆಲ್‌ಗೆ ₹ 68!

ಮುಂಬೈ (ಪಿಟಿಐ): ಪೆಟ್ರೋಲ್ ಅನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತಂದರೆ, ಅದರ ದರವು ಲೀಟರಿಗೆ ₹ 75ಕ್ಕೆ ಇಳಿಯಲಿದೆ.



ಜಿಎಸ್‌ಟಿ ವ್ಯಾಪ್ತಿಗೆ ಡೀಸೆಲ್ ಅನ್ನೂ ತಂದರೆ, ಅದರ ದರವು ಲೀಟರಿಗೆ ₹ 68ಕ್ಕೆ ಇಳಿಕೆ ಆಗಲಿದೆ.

'ಆದರೆ ಹೀಗೆ ಮಾಡುವುದಕ್ಕೆ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇದೆ. ಇದರಿಂದಾಗಿ ಜಾಗತಿಕವಾಗಿ ತೈಲೋತ್ಪನ್ನಗಳ ದರವು ಗರಿಷ್ಠ ಮಟ್ಟದಲ್ಲಿ ಇರುವ ರಾಷ್ಟ್ರಗಳ ಸಾಲಿನಲ್ಲಿ ಭಾರತವೂ ಒಂದಾಗಿದೆ' ಎಂದು ಎಸ್‌ಬಿಐ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದರಿಂದ ಕೇಂದ್ರ ಮತ್ತು ರಾಜ್ಯಗಳಿಗೆ ಆಗುವ ವರಮಾನ ನಷ್ಟವು ₹ 1 ಲಕ್ಷ ಕೋಟಿಮಾತ್ರ ಎಂದು ಅವರು ಅಂದಾಜಿಸಿದ್ದಾರೆ. ಜಿಎಸ್‌ಟಿ ವ್ಯವಸ್ಥೆಗೆ ಬಂದರೆ ಪೆಟ್ರೋಲ್ ಬಳಕೆಯು ಶೇ 10ರಷ್ಟು, ಡೀಸೆಲ್ ಬಳಕೆಯು ಶೇ 15ರಷ್ಟು ಹೆಚ್ಚಾಗುತ್ತದೆ ಎಂದು ಊಹಿಸಿ ವರಮಾನ ನಷ್ಟದ ಮೊತ್ತವನ್ನು ಲೆಕ್ಕ ಹಾಕಲಾಗಿದೆ.

ಕಚ್ಚಾ ತೈಲ ದರವು ಒಂದು ಬ್ಯಾರಲ್‌ಗೆ 60 ಅಮೆರಿಕನ್ ಡಾಲರ್ ಮತ್ತು ಡಾಲರ್–ರೂಪಾಯಿ ವಿನಿಮಯ ದರ ₹ 73 ಆಗಿರುತ್ತದೆ, ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಜಿಎಸ್‌ಟಿ ವ್ಯವಸ್ಥೆಯಲ್ಲಿ ಶೇ 28ರಷ್ಟು ತೆರಿಗೆ ವಿಧಿಸಲಾಗುತ್ತದೆ ಎಂದು ಭಾವಿಸಿ ಅವರು ಬೆಲೆಯ ಲೆಕ್ಕಾಚಾರ ಮಾಡಿದ್ದಾರೆ.

ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸುಂಕ ಮತ್ತು ತೆರಿಗೆಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ವರಮಾನದ ಪ್ರಮುಖ ಮೂಲ. ಈ ಕಾರಣಕ್ಕಾಗಿ ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಲು ಕೇಂದ್ರ ಮತ್ತು ರಾಜ್ಯಗಳಿಗೆ ಇಷ್ಟವಿಲ್ಲ ಎಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಏ. 5ರಿಂದ ಲಾರಿ ಮುಷ್ಕರ 2

ಪೆಟ್ರೋಲ್–ಡೀಸೆಲ್‌ನಿಂದ ರಾಜ್ಯಕ್ಕೆ ₹12,342 ಕೋಟಿ ತೆರಿಗೆ

ಬೆಂಗಳೂರು: 'ಡೀಸೆಲ್ ಮತ್ತು ಪೆಟ್ರೋಲ್‌ನಿಂದ ರಾಜ್ಯ ಸರ್ಕಾರಕ್ಕೆ 2020–21ನೇ ಸಾಲಿನಲ್ಲಿ ಜನವರಿ ಅಂತ್ಯಕ್ಕೆ ₹12,432 ಕೋಟಿ ತೆರಿಗೆ ಬಂದಿದೆ' ಎಂದು ರಾಜ್ಯ ಸರ್ಕಾರ ಹೇಳಿದೆ.

ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್‌ನ ಪ್ರಕಾಶ್ ರಾಥೋಡ್ ಪ್ರಶ್ನೆ ಕೇಳಿದ್ದರು.

'ದಕ್ಷಿಣದ ರಾಜ್ಯಗಳಿಗೆ ಹೋಲಿಸಿದಾಗ ಕೇರಳ ಬಿಟ್ಟು ಪೆಟ್ರೋಲ್, ಡೀಸೆಲ್ ಬೆಲೆ ನಮ್ಮ ರಾಜ್ಯದಲ್ಲಿಯೇ ಕಡಿಮೆ ಇದೆ. ಆದರೆ, ಈ ಮೂಲದಿಂದ ಕೇಂದ್ರ ಸರ್ಕಾರಕ್ಕೆ ಎಷ್ಟು ತೆರಿಗೆ ಬಂದಿದೆ ಎಂಬ ಮಾಹಿತಿ ಇಲ್ಲ' ಎಂದು ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

₹11,355 ಕೋಟಿ ಬಾಕಿ: 'ಈ ಸಾಲಿನ ಜನವರಿಯವರೆಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ₹11,355 ಕೋಟಿ ಜಿಎಸ್‌ಟಿ ಪರಿಹಾರ ಬಾಕಿ ಇದೆ' ಎಂದು ಸರ್ಕಾರ ಹೇಳಿದೆ.



ಏ. 5ರಿಂದ ಲಾರಿ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಳೆ ವಾಹನ ವಿಲೇವಾರಿ ನೀತಿ, ಮೋಟಾರು ಕಾಯ್ದೆ ಉಲ್ಲಂಘನೆಯ ದಂಡ ಹೆಚ್ಚಳ, ಟೋಲ್ ಶುಲ್ಕ ಹಾಗೂ ಡೀಸೆಲ್ ದರ ಏರಿಕೆ ಸೇರಿದಂತೆ ಕೇಂದ್ರ ಸರ್ಕಾರದ ಹಲವು ಸಾರಿಗೆ ವಿರೋಧಿ ನೀತಿಗಳನ್ನು ಖಂಡಿಸಿ ಏಪ್ರಿಲ್ 5ರಿಂದ ದೇಶವ್ಯಾಪಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ತೀರ್ಮಾನಿಸಲಾಗಿದೆ' ಎಂದು ಕರ್ನಾಟಕ ರಾಜ್ಯ ಲಾರಿ ಮಾಲೀಕರು ಹಾಗೂ ಏಜೆಂಟರ ಫೆಡರೇಷನ್‌ನ ಅಧ್ಯಕ್ಷ ಬಿ.ಚನ್ನಾರೆಡ್ಡಿ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದಕ್ಷಿಣ ರಾಜ್ಯಗಳ ಲಾರಿ ಮಾಲೀಕರ ಸಂಘಟನೆಗಳೊಂದಿಗೆ ಸಮಾಲೋಚಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಲಾಕ್‌ಡೌನ್ ಹಾಗೂ ಆರ್ಥಿಕ ಹಿಂಜರಿತದಿಂದ ಸರಕು ಸಾಗಣೆ ವಲಯ ಸಂಕಷ್ಟಕ್ಕೆ ಸಿಲುಕಿದೆ. ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರವು ತೈಲ ಬೆಲೆ ಹೆಚ್ಚಿಸುವ ಮೂಲಕ ಗಾಯದ ಮೇಲೆ ಬರೆ ಎಳೆಯುತ್ತಿದೆ. ಹಿಂದಿನ ಆರು ತಿಂಗಳಲ್ಲಿ ಡೀಸೆಲ್ ಬೆಲೆ ₹20.42 ರಷ್ಟು ಹೆಚ್ಚಳ ಕಂಡಿದೆ. ಜನ ವಿರೋಧಿ ಸಾರಿಗೆ ನೀತಿಗಳನ್ನು ಹಿಂಪಡೆಯುವಂತೆ ಸರ್ಕಾರಕ್ಕೆ ಪತ್ರ ಬರೆದರೂ ಪ್ರಯೋಜನವಾಗಿಲ್ಲ. ಹೀಗಾಗಿ ಮುಷ್ಕರದ ಹಾದಿ ಹಿಡಿದಿದ್ದೇವೆ. ಆ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಮುಂದಾಗಲಿದ್ದೇವೆ' ಎಂದರು.

'ಕೇಂದ್ರವು ವಾಹನ ತಯಾರಿಕ ಕಂಪನಿಗಳ ಲಾಬಿಗೆ ಮಣಿಯುತ್ತಿದೆ. ಹಳೆಯ ವಾಹನಗಳನ್ನು ಗುಜರಿಗೆ ನೀಡುವ ನೀತಿ ಅನುಷ್ಠಾನಗೊಳಿಸಿರುವುದು ಇದಕ್ಕೊಂದು ನಿದರ್ಶನ. ಈ ನೀತಿಯಿಂದ ಲಕ್ಷಾಂತರ ಮಂದಿ ಬೀದಿಗೆ ಬೀಳುತ್ತಾರೆ. ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು' ಎಂದು ತಿಳಿಸಿದರು.

'ಮೋಟಾರು ವಾಹನ ಕಾಯ್ದೆ ಉಲ್ಲಂಘಿಸಿದವರಿಗೆ ಈ ಹಿಂದೆ ₹100ರಿಂದ ₹200 ದಂಡ ವಿಧಿಸಲಾಗುತ್ತಿತ್ತು. ಈಗ ಇದನ್ನು ₹500ರಿಂದ ₹20 ಸಾವಿರದವರೆಗೆ ಏರಿಕೆ ಮಾಡಲಾಗಿದೆ. ಇದನ್ನೇ ನೆಪವಾಗಿಟ್ಟುಕೊಂಡು ಸಾರಿಗೆ ಇಲಾಖೆಯ ಅಧಿಕಾರಿಗಳು ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಚಾಲಕರಿಂದ ಬೇಕಾಬಿಟ್ಟಿ ಹಣ ಸುಲಿಗೆ ಮಾಡುತ್ತಿದ್ದಾರೆ. ವಾಹನಗಳ ಮೂರನೇ ವ್ಯಕ್ತಿಯ (ಥರ್ಡ್ ಪಾರ್ಟಿ) ವಿಮೆ ಮೊತ್ತವನ್ನು ಪ್ರತಿವರ್ಷ ಏರಿಕೆ ಮಾಡುತ್ತಿರುವುದಕ್ಕೆ ನಮ್ಮ ಆಕ್ಷೇಪವಿದೆ. ಹಳೆಯ ವಾಹನಗಳಿಗೆ ವಿಧಿಸುತ್ತಿರುವ ಹಸಿರು ತೆರಿಗೆ ಕೈಬಿಡಬೇಕು ಎಂಬುದೂ ನಮ್ಮ ಒತ್ತಾಯ. ನಮ್ಮ ಒಟ್ಟಾರೆ ಬೇಡಿಕೆ ಪತ್ರವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಶುಕ್ರವಾರ ಸಲ್ಲಿಸಲಿದ್ದೇವೆ' ಎಂದರು.

ಸಂಘದ ಉಪಾಧ್ಯಕ್ಷರಾದ ಎನ್. ಶ್ರೀನಿವಾಸ ರಾವ್, ಯು.ಶ್ರೀನಿವಾಸ್ ಹಾಗೂ ಪ್ರಧಾನ ಕಾರ್ಯದರ್ಶಿ ಆರ್. ವಿ.ಪ್ರಕಾಶ್ ಇದ್ದರು.

'ಬ್ಯಾಟರಿ ಮರುಬಳಕೆಗೆ ಉತ್ತೇಜನ'

ಪ್ರಜಾವಾಣಿ ವಾರ್ತೆ



ವರ್ಲ್ಡ್ ಸ್ಕ್ರಾಪ್ ರೀಸೈಕ್ಲಿಂಗ್ ಸಂಸ್ಥೆಯ ಸಂಸ್ಥಾಪಕ ಹಾಗೂ ಸಿಇಒ ಟಿ.ಕೆ.ಭಾಸ್ಕರನ್, ಬ್ರಿಜೇಶ್ ಕುಮಾರ್, ಉಧ್ವಾ ಸಂಸ್ಥೆಯ ಸಂಸ್ಥಾಪಕ ಹಾಗೂ ಸಿಇಒ ವೆಂಕಟರೆಡ್ಡಿ ಡಿ.ಪಾಟೀಲ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಂಡಳಿ ನಿರ್ದೇಶಕ ಮಹಾಂತೇಶ್ ಪಾಟೀಲ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು

ಬೆಂಗಳೂರು: 'ಬ್ಯಾಟರಿ ಮರುಬಳಕೆಗೆ ಉತ್ತೇಜನ ನೀಡುವುದು ಹಾಗೂ ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದಕ್ಕೆ ನಾವು ಹೆಚ್ಚಿನ ಆದ್ಯತೆ ನೀಡುತ್ತೇವೆ' ಎಂದು ಉಧ್ವಾ ಮ್ಯಾನೇಜ್‌ಮೆಂಟ್ ಸಂಸ್ಥೆಯ ಸಂಸ್ಥಾಪಕ ಮತ್ತು ಸಿಇಒ ವೆಂಕಟರೆಡ್ಡಿ ಡಿ. ಪಾಟೀಲ ಹೇಳಿದರು.

ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಪರಿಸರ ಹಾಗೂ ಅರಣ್ಯ ಸಚಿವಾಲಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಡಿಜಿಟಲ್ ಇಂಡಿಯಾ ಮತ್ತು ಬ್ಯೂರೊ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ ಸಹಯೋಗದಲ್ಲಿ ಉಧ್ವಾ ಸಂಸ್ಥೆ ಆಯೋಜಿಸಿದ್ದ 'ಮರು ವಾಣಿಜ್ಯ-ಜಾಗತಿಕ ಬ್ಯಾಟರಿ ಮರುಬಳಕೆ' ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಭಾರತದಲ್ಲಿ ಬ್ಯಾಟರಿ ಮರುಬಳಕೆ ಮಾಡುವ ಕ್ಷೇತ್ರಗಳಲ್ಲಿ ಹೆಚ್ಚಿನ ವ್ಯಾಪಾರ ನಡೆಸಲು ಉತ್ತೇಜಿಸುವುದು ಹಾಗೂ ಅಭಿವೃದ್ಧಿಗೆ ಮನ್ನಣೆ ನೀಡುವುದು ನಮ್ಮ ಗುರಿಯಾಗಿದೆ' ಎಂದು ಹೇಳಿದರು.

ಜೋಯಾಲುಕ್ಕಾಸ್‌ನಲ್ಲಿ ರಿಯಾಯಿತಿ ಮಾರಾಟ

ಬೆಂಗಳೂರು: ಚಿನ್ನಾಭರಣಗಳ ಮಾರಾಟ ಮಳಿಗೆಯಾದ ಜೋಯಾಲುಕ್ಕಾಸ್, ಆಭರಣ ತಯಾರಿಕಾ ವೆಚ್ಚದ ಮೇಲೆ ಗ್ರಾಹಕರಿಗೆ ಶೇಕಡ 50ರಷ್ಟು ರಿಯಾಯಿತಿ ಘೋಷಿಸಿದೆ. ಈ ರಿಯಾಯಿತಿಯು ಎಲ್ಲ ಬಗೆಯ ಆಭರಣಗಳಿಗೆ ಅನ್ವಯ ಆಗಲಿದೆ.

'ಆಭರಣ ತಯಾರಿಕಾ ವೆಚ್ಚವು ನಮ್ಮ ಮಳಿಗೆಗಳಲ್ಲಿ ಅತ್ಯಂತ ಸ್ಪರ್ಧಾತ್ಮಕವಾಗಿದೆ. ಈಗ ಘೋಷಿಸಿರುವ ಶೇ 50ರ ರಿಯಾಯಿತಿಯಿಂದಾಗಿ ಗ್ರಾಹಕರಿಗೆ ದೊಡ್ಡ ಪ್ರಮಾಣದಲ್ಲಿ ಹಣ ಉಳಿತಾಯ ಆಗಲಿದೆ' ಎಂದು ಸಮೂಹದ ಅಧ್ಯಕ್ಷ ಜೋಯ್ ಅಲುಕ್ಕಾಸ್ ಹೇಳಿದ್ದಾರೆ.

ಈ ಕೊಡುಗೆಯು ಜೋಯಾಲುಕ್ಕಾಸ್‌ನ ಎಲ್ಲ ಮಳಿಗೆಗಳಲ್ಲಿ ಲಭ್ಯವಿದ್ದು, ಮಾರ್ಚ್ 14ರಂದು ಕೊನೆಯಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

'ಐ– ಪ್ಯಾಡ್ ಮರಳಿಸದೆ ಇದ್ದರೆ ಚುನಾವಣೆಗೆ ನಿಲ್ಲಲಾಗದು'

ಬೆಂಗಳೂರು: 'ಬಿಬಿಎಂಪಿ ವತಿಯಿಂದ ನೀಡಿರುವ ಐ-ಪ್ಯಾಡ್‌ಗಳನ್ನು ಮರಳಿಸದಿರುವ ಪಾಲಿಕೆಯ ಮಾಜಿ ಸದಸ್ಯರು ಮುಂದಿನ ಬಾರಿ ಚುನಾವಣೆಗೆ ನಿಲ್ಲಲು ಸಾಧ್ಯವಾಗುವುದಿಲ್ಲ' ಎಂದು ಮಂಜುನಾಥ ಪ್ರಸಾದ್ ತಿಳಿಸಿದರು.

'ಪಾಲಿಕೆ ಸದಸ್ಯರಿಗೆ ವಿತರಿಸಿದ್ದ ಐ-ಪ್ಯಾಡ್‌ಗಳು ಪಾಲಿಕೆಯ ಸ್ವತ್ತು. ಅಧಿಕಾರಾವಧಿ ಮುಗಿದ ಬಳಿಕ ಸದಸ್ಯರು ಅದನ್ನು ಹಿಂತಿರುಗಿಸಬೇಕು. ಎರಡೆರಡು ಬಾರಿ ಸೂಚನೆ ನೀಡಿದರೂ ಅನೇಕರು ಮರಳಿಸಿಲ್ಲ. ಚುನಾವಣೆಗೆ ನಾಮಪತ್ರ ಸಲ್ಲಿಸುವಾಗ ಅವರು ಪಾಲಿಕೆಯ ಏನಾದರೂ ಬಾಕಿ ಉಳಿಸಿಕೊಂಡಿದ್ದಾರೆಯೇ ಎಂಬ ಬಗ್ಗೆಯೂ ಮಾಹಿತಿ ನೀಡಬೇಕಾಗುತ್ತದೆ. ಐ-ಪ್ಯಾಡ್ ಮರಳಿಸದವರ ನಾಮಪತ್ರ ತಿರಸ್ಕೃತಗೊಳ್ಳಲಿದೆ' ಎಂದು ತಿಳಿಸಿದರು.

ಬಿಬಿಎಂಪಿಯ ಮಾಹಿತಿ ತಂತ್ರಜ್ಞಾನ ವಿಭಾಗವು ಪಾಲಿಕೆಯ ಚುನಾಯಿತ ಸದಸ್ಯರಿಗೆ ಹಾಗೂ ನಾಮನಿರ್ದೇಶಿತ ಸದಸ್ಯರಿಗೆ 2018–19ನೇ ಸಾಲಿನಲ್ಲಿ ಆ್ಯಪಲ್ ಕಂಪನಿಯ ಐ-ಪ್ಯಾಡ್‌ಗಳನ್ನು ಒದಗಿಸಿತ್ತು. ಇದಕ್ಕಾಗಿ ಒಟ್ಟು ₹ 99 ಲಕ್ಷ ವೆಚ್ಚವಾಗಿತ್ತು. ಕೌನ್ಸಿಲ್ ಸಭೆಗಳ ಸೂಚನಾ ಪತ್ರ, ಕಾರ್ಯಸೂಚಿಗಳು ಹಾಗೂ ಪ್ರಮುಖ ತೀರ್ಮಾನಗಳ ಕುರಿತು ಐ-ಪ್ಯಾಡ್‌ಗಳ ಮೂಲಕವೇ ಸದಸ್ಯರಿಗೆ ಮಾಹಿತಿ ನೀಡಲಾಗುತ್ತಿತ್ತು. 198 ಮಾಜಿ ಸದಸ್ಯರಲ್ಲಿ 100ಕ್ಕೂ ಅಧಿಕ ಮಂದಿ ಐ- ಪ್ಯಾಡ್ ಮರಳಿಸಿಲ್ಲ.

ವಿದ್ಯುತ್ ವ್ಯತ್ಯಯ 8ರಿಂದ

ಬೆಂಗಳೂರು: ಜಯದೇವ ಉಪವಿಭಾಗ ವ್ಯಾಪ್ತಿಯಲ್ಲಿ ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಇದೇ 8ರಿಂದ 12ರವರೆಗೆ ಬೆಳಿಗ್ಗೆ 10.30ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಬಿಟಿಎಂ ಬಡಾವಣೆಯ ಮೊದಲ ಮತ್ತು ಎರಡನೇ ಹಂತ, ಜೆ.ಪಿ. ನಗರ ಬಡಾವಣೆಯ 2, 3, 4 ಮತ್ತು 5ನೇ ಹಂತ. ದಾಲ್ಮಿಯಾ ಸಿಗ್ನಲ್, ಡಾಲರ್ಸ್ ಬಡಾವಣೆ, 100 ಅಡಿ ವರ್ತುಲ ರಸ್ತೆ, ಮದೀನಾ ನಗರ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

‘ಗುತ್ತಿಗೆ ಕಾರ್ಮಿಕರ ಕನಿಷ್ಠ ವೇತನಕ್ಕೆ ಕಾಯ್ದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಕನಿಷ್ಠ ವೇತನ ನಿಗದಿ ಮಾಡುವ ಸಂಬಂಧ ಹೊಸ ಕಾಯ್ದೆ ಜಾರಿಗೆ ತರಲಾಗುವುದು ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ತಿಳಿಸಿದರು.

ರಾಷ್ಟ್ರೀಯ ಸುರಕ್ಷತಾ ಪರಿಷತ್ತು ಮತ್ತು ಭಾರತ್ ಎಲೆಕ್ಟ್ರಾನಿಕ್ ಲಿಮಿಟೆಡ್(ಬಿಇಎಲ್) ಆಯೋಜಿಸಿದ್ದ 50ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ಮತ್ತು ಕೆಲಸದ ಅವಧಿ ನಿಗದಿ ಮಾಡುವ ಅಗತ್ಯ ಇದೆ ಎಂದು ಹೇಳಿದರು.

ರಾಜ್ಯದಲ್ಲಿ ಗುತ್ತಿಗೆ ಕಾರ್ಮಿಕರನ್ನು ಸರಬರಾಜು ಮಾಡುವ 18 ಸಾವಿರಕ್ಕೂ ಹೆಚ್ಚು ಸಂಸ್ಥೆಗಳಿವೆ. ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ವಲಯಗಳಲ್ಲಿ 22 ಲಕ್ಷಕ್ಕೂ ಅಧಿಕ ಗುತ್ತಿಗೆ ಕಾರ್ಮಿಕರಿದ್ದಾರೆ. ಕಡಿಮೆ ವೇತನಕ್ಕೆ ಹೆಚ್ಚಿನ ಅವಧಿ ದುಡಿಸಿಕೊಳ್ಳುತ್ತಿರುವ ಸಮಸ್ಯೆ ಹೆಚ್ಚಾಗಿದೆ ಎಂದರು.



ಕಾರ್ಯಕ್ರಮದಲ್ಲಿ ಕೆ. ಶ್ರೀನಿವಾಸ್, ಸಚಿವ ಶಿವರಾಮ ಹೆಬ್ಬಾರ್, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಘಟಕ ಮುಖ್ಯಸ್ಥ ಆರ್.ಪಿ. ಮೋಹನ್, ಸನ್‌ಸೆರಾ ಎಂಜಿನಿಯರಿಂಗ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಎಫ್.ಆರ್.ಸಿಂಘ್ವಿ ಇದ್ದರು —ಪ್ರಜಾವಾಣಿ ಚಿತ್ರ

ಕೋವಿಡ್ ಕಾರಣಕ್ಕೆ ಶೇ 70ರಷ್ಟು ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಕಾರ್ಮಿಕ ಇಲಾಖೆ ಅವರ ಬೆನ್ನಿಗೆ ನಿಂತು 5 ತಿಂಗಳಲ್ಲಿ 85 ಲಕ್ಷ ಕಾರ್ಮಿಕರಿಗೆ ಊಟದ ವ್ಯವಸ್ಥೆಯನ್ನು ಮಾಡಿತ್ತು. ಕಾರ್ಖಾನೆಗಳ ಪುನರ್ ಆರಂಭಕ್ಕೂ ಸಮಸ್ಯೆಗಳು ಎದುರಾಗಿವೆ. ಕಾರ್ಮಿಕರು ಮತ್ತು ಕಾರ್ಖಾನೆಗಳ ಮಾಲೀಕರ ನಡುವಿನ ಸಮಸ್ಯೆ ಪರಿಹರಿಸುವುದು ಇಲಾಖೆಗೆ ಸವಾಲಿನ ಕೆಲಸವಾಗಿದೆ ಎಂದು ಹೇಳಿದರು.

‘ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆ 50 ವರ್ಷಗಳಿಂದ ರಾಷ್ಟ್ರೀಯ ಸುರಕ್ಷತಾ ದಿನಾಚಣೆ ಮಾಡುತ್ತಿದೆ. ಕಾರ್ಖಾನೆಗಳು, ಬಾಯ್ಲರುಗಳಲ್ಲಿ ಅಪಘಾತಗಳ ಸಂಖ್ಯೆ ಇಳಿಮುಖವಾಗಬೇಕು. ಎಲ್ಲ ಮಕ್ಕಳಿಗೂ ಶಾಲೆ ಮತ್ತು ಕಾಲೇಜು ಶಿಕ್ಷಣದಲ್ಲೇ ಸುರಕ್ಷ ಜೀವನದ ಬಗ್ಗೆ ಅರಿವು ಮೂಡಿಸಬೇಕಿದೆ’ ಎಂದರು.

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕೆ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಕಾರ್ಯದರ್ಶಿ ಕೆ. ಶ್ರೀನಿವಾಸ್ ಮಾತನಾಡಿ, ‘ಕೋವಿಡ್ ಸಂದರ್ಭದಲ್ಲಿ ಕಾರ್ಖಾನೆ, ಕೈಗಾರಿಕೆ ಮತ್ತು ಕಾರ್ಮಿಕ ವಲಯಗಳು ತೀವ್ರ ಸಂಕಷ್ಟ ಅನುಭವಿಸಿದ್ದವು. ಲಾಕ್‌ಡೌನ್ ತೆರವಾದ ಬಳಿಕ ಉದ್ಯಮ ಕ್ಷೇತ್ರಗಳಲ್ಲಿ ಸಾಂಕ್ರಾಮಿಕ ರೋಗ ಹರಡದಂತೆ ಮಾರ್ಗಸೂಚಿಗಳನ್ನು ತಯಾರಿಸಿದ್ದು, ಎಲ್ಲರೂ ಪಾಲಿಸಬೇಕು’ ಎಂದರು.

ಇಬ್ಬರಿಗೆ ಫಾದರ್ ಚಸರಾ ದತ್ತಿ ಪ್ರಶಸ್ತಿ



ವೆಂಕಟರಾಮಯ್ಯ



ಎ.ಆರೋಗ್ಯಪ್ಪ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ನೀಡಲಾಗುವ ‘ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿ’ಗೆ ಹಿರಿಯ ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ ಹಾಗೂ ಸಂತ ಜೋಸೆಫರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಆರೋಗ್ಯಪ್ಪ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ತಲಾ ₹10 ಸಾವಿರ ನಗದು, ಸ್ಮರಣಿಕೆ ಹಾಗೂ ಫಲತಾಂಬೂಲ ಒಳಗೊಂಡಿವೆ.

‘ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಪದ್ಮರಾಜ ದಂಡಾವತಿ, ಕೆ.ರಾಜಕುಮಾರ್ ಹಾಗೂ ಗೌರವ ಕೋಶಾಧ್ಯಕ್ಷ ಪಿ.ಮಲ್ಲಿಕಾರ್ಜುನಪ್ಪ ಅವರಿದ್ದ ಆಯ್ಕೆ ಸಮಿತಿಯು ಪ್ರಶಸ್ತಿಗೆ ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿದೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಅನುಪಮಾ, ಬಸವರಾಜ, ಮಂಜುನಾಥ್‌ಗೆ ಪ್ರಶಸ್ತಿ



ಅನುಪಮಾ



ಬಸವರಾಜ



ಮಂಜುನಾಥ್

ಬೆಂಗಳೂರು: ಎಚ್.ಎಸ್.ಅನುಪಮಾ, ಬಸವರಾಜ ಸಬರದ ಹಾಗೂ ಮಂಜುನಾಥ್ ಚಾಂದ್ ಅವರು ಡಾ.ಬರಗೂರು ಪ್ರತಿಷ್ಠಾನ ನೀಡುವ 2020ನೇ ಸಾಲಿನ ರಾಜಲಕ್ಷ್ಮಿ ಬರಗೂರು ಪುಸ್ತಕ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

‘ಅನುಪಮಾ ಅವರ ‘ಹೆಣ್ಣು ಹೆಜ್ಜೆ’ (ವಿಚಾರ ಸಾಹಿತ್ಯ), ಬಸವರಾಜ ಅವರ ‘ಬಯಲ ಬೆಳಕು’ (ವಿಮರ್ಶೆ) ಹಾಗೂ ಮಂಜುನಾಥ್ ಅವರ ‘ಕಾಡ ಸೆರಗಿನ ಸೂಡಿ’ (ಕಾದಂಬರಿ) ಕೃತಿಗಳು ಪ್ರಶಸ್ತಿಗೆ ಆಯ್ಕೆಯಾಗಿವೆ’ ಎಂದು ಪ್ರಕಟಣೆ ತಿಳಿಸಿದೆ. ಇದೇ 12ರಂದು ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಪ್ರಶಸ್ತಿಯು ತಲಾ ₹10 ಸಾವಿರ ಮೊತ್ತ ಹಾಗೂ ಫಲಕವನ್ನು ಒಳಗೊಂಡಿದೆ.

ಕನ್ನಡ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ: ಆಗ್ರಹ

ಪ್ರಜಾವಾಣಿ ವಾರ್ತೆ



ರವಿಕುಮಾರ್

ಬೆಂಗಳೂರು: ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರವನ್ನು ಭಾರತೀಯ ಭಾಷಾ ಸಂಸ್ಥಾನದಿಂದ (ಸಿಐಐಎಲ್) ಪ್ರತ್ಯೇಕಿಸಿ, ಸ್ವಾಯತ್ತ ಸ್ಥಾನಮಾನ ನೀಡುವಂತೆ ರಾಜ್ಯ ಸರ್ಕಾರ ತಕ್ಷಣವೇ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಬಿಜೆಪಿ ಸದಸ್ಯ ಎನ್. ರವಿಕುಮಾರ್ ವಿಧಾನ ಪರಿಷತ್‌ನಲ್ಲಿ ಒತ್ತಾಯಿಸಿದರು.

ಗುರುವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಸಿಐಐಎಲ್ ಅನ್ನೇ ಭಾರತೀಯ ಭಾಷಾ ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸುವ ಪ್ರಕ್ರಿಯೆ ಆರಂಭವಾಗಿದೆ. ಇದರಿಂದ ಸಿಐಐಎಲ್‌ನ ಸ್ಥಾನಮಾನ ಮತ್ತಷ್ಟು ಕುಗ್ಗಲಿದೆ. ಅಂತಹ ಬೆಳವಣಿಗೆಗೆ ಅವಕಾಶ ನೀಡಬಾರದು' ಎಂದರು.

ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ದೊರೆತು 12 ವರ್ಷ ಕಳೆದಿದೆ. ಆದರೆ, ಕನ್ನಡ ಅಧ್ಯಯನ ಕೇಂದ್ರಕ್ಕೆ ಈವರೆಗೂ ಸ್ವಾಯತ್ತ ಸಂಸ್ಥೆಯ ಸ್ಥಾನಮಾನ ದೊರಕಿಲ್ಲ. ತಮಿಳು ಭಾಷಾ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತ ಸ್ಥಾನಮಾನ ಇರುವುದರಿಂದ ₹ 25.04 ಕೋಟಿ ಅನುದಾನ ದೊರಕಿದೆ. ಕನ್ನಡ ಅಧ್ಯಯನ ಸಂಸ್ಥೆಗೆ ಸ್ವಾಯತ್ತತೆ ಇಲ್ಲದ ಕಾರಣದಿಂದ ಕೇವಲ ₹ 3.06 ಕೋಟಿ ಅನುದಾನ ನೀಡಲಾಗಿದೆ ಎಂದು ಹೇಳಿದರು.

ಕನ್ನಡ 2,500 ವರ್ಷಗಳ ಇತಿಹಾಸವಿರುವ ಭಾಷೆ. ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಸ್ಥಾಪನೆಗೆ ಮೈಸೂರು ವಿಶ್ವವಿದ್ಯಾಲಯ ಒಂದು ಕಟ್ಟಡ ಮತ್ತು 4 ಎಕರೆ ಜಮೀನನ್ನು ನೀಡಿದೆ. ಸಿಐಐಎಲ್ ಕಚೇರಿ ಕೂಡ ಮೈಸೂರಿನಲ್ಲೇ ಇದೆ. ಕನ್ನಡ ಅಧ್ಯಯನ ಕೇಂದ್ರವನ್ನೂ ಸ್ವಾಯತ್ತಗೊಳಿಸಿ, ಭಾಷೆಯ ಅಧ್ಯಯನ ಮತ್ತು ಬೆಳವಣಿಗೆಗೆ ಹೆಚ್ಚಿನ ಅನುದಾನ ಪಡೆಯಲು ಕೇಂದ್ರದ ಮೇಲೆ ಒತ್ತಡ ತರಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

'ಕಸ ನಿರ್ವಹಣೆಗೆ ಕಂಪನಿ ಬೇಡ'

ಬೆಂಗಳೂರು: 'ಬಿಬಿಎಂಪಿ ಕಸ ನಿರ್ವಹಣೆಗೆ ಪ್ರತ್ಯೇಕ ಕಂಪನಿ ಸ್ಥಾಪಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ತೀರ್ಮಾನವು ಕಸ ನಿರ್ವಹಣೆ ಬಳಕೆದಾರರ ಶುಲ್ಕದ ಹೆಸರಿನಲ್ಲಿ ಜನರನ್ನು ದೋಚಲು ಮಾಡಿರುವ ನಯವಂಚಕ ಕ್ರಮ' ಎಂದು ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ.

'ಬಿಬಿಎಂಪಿಯ ಪ್ರಧಾನ ಕೆಲಸ ಕಸ ನಿರ್ವಹಣೆ ಮುಂತಾದ ನಾಗರಿಕ ಸೌಲಭ್ಯ ಒದಗಿಸುವುದು. ಸ್ಥಳೀಯ ಆಡಳಿತದಲ್ಲಿ ನಾಗರಿಕರನ್ನು ಒಳಗೊಂಡು ನಗರದ ನಿರ್ವಹಣೆಯನ್ನು ಪಾಲಿಕೆ ಮಾಡಬೇಕಿದೆ' ಎಂದು ಪಕ್ಷ ಹೇಳಿದೆ.

'ವಾರ್ಷಿಕ ₹940 ಕೋಟಿ ವ್ಯವಹಾರದ ಬಿಬಿಎಂಪಿ ಕಸ ನಿರ್ವಹಣೆಗೆ ಪ್ರತ್ಯೇಕ ಕಂಪನಿ ಸ್ಥಾಪಿಸುವ ಮೂಲಕ ಆರಂಭದಲ್ಲಿ ಸರ್ಕಾರದ ಕಂಪನಿ ಎಂದು ಬಿಂಬಿಸಿ ಕ್ರಮೇಣ ಅದನ್ನು ಖಾಸಗಿಯವರಿಗೆ ವಹಿಸಿ ಜನರ ಸುಲಿಗೆಗೆ ಅನುವುಗೊಳಿಸುವ ಹುನ್ನಾರ ರಾಜ್ಯ ಸರ್ಕಾರದ್ದು' ಎಂದು ದಕ್ಷಿಣ ಸಮಿತಿಯ ಕಾರ್ಯದರ್ಶಿ ಕೆ.ಎನ್. ಉಮೇಶ್ ಹಾಗೂ ಉತ್ತರ ಜಿಲ್ಲಾ ಸಮಿತಿಯು ಕಾರ್ಯದರ್ಶಿ ಎನ್. ಪ್ರತಾಪ್ ಸಿಂಹ ದೂರಿದ್ದಾರೆ.

ಟಿಸಿ: ಪರವಾನಗಿ ಪ್ರತಿ ಸಲ್ಲಿಸಲು ನಿರ್ದೇಶನ

ಬೆಂಗಳೂರು: ಪಾದಚಾರಿ ಮಾರ್ಗಗಳಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸಲು ಪಡೆದಿರುವ ಪರವಾನಗಿಯ ಪ್ರತಿ ಒದಗಿಸುವಂತೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ಹೈಕೋರ್ಟ್ ನಿರ್ದೇಶನ ನೀಡಿದೆ.

2003ರ ವಿದ್ಯುತ್ ಕಾಯ್ದೆ ಪ್ರಕಾರ ಸ್ಥಳೀಯ ಪ್ರಾಧಿಕಾರಗಳಿಂದ ಯಾವುದೇ ಅನುಮತಿ ಪಡೆಯುವ ಅಗತ್ಯವಿಲ್ಲ ಎಂದು ಬೆಸ್ಕಾಂ ವಿವರಣೆ ಸಲ್ಲಿಸಿದ ಬಳಿಕ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ನಿರ್ದೇಶನ ನೀಡಿತು.

ಹೋರಾಟ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಕೆ. ವಿರೂಪಾಕ್ಷಪ್ಪ

'ತಾರ್ಕಿಕ ಅಂತ್ಯದವರೆಗೆ ನಿಲ್ಲದು ಕುರುಬರ ಎಸ್‌ಟಿ ಹೋರಾಟ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಭೆಯಲ್ಲಿ ಸಚಿವ ಈಶ್ವರಪ್ಪ, ಎಚ್.ವಿಶ್ವನಾಥ್ ಭಾಗಿ
- ಮುಂದಿನ ಹೋರಾಟದ ರೂಪುರೇಷೆ ಶೀಘ್ರದಲ್ಲೇ ನಿರ್ಧಾರ
- ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಭೇಟಿಯಾಗಲು ಚಿಂತನೆ

ನಮ್ಮ ಹೋರಾಟಕ್ಕೆ ರಾಜ್ಯ ಸರ್ಕಾರ ಈವರೆಗೆ ಸ್ಪಂದಿಸಿಲ್ಲ. **ಕೇಂದ್ರ ಸರ್ಕಾರದ ಗಮನ ಸೆಳೆಯಲು ದಕ್ಷಿಣ ಭಾರತದ ಕುರುಬರ ಸಮಾವೇಶ ನಡೆಸಬೇಕಿದೆ**

– ಈಶ್ವರಾನಂದಪುರಿ ಸ್ವಾಮೀಜಿ, ಹೊಸದುರ್ಗ ಶಾಖಾಮಠ

ಬೆಂಗಳೂರು: 'ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿ ನಡೆಯುತ್ತಿರುವ ಹೋರಾಟ ತಾರ್ಕಿಕ ಅಂತ್ಯ ಕಾಣುವವರೆಗೆ ಮುಂದುವರಿಯಲಿದೆ. ಮುಂದಿನ ಹೋರಾಟದ ರೂಪುರೇಷೆಗಳನ್ನು ಶೀಘ್ರದಲ್ಲೇ ನಿರ್ಧರಿಸಲಾಗುವುದು' ಎಂದು ಹೋರಾಟ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಕೆ. ವಿರೂಪಾಕ್ಷಪ್ಪ ಹೇಳಿದರು.

ಮೌರ್ಯ ಹೋಟೆಲ್ ಸಭಾಂಗಣದಲ್ಲಿ ಗುರುವಾರ ನಡೆದ ಹೋರಾಟ ಸಮಿತಿಯ ರಾಜ್ಯಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

'ಸರ್ಕಾರದ ಗಮನ ಸೆಳೆಯಲು ಹೋರಾಟ ನಡೆಸಲಾಗುತ್ತಿದೆ. ನಮ್ಮ ಹೋರಾಟ ಯಾರ ಪರವೂ ಅಲ್ಲ, ವಿರುದ್ಧವೂ ಅಲ್ಲ. ನಮ್ಮ ಹೋರಾಟಕ್ಕೆ ರಾಜ್ಯ ಸರ್ಕಾರ ಈವರೆಗೆ ಸ್ಪಂದಿಸಿಲ್ಲ. ಸಚಿವ ಈಶ್ವರಪ್ಪ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಭೇಟಿಗೆ ಸಮಯ ನಿಗದಿ ಪಡಿಸಬೇಕಿದೆ' ಎಂದು ಹೊಸದುರ್ಗ ಶಾಖಾಮಠದ ಈಶ್ವರಾನಂದಪುರಿ ಸ್ವಾಮೀಜಿ ಹೇಳಿದರು.

'ಯಾವುದೇ ಪಕ್ಷಕ್ಕೆ ಸೀಮಿತವಾದ ಸಮಾಜ ನಮ್ಮದಲ್ಲ. ಕೊಡಗಿನ ಕುರುಬರು ಈಗಾಗಲೇ ಎಸ್‌ಟಿ ಪಟ್ಟಿಯಲ್ಲಿ ಇರುವುದರಿಂದ ಅದನ್ನೇ ಇಡೀ ರಾಜ್ಯಕ್ಕೆ ವಿಸ್ತರಿಸಬೇಕು. ಹೀಗಾಗಿ, ಕುಲಶಾಸ್ತ್ರೀಯ ಅಧ್ಯಯನದ ಅಗತ್ಯ ಇಲ್ಲ' ಎಂದೂ ಪ್ರತಿಪಾದಿಸಿದರು.

'70 ವರ್ಷಗಳಿಂದ ಕುರುಬರಿಗೆ ಮೀಸಲಾತಿ ಪಡೆಯುವ ಸಂಬಂಧ ಯಾರೂ ಮಾತನಾಡದೆ, ಈಗ ಸಮಾಜದ ಗುರುಗಳು ಹೋರಾಟ ಆರಂಭಿಸಿದ ಬಳಿಕ ಎಲ್ಲರೂ ಎಚ್ಚೆತ್ತುಕೊಂಡಿರುವುದು ದುರ್ದೈವ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಜೆಡಿಎಸ್ ಶಾಸಕ ಬಂಡೆಪ್ಪ ಕಾಶೆಂಪೂರ ಮಾತನಾಡಿ, 'ಹೋರಾಟದ ಕಾವು ಆರದ ರೀತಿಯಲ್ಲಿ ಹೋರಾಟ ಮುಂದುವರಿಯಬೇಕಿದೆ' ಎಂದರು.

'ಕುರುಬರನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಬಾರದೆಂಬ ಸಂಸದ ವಿ .ಶ್ರೀನಿವಾಸ್ ಪ್ರಸಾದ್ ನೀಡಿರುವ ಹೇಳಿಕೆ ಖಂಡನಾರ್ಹ' ಎಂದು ಸಮಿತಿಯ ಕಾರ್ಯಾಧ್ಯಕ್ಷ ಕೆ. ಮುಕುಡಪ್ಪ ಹೇಳಿದರು.

ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್, 'ಪ್ರತ್ಯೇಕ ಹೋರಾಟ, ಧರಣಿ ಬೇಡ. ಸರ್ಕಾರ ಜಾತಿಗಣತಿ ವರದಿ ಅಂಗೀಕರಿಸಿ ಮೀಸಲಾತಿ ಜಾರಿಗೊಳಿಸಬೇಕು. ಮೀಸಲಾತಿ ಕುರಿತು ರಾಜ್ಯ ಸರ್ಕಾರದ ಉದ್ದೇಶಿತ ಸಮಿತಿ ರಚನೆಯೂ ಅಗತ್ಯ ಇಲ್ಲ. ಸಂಘಟಿತ ಹೋರಾಟ ಗಟ್ಟಿಯಾಗಬೇಕು' ಎಂದರು.

'ಪಾದಯಾತ್ರೆ ನಿರೀಕ್ಷೆ ಮೀರಿ ಯಶಸ್ಸು ಕಂಡಿದೆ. ಏಪ್ರಿಲ್ 3ರಂದು ಅದರ ಲೆಕ್ಕ ಪತ್ರ ನೀಡುವೆ' ಎಂದು ಸಭೆಯಲ್ಲಿ ಕಾಗಿನೆಲೆ ಕನಕಗುರು ಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು.

'ಜಲ ಸಂರಕ್ಷಣೆ ಮೇಳ'ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ



ಜಲ ಸಂರಕ್ಷಣೆ ಮೇಳದಲ್ಲಿ ತಂತ್ರಜ್ಞಾನಗಳ ಮಾಹಿತಿ ಪಡೆದುಕೊಂಡ ಯುವತಿಯರು.

ಬೆಂಗಳೂರು: ತ್ಯಾಜ್ಯ ನೀರಿನ ಸಂಸ್ಕರಣೆ, ಮರುಬಳಕೆ ಹಾಗೂ ಜಲ ಸಂರಕ್ಷಣೆಯ ಕುರಿತು ಆಧುನಿಕ ವಿಧಾನ ಮತ್ತು ತಂತ್ರಜ್ಞಾನಗಳನ್ನು ಪರಿಚಯಿಸುವ ಉದ್ದೇಶದಿಂದ ವಾಟರ್ ಇಂಡಿಯಾ ಸಂಸ್ಥೆಯು 'ಜಲ ಉತ್ಸವ' ಶೀರ್ಷಿಕೆಯಡಿ ಜಲ ಸಂರಕ್ಷಣೆ ಮೇಳವನ್ನು ಮಾನ್ಯತಾ ಟೆಕ್ ಪಾರ್ಕ್ ಬಳಿಯ ಮ್ಯಾನ್‌ಪೋ ಕನ್ವೆಂಷನ್ ಸೆಂಟರ್‌ನಲ್ಲಿ ಆಯೋಜಿಸಿದೆ.

ಮೇಳಕ್ಕೆ ಅಧಿಕೃತವಾಗಿ ಗ್ರಾಹಕರಿಂದಲೇ ಗುರುವಾರ ಚಾಲನೆ ನೀಡಲಾಯಿತು. ಮಾ.6ರವರೆಗೆ ಈ ಮೇಳ ನಡೆಯಲಿದೆ.

'ಮೂರು ದಿನಗಳು ನಡೆಯುವ ಮೇಳದಲ್ಲಿ ನೀರು ಶುದ್ಧೀಕರಣ ಯಂತ್ರಗಳ ಪ್ರದರ್ಶನ, ಮಳೆನೀರು ಸಂಗ್ರಹ ಹಾಗೂ ನೀರಿನ ಸಂರಕ್ಷಣೆ ವಿಧಾನಗಳು ಮತ್ತು ಆಧುನಿಕ ತಂತ್ರಜ್ಞಾನಗಳ ಮಾಹಿತಿಯನ್ನು ಸಾರ್ವಜನಿಕರು ಉಚಿತವಾಗಿ ಪಡೆದುಕೊಳ್ಳಬಹುದು' ಎಂದು ಮೇಳದ ಆಯೋಜಕ ರಾಜೇಶ್ ತಿಳಿಸಿದರು.

'ತಮ್ಮ ದಿನನಿತ್ಯದ ಬಳಕೆಯ ನಡುವೆಯೂ ನೀರಿನ ಶೇಖರಣೆ ಹಾಗೂ ಸಂಸ್ಕರಣೆ ಕುರಿತು ವಸ್ತು ಪ್ರದರ್ಶನದಲ್ಲಿ ತಿಳಿದುಕೊಳ್ಳಬಹುದು. ವಿಶ್ವದಾದ್ಯಂತ ಹೆಚ್ಚಾಗುತ್ತಿರುವ ತಾಪಮಾನದ ಪರೋಕ್ಷ ಪರಿಣಾಮ ನೀರಿನ ಮೇಲೆ ಬಿದ್ದಿದೆ. ಇದರಿಂದ ಬಳಕೆಗೆ ಯೋಗ್ಯವಾದ ನೀರಿನ ಪ್ರಮಾಣ ಕುಸಿಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನೀರಿನ ಸಂರಕ್ಷಣೆ ಹಾಗೂ ಮರುಬಳಕೆ ವಿಧಾನಗಳ ಪ್ರದರ್ಶನಕ್ಕೆ ಮೇಳ ವೇದಿಕೆ ಕಲ್ಪಿಸಿದೆ' ಎಂದರು.

'ಮಲಿನಗೊಂಡ ನೀರಿನ ಮರುಬಳಕೆ ವಿಧಾನ, ಶುದ್ಧೀಕರಣ ಕುರಿತು 120ಕ್ಕೂ ಹೆಚ್ಚು ನೀರಿನ ಶುದ್ಧೀಕರಣ ಕಂಪನಿಗಳು ಪ್ರದರ್ಶನದಲ್ಲಿ ಭಾಗ ವಹಿಸಿವೆ. ಮೇಳಕ್ಕೆ ಬರುವ ಸಾರ್ವಜನಿಕರಿಗೆ ಮಾದರಿಗಳು ಹಾಗೂ ಪ್ರಾತ್ಯಕ್ಷಿಕೆಗಳ ಮೂಲಕ ವಿವರಿಸಲಾಗುತ್ತಿದೆ. ಜಪಾನ್, ಜರ್ಮನ್, ಚೀನಾ ಹಾಗೂ ಭಾರತದ ವಿವಿಧ ರಾಜ್ಯಗಳ ಕಂಪನಿಗಳು ಭಾಗಿಯಾಗಿವೆ' ಎಂದು ಮಾಹಿತಿ ನೀಡಿದರು.

ಮೆಲ್ಟಿಂಗ್ ಪಾಟ್ 'ದಿ ಎ.ಐ.ಎಂ' ಸರಣಿ ಬಿಡುಗಡೆ

ಬೆಂಗಳೂರು: ಮಹತ್ವಾಕಾಂಕ್ಷೆ, ಸ್ಫೂರ್ತಿ ಮತ್ತು ಪ್ರೇರಣೆ (ಎ.ಐ.ಎಂ) ಸರಣಿಯ ಎರಡು ಸೀಸನ್‌ಗಳ ಯಶಸ್ಸಿನ ನಂತರ 'ದಿ ಮೆಲ್ಟಿಂಗ್ ಪಾಟ್ ಪಾಡ್‌ಕಾಸ್ಟ್' ಸಂಸ್ಥೆಯು 10 ಉದ್ಯಮಿಗಳನ್ನು ಒಳಗೊಂಡ ವಿಶೇಷ ಸರಣಿಯ ಮೊದಲ ಕಂತನ್ನು ಫೆಬ್ರುವರಿ 26ರಂದು ಬಿಡುಗಡೆ ಮಾಡಿದೆ.

ಚಿಕ್ಕ ವಯಸ್ಸಿನಲ್ಲಿಯೇ ಉದ್ಯಮ ಪ್ರಾರಂಭಿಸಿದವರನ್ನು ಮತ್ತು ಅವರು ಎಲ್ಲರಿಗೂ ಸ್ಫೂರ್ತಿಯಾಗಿರುವುದನ್ನು ಈ ಸರಣಿಯಲ್ಲಿ ತೋರಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ. 'ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ಅತಿಥಿಗಳೊಂದಿಗೆ ಮಾತನಾಡುವುದರಿಂದ, ಅವರ ಕಥೆಗಳನ್ನು ಜಗತ್ತಿಗೆ ಹೇಳುವುದು ಎಷ್ಟು ಮುಖ್ಯ ಎನ್ನುವುದಷ್ಟೇ ಅಲ್ಲದೆ, ಜಗತ್ತಿನೆಲ್ಲೆಡೆ ಬದಲಾವಣೆಗೆ ಕಾರಣವಾಗಬಲ್ಲ ಅವರ ಸಾಮರ್ಥ್ಯ ಗುರುತಿಸಲು ಕೂಡ ಸಾಧ್ಯವಾಯಿತು' ಎಂದು ಮೆಲ್ಟಿಂಗ್ ಪಾಟ್ ಪಾಡ್‌ಕಾಸ್ಟ್‌ನ ಸ್ಥಾಪಕ ಪಾಯಲ್ ನಾಯರ್ ಹೇಳಿದ್ದಾರೆ.

ಪ್ರತಿ ವಾರವೂ ಎರಡು ಕಂತುಗಳು ಬಿಡುಗಡೆ ಆಗಲಿದ್ದು, ಸ್ಪಾಟಿಫೈ, ಆ್ಯಪಲ್ ಪಾಡ್‌ಕಾಸ್ಟ್, ಗೂಗಲ್ ಪಾಡ್‌ಕಾಸ್ಟ್ ನಂತಹ ವೇದಿಕೆಗಳಲ್ಲಿ ಇದು ಲಭ್ಯವಿದೆ.

ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕ ಪಟ್ಟಿಯಲ್ಲಿ ದೇಶದ 111 ನಗರಗಳ ಪೈಕಿ ಮೊದಲ ಸ್ಥಾನ

ಬೆಂಗಳೂರಿನ ಕೈ ಹಿಡಿದ ಆರ್ಥಿಕ ಸಾಮರ್ಥ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕ ಪಟ್ಟಿಯಲ್ಲಿ 2019ರಲ್ಲಿ 58ನೇ ಸ್ಥಾನದಲ್ಲಿದ್ದ ಬೆಂಗಳೂರು ಈ ಬಾರಿ ಮೊದಲ ಸ್ಥಾನ ಪಡೆದುದರ ಹಿಂದಿನ ಗುಟ್ಟು ಈ ನಗರದ ಆರ್ಥಿಕ ಸಾಮರ್ಥ್ಯ.

ನಗರದ ಆರ್ಥಿಕ ಸಾಮರ್ಥ್ಯ, ಜೀವನ ಗುಣಮಟ್ಟ ಹಾಗೂ ಸುಸ್ಥಿರ ಪರಿಸರ ನಿರ್ವಹಣೆ ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕವನ್ನು ನಿರ್ಧರಿಸುವ ಪ್ರಮುಖ ಅಂಶಗಳು. ಈ ಅಂಶಗಳ ಬಗ್ಗೆ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಪ್ರತಿವರ್ಷ ಸ್ವತಂತ್ರವಾಗಿ ಸಮೀಕ್ಷೆ ನಡೆಸಿ ಈ ಸೂಚ್ಯಂಕ ಪಟ್ಟಿಯನ್ನು ಬಿಡುಗಡೆ ಮಾಡುತ್ತದೆ. ನಗರವು 100ರಲ್ಲಿ ಎಷ್ಟು ಅಂಕಗಳನ್ನು ಪಡೆಯುತ್ತದೆ ಎಂಬುದನ್ನು ಆಧರಿಸಿ ಸೂಚ್ಯಂಕವನ್ನು ನಿರ್ಧರಿಸಲಾಗುತ್ತದೆ. ನಗರದ ವ್ಯವಸ್ಥೆಗಳ ಕುರಿತು ಜನಾಭಿಪ್ರಾಯವನ್ನೂ ಸಚಿವಾಲಯವು ಸಂಗ್ರಹಿಸುತ್ತದೆ.

ಸೂಚ್ಯಂಕ ನಿರ್ಧರಿಸುವ ಸಮೀಕ್ಷೆ ನಡೆದ ದೇಶದ 111 ನಗರಗಳ ಪೈಕಿ ಆರ್ಥಿಕ ಸಾಮರ್ಥ್ಯದಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ಆರ್ಥಿಕ ಸಾಮರ್ಥ್ಯದಲ್ಲಿ ದೇಶದ ಇತರ ನಗರಗಳಿಗಿಂತ ಬಹಳಷ್ಟು ಮುಂದಿರುವುದು ಒಟ್ಟಾರೆ ಸೂಚ್ಯಂಕದಲ್ಲೂ ಅಗ್ರ ಸ್ಥಾನ ಪಡೆಯಲು ನೆರವಾಗಿದೆ. ಸಮೀಕ್ಷೆ ನಡೆಸಲಾದ ದೇಶದ ನಗರಗಳ ಆರ್ಥಿಕ ಸಾಮರ್ಥ್ಯದ ಸರಾಸರಿ ಕೇವಲ 13.52. ಈ ಅಂಶದಲ್ಲಿ ಬೆಂಗಳೂರು ಪಡೆದ ಅಂಕ 78.83. ಇತರ ನಗರಗಳು ಆರ್ಥಿಕ ಸಾಮರ್ಥ್ಯದಲ್ಲಿ ಭಾರಿ ಹಿಂದಿದ್ದವು.

ಜೀವನ ಗುಣಮಟ್ಟದಲ್ಲಿ ದೇಶದಲ್ಲೇ 12ನೇ ಸ್ಥಾನವನ್ನು ನಗರವು ಪಡೆದಿದೆ. ಪರಿಸರಕ್ಕೆ ಸಂಬಂಧಿಸಿದ ಅಂಶಗಳಲ್ಲಿ ಸುಸ್ಥಿರತೆ ಕಾಪಾಡುವುದರಲ್ಲಿ 13ನೇ ಸ್ಥಾನ ಪಡೆದಿದೆ. ನಾಗರಿಕರ ಅಭಿಪ್ರಾಯ ಸಂಗ್ರಹದಲ್ಲಿ ಸಿಕ್ಕ ಅಂಕಗಳನ್ನು ವಿಶ್ಲೇಷಿಸಿದಾಗ ನಗರವು 18ನೇ ಸ್ಥಾನದಲ್ಲಿದೆ.

'ನಗರಕ್ಕೆ ಈ ಮೊದಲ ಸ್ಥಾನ ಲಭಿಸಿದ್ದರಿಂದ ನಮ್ಮ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿದೆ. ನಗರದ ಸಂಘ ಸಂಸ್ಥೆಗಳು ಹಾಗೂ ನಾಗರಿಕರ ಸಹಕಾರದಿಂದ ಈ ಸಾಧನೆ ಸಾಧ್ಯವಾಗಿದೆ. ನಗರದ 1.30 ಕೋಟಿ ಜನ ಒಟ್ಟಾಗಿ ಶ್ರಮಿಸಿದರೆ ಇನ್ನೂ ಸುಂದರವಾದ ಹಾಗೂ ಉತ್ತಮವಾದ ನಗರವನ್ನು ಕಟ್ಟಬಹುದು. ನಗರದಲ್ಲಿ ಇನ್ನಷ್ಟು ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಯೋಜನೆಗಳನ್ನು ಹಾಕಿಕೊಂಡಿದ್ದೇವೆ' ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರ್ದೀಪ್ ಸಿಂಗ್ ಅವರು ನಡೆಸಿದ ವಿಡಿಯೊ ಸಂವಾದದಲ್ಲಿ ಮಾತನಾಡಿದ ಮಂಜುನಾಥ ಪ್ರಸಾದ್ ನಗರದ ಆಡಳಿತ ವ್ಯವಸ್ಥೆ ಸುಧಾರಣೆಗೆ ಕೈಗೊಂಡಿರುವ ಕ್ರಮಗಳನ್ನು ವಿವರಿಸಿದರು.

'ಪಾಲಿಕೆಯು 34 ಆಸ್ಪತ್ರೆಗಳನ್ನು ಹಾಗೂ 141 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಡೆಸುತ್ತಿದೆ. ಕೋವಿಡ್ ಸಂದರ್ಭದಲ್ಲಿ 53 ಸಾವಿರಕ್ಕೂ ಅಧಿಕ ರೋಗಿಗಳಿಗೆ ಪಾಲಿಕೆ ವತಿಯಿಂದ ಉಚಿತ ಚಿಕಿತ್ಸೆ ಒದಗಿಸಲಾಗಿದೆ. ಕೋವಿಡ್‌ನಿಂದ ಸಾವಿನ ಪ್ರಮಾಣವು ನಗರದಲ್ಲಿ ಶೇ 1ಕ್ಕಿಂತಲೂ ಕಡಿಮೆ ಇದೆ. ಕೋವಿಡ್ ಪರೀಕ್ಷೆಗೆ ಒಳಗಾಗುವವರಲ್ಲಿ ಸೋಂಕು ದೃಢಪಡುವ ಪ್ರಮಾಣವೂ ಗಣನೀಯ ಇಳಿಕೆ ಕಂಡಿದೆ' ಎಂದು ಆಯುಕ್ತರು ಮಾಹಿತಿ ನೀಡಿದರು.

'ಮಾಹಿತಿ ತಂತ್ರಜ್ಞಾನದ ರಾಜಧಾನಿ ಎಂದು ಕರೆಸಿಕೊಳ್ಳುವ ನಮ್ಮ ನಗರದಲ್ಲಿ ಆಡಳಿತ ಸುಧಾರಣೆಗೂ ಆದ್ಯತೆ ನೀಡಿದ್ದೇವೆ. ಯಾವುದೇ ಪ್ರಮಾಣಪತ್ರ ಅಥವಾ ಅನುಮತಿ ಪಡೆಯುವುದಕ್ಕಾಗಿ ಕಂಪನಿಗಳು ಬಿಬಿಎಂಪಿಗೆ ಕಚೇರಿಗೆ ಬರುವ ಅವಶ್ಯಕತೆ ಇಲ್ಲ. ಹೆಚ್ಚಿನ ಸೇವೆಗಳನ್ನು ಆನ್‌ಲೈನ್ ಮೂಲಕವೇ ನೀಡುತ್ತಿದ್ದೇವೆ. ಉದ್ದಿಮೆಗಳಿಗೆ ಸಂಬಂಧಿಸಿದ ಕಡತಗಳನ್ನು ತಿಂಗಳ ಒಳಗೆ ವಿಲೇವಾರಿ ಮಾಡಲಾಗುತ್ತಿದೆ' ಎಂದರು.

ಯಾವುದಕ್ಕೆ ಎಷ್ಟು ಅಂಕ

ವಿಷಯ	ಬೆಂಗಳೂರಿನ ಅಂಕ	ದೇಶದ ನಗರಗಳ ಸರಾಸರಿ ಅಂಕ
ಜೀವನ ಗುಣಮಟ್ಟ	55.68	51.93
ಆರ್ಥಿಕ ಸಾಮರ್ಥ್ಯ	78.83	13.52
ಸುಸ್ಥಿರತೆ	59.96	56.11
ಜನಾಭಿಪ್ರಾಯ	78	76.8

'ಸ್ಮಾರ್ಟ್ ಸಿಟಿ: ರಸ್ತೆ ಕಾಮಗಾರಿಗಳು ಜೂನ್ ಒಳಗೆ ಪೂರ್ಣ'

'ಬೆಂಗಳೂರು ಸ್ಮಾರ್ಟ್ ಸಿಟಿ ಸಂಸ್ಥೆಯು ನಗರದಲ್ಲಿ ಮೊದಲ ಹಂತದಲ್ಲಿ ಅನುಷ್ಠಾನಗೊಳಿಸುತ್ತಿರುವ ರಸ್ತೆ ಕಾಮಗಾರಿಗಳನ್ನು ಜೂನ್ ಒಳಗೆ ಪೂರ್ಣಗೊಳಿಸಲಾಗುತ್ತದೆ' ಎಂದು ಬಿಬಿಎಂಪಿ ಆಯುಕ್ತರು ತಿಳಿಸಿದರು.

'ನಗರದಲ್ಲಿ ಕೆಲವು ಪ್ರದೇಶಗಳಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿಗಳು ನಡೆದಿರುವ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿರುವುದು ನಿಜ. ನಗರದಲ್ಲಿ 94 ಲಕ್ಷ ವಾಹನಗಳಿವೆ. ಹಾಗಾಗಿ ವಾಹನ ಸಂಚಾರ ಮಾರ್ಗ ಬದಲಾಯಿಸಿ ಕಾಮಗಾರಿ ಕೈಗೊಂಡರೂ ಸಂಚಾರ ದಟ್ಟಣೆ ನಿಯಂತ್ರಣ ಕಷ್ಟಸಾಧ್ಯ' ಎಂದರು.

ನಗರಾಡಳಿತ ನಿರ್ವಹಣೆ ಸೂಚ್ಯಂಕದಲ್ಲಿ 31ನೇ ಸ್ಥಾನ

ನಗರಾಡಳಿತ ನಿರ್ವಹಣೆ ಸೂಚ್ಯಂಕವನ್ನೂ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರ್ದೀಪ್ ಸಿಂಗ್ ಪುರಿ ಗುರುವಾರ ಬಿಡುಗಡೆ ಮಾಡಿದರು. ಇದರಲ್ಲಿ ಬೆಂಗಳೂರು 31ನೇ ಸ್ಥಾನ ಪಡೆದಿದೆ.

ಸೇವೆಗಳು, ಹಣಕಾಸು ನಿರ್ವಹಣೆ, ತಂತ್ರಜ್ಞಾನ ಅಳವಡಿಕೆ, ಯೋಜನೆ, ಆಡಳಿತಕ್ಕೆ ಸಂಬಂಧಿಸಿದ ಒಟ್ಟು 100 ಅಂಶಗಳನ್ನು ಆಧರಿಸಿ ಈ ಸೂಚ್ಯಂಕವನ್ನು ರೂಪಿಸಲಾಗುತ್ತದೆ.

ಬೆಂಗಳೂರು ನಗರವು ಈ ಸೂಚ್ಯಂಕಗಳಲ್ಲಿ ಒಟ್ಟು 45.02 ಅಂಕಗಳನ್ನು ಗಳಿಸಿದೆ. ಸೇವಾ ಕ್ಷೇತ್ರದಲ್ಲಿ 56, ಹಣಕಾಸು ನಿರ್ವಹಣೆಯಲ್ಲಿ 47.61, ತಂತ್ರಜ್ಞಾನ ಅಳವಡಿಕೆಯಲ್ಲಿ 26.21, ಯೋಜನೆಯಲ್ಲಿ 30.41 ಹಾಗೂ ಆಡಳಿತ ನಿರ್ವಹಣೆಯಲ್ಲಿ 51.01 ಅಂಕಗಳನ್ನು ನಗರವು ಪಡೆದುಕೊಂಡಿದೆ.

'ನಗರಾಡಳಿತ ನಿರ್ವಹಣೆ ಸೂಚ್ಯಂಕವನ್ನು ನಿರ್ಧರಿಸುವ ಪ್ರಮುಖ ಐದು ವಿಭಾಗಗಳಲ್ಲಿ ಬಿಬಿಎಂಪಿಗೆ ನಿರೀಕ್ಷಿತ ಪ್ರಮಾಣದಲ್ಲಿ ಅಂಕಗಳು ಬಂದಿಲ್ಲ. ಈ ವಿಚಾರದಲ್ಲಿ ಎಲ್ಲೆಲ್ಲಿ ತಪ್ಪಾಗಿದೆ ಎಂಬುದನ್ನು ಇಂದಿನಿಂದಲೇ ವಿಶ್ಲೇಷಣೆ ನಡೆಸುತ್ತೇವೆ. ಲೋಪಗಳನ್ನು ಸರಿಪಡಿಸಿಕೊಂಡು ಮುಂದಿನ ವರ್ಷ ಈ ಸೂಚ್ಯಂಕದಲ್ಲೂ ನಗರವು ಮೊದಲ ಸ್ಥಾನ ಪಡೆಯುವುದಕ್ಕೆ ಶಕ್ತಿಮೀರಿ ಶ್ರಮಿಸುತ್ತೇವೆ' ಎಂದು ಆಯುಕ್ತರು ತಿಳಿಸಿದರು.

ಸುದ್ದಿ 2 ನಿಮಿಷ

ದಲಿತ ಸಂಘರ್ಷ ಸಮಿತಿಯಿಂದ ಪ್ರತಿಭಟನೆ ಇಂದು

ಬೆಂಗಳೂರು: ದಲಿತ ಸಮುದಾಯದವರಿಗೆ ವಾರ್ಷಿಕ ವರಮಾನದ ಮಿತಿಯನ್ನು ₹15 ಲಕ್ಷಕ್ಕೆ ಏರಿಕೆ ಮಾಡುವುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ವತಿಯಿಂದ ಇದೇ 5ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

'ಉನ್ನತ ಶಿಕ್ಷಣಕ್ಕಾಗಿ ಪೇಮೆಂಟ್ ಕೋಟಾದಡಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ರದ್ದುಗೊಳಿಸಲಾಗಿದೆ. ಈ ನಿರ್ಧಾರವನ್ನು ಹಿಂದಕ್ಕೆ ಪಡೆಯುವಂತೆ ಸಮಿತಿಯು ಸರ್ಕಾರದ ಮೇಲೆ ಒತ್ತಡ ಹೇರಲಿದೆ' ಎಂದು ಪ್ರಕಟಣೆ ತಿಳಿಸಿದೆ.

'ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮುಂದುವರಿದಿರುವ ಬ್ರಾಹ್ಮಣ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯಲು ₹8 ಲಕ್ಷ ಆದಾಯ ಮಿತಿ ನಿಗದಿಪಡಿಸಲಾಗಿದೆ. ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ₹2.5 ಲಕ್ಷ ಆದಾಯ ಮಿತಿ ನಿಗದಿ ಮಾಡಲಾಗಿದೆ. ಇದು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದ ಧೋರಣೆ' ಎಂದೂ ಹೇಳಲಾಗಿದೆ.

ಮನೆಗೆ ನುಗ್ಗಿದ ಬಸ್



ಕೆ.ಆರ್.ಪುರ: ಖಾಸಗಿ ಬಸ್ ಮನೆಗೆ ನುಗ್ಗಿ ಸಹೋದರರಿಬ್ಬರಿಗೆ ಗಂಭೀರ ಗಾಯವಾಗಿರುವ ಘಟನೆ ಅವಲಹಳ್ಳಿ ಠಾಣೆ ವ್ಯಾಪ್ತಿಯ ಮಂಡೂರಿನಲ್ಲಿ ಜರುಗಿದೆ.

ಮಂಡೂರು ನಿವಾಸಿ ದೇವರಾಜ್ ಹಾಗೂ ನಂದನ್ ಎಂಬುವರಿಗೆ ಗಂಭೀರ ಗಾಯಗಳಾಗಿದ್ದು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಗುರುವಾರ ಬೆಳಿಗ್ಗೆ ಟಿಸಿಎಲ್ ಕಂಪನಿಗೆ ಸೇರಿದ ಬಸ್ ಕಾರ್ಮಿಕರನ್ನು ಕರೆದುಕೊಂಡು ಹೋಗುತ್ತಿದ್ದ ವೇಳೆ ನೇರವಾಗಿ ಮನೆಗೆ ನುಗ್ಗಿದೆ. ಚಾಲಕ ಪಾನಮತ್ತನಾಗಿ ಬಸ್ ಚಲಾಯಿಸುತ್ತಿದ್ದ ಎಂದು ಸ್ಥಳೀಯರು ದೂರಿದ್ದಾರೆ.

ರಾಜ್ಯದಲ್ಲಿ ಮತ್ತೆ 571 ಮಂದಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 571 ಮಂದಿಯಲ್ಲಿ ಕೋವಿಡ್ ದೃಢ ಪಟ್ಟಿದೆ. ಸೋಂಕಿತರ ಸಂಖ್ಯೆ 9.53 ಲಕ್ಷ ಮೀರಿದೆ. ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 6,128ಕ್ಕೆ ಏರಿಕೆಯಾಗಿದೆ.

ಸೋಂಕಿತರ ಪೈಕಿ ಬೆಂಗಳೂರಿನಲ್ಲಿ ಇಬ್ಬರು, ಧಾರವಾಡ ಮತ್ತು ಮೈಸೂರಿನಲ್ಲಿ ತಲಾ ಒಬ್ಬರು ಸೇರಿ ಒಟ್ಟು ನಾಲ್ಕು ಮಂದಿ ಮರಣ ಹೊಂದಿದ್ದಾರೆ. ಇದರಿಂದ ಮೃತರ ಸಂಖ್ಯೆ 12,350ಕ್ಕೆ ತಲುಪಿದೆ. ಸೋಂಕಿತರಲ್ಲಿ 496 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಗುರುವಾರ 385 ಮಂದಿಗೆ ಸೋಂಕು ದೃಢಪಟ್ಟಿದೆ. ಕಲಬುರ್ಗಿ 23, ಮೈಸೂರು 20, ದಕ್ಷಿಣ ಕನ್ನಡ 19, ವಿಜಯಪುರ 13, ತುಮಕೂರು 11, ಬೀದರ್ 8, ಶಿವಮೊಗ್ಗ ಹಾಗೂ ಚಿತ್ರದುರ್ಗದಲ್ಲಿ ತಲಾ 6 ಹೊಸ ಪ್ರಕರಣಗಳು ವರದಿಯಾಗಿವೆ.

30 ಸಾವಿರ ದಾಟಿದ ಲಸಿಕೆ ಗುರಿ

ರಾಜ್ಯದಲ್ಲಿ ಲಸಿಕೆ ಅಭಿಯಾನದ ನಾಲ್ಕನೇ ದಿನವಾದ ಗುರುವಾರ ರಾಜ್ಯದಾದ್ಯಂತ 10,525 ಹಿರಿಯ ನಾಗರಿಕರು ಹಾಗೂ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ 59 ವರ್ಷದೊಳಗಿನ 1,561 ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಒಟ್ಟಾರೆ ನಾಲ್ಕು ದಿನಗಳಲ್ಲಿ ರಾಜ್ಯದಲ್ಲಿ ಒಟ್ಟು 38,811 ಮಂದಿ ಲಸಿಕೆ ಪಡೆದಿದ್ದಾರೆ.

'ನಾಲ್ಕೂ ದಿನಗಳ ಪೈಕಿ ಗುರುವಾರ ಒಟ್ಟು 12,086 ಮಂದಿ ಲಸಿಕೆ ಹಾಕಿಸಿಕೊಂಡಿದ್ದು, ಲಸಿಕೆ ಪ್ರಮಾಣ ಏರುಗತಿಯಲ್ಲಿ ಸಾಗಿದೆ. ಆದರೆ, ಈವರೆಗೂ ಲಸಿಕೆ ಪಡೆದುಕೊಂಡ ಯಾರೊಬ್ಬರಿಗೂ ಆರೋಗ್ಯದಲ್ಲಿ ಸಮಸ್ಯೆ ಅಥವಾ ಅಡ್ಡಪರಿಣಾಮಗಳು ಕಂಡು ಬಂದಿಲ್ಲ' ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಈವರೆಗೂ 14,893 ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಮೈಸೂರು, ತುಮಕೂರು, ಉತ್ತರ ಕನ್ನಡ, ಬಳ್ಳಾರಿ, ಧಾರವಾಡ, ಶಿವಮೊಗ್ಗ, ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಉಡುಪಿ ಜಿಲ್ಲೆಗಳಲ್ಲಿ ಹೆಚ್ಚು ಮಂದಿ ಲಸಿಕೆಗೆ ಆಸಕ್ತಿ ತೋರಿದ್ದಾರೆ. ಕೊಪ್ಪಳ, ದಾವಣಗೆರೆ, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಅತಿ ಕಡಿಮೆ ಜನರು ಲಸಿಕೆ ಪಡೆದುಕೊಂಡಿದ್ದಾರೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,06,825 ಒಟ್ಟು ಸೋಂಕಿತರು

3,97,975 ಗುಣಮುಖರಾದವರು

4,458 ಸಕ್ರಿಯ ಪ್ರಕರಣ

4,491 ಸಾವು

ಗುರುವಾರದ ಏರಿಕೆ

385 ದೃಢಪಟ್ಟ ಪ್ರಕರಣ

310 ಗುಣಮುಖ

2 ಸಾವು

ಕೇಂದ್ರ ಸರ್ಕಾರ ಸೂಚನೆ, ಬಿಬಿಎಂಪಿ ಅನುಷ್ಠಾನಕ್ಕೆ ತಯಾರಿ

24 ಗಂಟೆಯೂ ಕೋವಿಡ್ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆ ಕೇಂದ್ರಗಳಲ್ಲಿ ಜನಜಂಗುಳಿ ಉಂಟಾಗುವುದನ್ನು ತಪ್ಪಿಸಲು ದಿನದ 24 ಗಂಟೆಯೂ ಲಸಿಕೆ ಹಾಕುವುದಕ್ಕೆ ಕ್ರಮಕೈಗೊಳ್ಳಲು ಕೇಂದ್ರ ಸರ್ಕಾರ ಸೂಚನೆ ನೀಡಿದ್ದು, ಬಿಬಿಎಂಪಿ ಇದರ ಅನುಷ್ಠಾನಕ್ಕೆ ತಯಾರಿ ನಡೆಸಿದೆ.

'100ಕ್ಕಿಂತ ಹೆಚ್ಚು ಹಾಸಿಗೆ ಸಾಮರ್ಥ್ಯವಿರುವ 107 ಆಸ್ಪತ್ರೆಗಳ ಪ್ರತಿನಿಧಿಗಳ ಸಭೆಯನ್ನು ಶುಕ್ರವಾರ ಕರೆದಿದ್ದೇನೆ. ಅವುಗಳ ಜೊತೆಗೆ, ಬಿಬಿಎಂಪಿಯ 141 ಪ್ರಾಥಮಿಕ ಆರೋಗ್ಯ ಕೇಂದ್ರಗಳು (ಪಿಎಚ್‌ಸಿ) ಹಾಗೂ 28 ಹೆರಿಗೆ ಆಸ್ಪತ್ರೆಗಳು ಹಾಗೂ ಆರು ರೆಫರಲ್ ಆಸ್ಪತ್ರೆಗಳಲ್ಲೂ ಸೋಮವಾರದಿಂದ ಕೋವಿಡ್ ಲಸಿಕಾ ಕೇಂದ್ರ ಆರಂಭಿಸಲಾಗುತ್ತಿದೆ. ದಿನದ 24 ಗಂಟೆಯೂ ಲಸಿಕೆ ನೀಡುವುದಕ್ಕೆ ಯಾವ ರೀತಿ ಸಿದ್ಧತೆ ಮಾಡಿಕೊಳ್ಳಬಹುದು ಎಂಬ ಬಗ್ಗೆ ಸಭೆಯಲ್ಲಿ ಸಮಾಲೋಚನೆ ನಡೆಸುತ್ತೇವೆ. ಲಸಿಕ ಕೇಂದ್ರಗಳ ನಿರ್ವಹಣೆ ಬಗ್ಗೆ ಆಸ್ಪತ್ರೆಯವರಿಗೆ ತರಬೇತಿಯನ್ನೂ ನೀಡಲಿದ್ದೇವೆ' ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ತಿಳಿಸಿದರು.

'ಬಿಬಿಎಂಪಿಯ ಪಿಎಚ್‌ಸಿಗಳು ಮತ್ತು 34 ಆಸ್ಪತ್ರೆಗಳಲ್ಲೇ ದಿನಕ್ಕೆ ತಲಾ 200ರಂತೆ ಒಟ್ಟು 35 ಸಾವಿರ ಮಂದಿಗೆ ಕೋವಿಡ್ ಲಸಿಕೆ ನೀಡಬಹುದು. ಇದಲ್ಲದೇ ಖಾಸಗಿ ಆಸ್ಪತ್ರೆಗಳಲ್ಲಿಯೂ ಲಸಿಕೆ ಹಾಕುವ ಕಾರ್ಯ ಪೂರ್ಣ ಪ್ರಮಾಣದಲ್ಲಿ ಆರಂಭಗೊಂಡರೆ, ಲಸಿಕೆ ಪಡೆಯಲು ಜನ ಜಂಗುಳಿ ಉಂಟಾಗುವ ಸಾಧ್ಯತೆ ಕಡಿಮೆ' ಎಂದರು.

ಲಸಿಕೆ ಪಡೆಯಲು ಉತ್ಸಾಹ: ಕೋವಿಡ್ ಲಸಿಕೆ ಪಡೆಯಲು ಹಿರಿಯ ನಾಗರಿಕರು ಹೆಚ್ಚಿನ ಉತ್ಸಾಹ ತೋರುತ್ತಿದ್ದಾರೆ. ಬಿಬಿಎಂಪಿ ವ್ಯಾಪ್ತಿಯ 41 ಕೇಂದ್ರಗಳಲ್ಲಿ ಗುರುವಾರ 7,800 ಮಂದಿಗೆ ಲಸಿಕೆ ನೀಡುವ ಗುರಿಯನ್ನು ಬಿಬಿಎಂಪಿ ಹೊಂದಿತ್ತು. ಒಟ್ಟು 7,351 ಮಂದಿ ಲಸಿಕೆ ಪಡೆದರು.

ಅಂಕಿ–ಅಂಶ

5,871 ಬಿಬಿಎಂಪಿಯ ವ್ಯಾಪ್ತಿಯಲ್ಲಿ ಗುರುವಾರ ಕೋವಿಡ್ ಲಸಿಕೆ ಪಡೆದ ಹಿರಿಯ ನಾಗರಿಕರು

627 ಬೇರೆ ಬೇರೆ ಕಾಯಿಲೆಯಿಂದ ನರಳುತ್ತಿರುವ 45ರಿಂದ 60 ವರ್ಷದೊಳಗಿನವರು

40 ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದ ಸಿಬ್ಬಂದಿ

35 ಆರೋಗ್ಯ ಕಾರ್ಯಕರ್ತರು (ಮೊದಲ ಡೋಸ್)

778 ಆರೋಗ್ಯ ಕಾರ್ಯಕರ್ತರು (ಎರಡನೇ ಡೋಸ್)

ನಾಳೆ 'ಉತ್ತರ್–ದಕ್ಷಿಣ್ ಜುಗಲ್‌ಬಂದಿ'

ಬೆಂಗಳೂರು: ವಿವಿಧ್ ಆರ್ಟ್ಸ್ ಎಂಟರ್‌ಟೈನ್‌ಮೆಂಟ್ ಹಾಗೂ ದಿ ಪಯೊನೀರ್ ಆರ್ಟ್ಸ್ ಎಜುಕೇಷನ್ ಸೊಸೈಟಿಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಹಯೋಗದಲ್ಲಿ 'ಉತ್ತರ್ ದಕ್ಷಿಣ್' ಶೀರ್ಷಿಕೆಯಡಿ ಸಂಗೀತ ಜುಗಲ್‌ಬಂದಿ ಸರಣಿಯನ್ನು ಮಾ.6ರಂದು ಸಂಜೆ 6 ಗಂಟೆಯಿಂದ ಚೌಡಯ್ಯ ಮೆಮೊರಿಯಲ್ ಹಾಲ್‌ನಲ್ಲಿ ಹಮ್ಮಿಕೊಂಡಿವೆ.

ಕಾರ್ಯಕ್ರಮದಲ್ಲಿ ಕೊಳಲು ವಾದಕ ಪಂಡಿತ್ ರೋನು ಮುಜುಂದಾರ್ ಮತ್ತು ಮ್ಯಾಂಡೋಲಿನ್ ವಾದಕ ಯು.ರಾಜೇಶ್ ಅವರ ಜುಗಲ್‌ಬಂದಿ, ಬೆಂಗಳೂರು ವಿ.ಪ್ರವೀಣ್ ಮತ್ತು ವಿ.ನರಹರಿ, ಭಟ್ ಸಹೋದರಿಯರಾದ ರಮ್ಯಾ ಮತ್ತು ರೇಷ್ಮಾ ಅವರಿಂದ ಹಿಂದೂಸ್ತಾನಿ ಗಾಯನ ಇರಲಿದೆ.

'ಬುಕ್ ಮೈ ಶೋನಲ್ಲಿ ಕಾರ್ಯಕ್ರಮದ ಟಿಕೆಟ್‌ಗಳು ಲಭ್ಯವಿದ್ದು, ಹೆಚ್ಚಿನ ಮಾಹಿತಿಗೆ 9845989228 ಸಂಖ್ಯೆಯನ್ನು ಸಂಪರ್ಕಿಸಬಹುದು' ಎಂದು ಪ್ರಕಟಣೆ ತಿಳಿಸಿದೆ.

ಕಂಬಳಕ್ಕೆ ಪ್ರವಾಸೋದ್ಯಮ ಸ್ಪರ್ಶ: ಬೆಂಗಳೂರಿಗರಿಗೆ ವಿಶೇಷ ಪ್ಯಾಕೇಜ್

ಪ್ರಜಾವಾಣಿ ವಾರ್ತೆ

ಮಂಗಳೂರು: ತುಳುನಾಡಿನ ಸಾಂಸ್ಕೃತಿಕ ಕಲೆಯಾದ ಕಂಬಳಕ್ಕೆ ಪ್ರವಾಸೋದ್ಯಮ ಸ್ಪರ್ಶ ನೀಡುವ ಪ್ರಕ್ರಿಯೆ ಆರಂಭವಾಗಿದೆ. ಬೆಂಗಳೂರಿನ ಜನರೂ ಕಂಬಳ ರೋಮಾಂಚನವನ್ನು ಅನುಭವಿಸಲು ವಿಶೇಷ ಟೂರ್ ಪ್ಯಾಕೇಜ್ ಸಿದ್ಧವಾಗಿದೆ.

ಮೊದಲ ಹಂತವಾಗಿ ಬೆಂಗಳೂರಿನ 10 ಜನ ಕಂಬಳ ಪ್ರಿಯರು ಈಗಾಗಲೇ ಟಿಕೆಟ್ ಬುಕ್ ಮಾಡಿದ್ದು, ಮಾರ್ಚ್ 6 ರಂದು ನಗರದಲ್ಲಿ ನಡೆಯುವ ರಾಮ–ಲಕ್ಷ್ಮಣ ಜೋಡುಕರೆ ಕಂಬಳವನ್ನು ವೀಕ್ಷಿಸಲಿದ್ದಾರೆ.

ಅರ್ಜುನ್ ಟೂರ್ ಆಂಡ್ ಟ್ರಾವೆಲ್ ಸಂಸ್ಥೆಯ ಈ ಪ್ಯಾಕೇಜ್ ಆರಂಭಿಸಿದೆ. 'ನನ್ನ ಸ್ನೇಹಿತರೊಬ್ಬರು ಇತ್ತೀಚೆಗೆ ನನಗೆ ಕಂಬಳದ ಫೋಟೊಗಳನ್ನು ಕಳುಹಿಸಿದ್ದರು. ಕೂಡಲೇ ಕರಾವಳಿ ಕರ್ನಾಟಕದ ಈ ಕಲೆಯನ್ನು ರಾಜ್ಯ, ದೇಶದ ವಿವಿಧ ಭಾಗಗಳ ಜನರು, ವಿದೇಶಿಗರಿಗೂ ಪರಿಚಯಿಸಬೇಕು ಎನ್ನುವ ಆಲೋಚನೆ ಮೂಡಿತ್ತು. ಈ ಬಗ್ಗೆ ಮಂಗಳೂರು ಕಂಬಳ ಸಮಿತಿ ಅಧ್ಯಕ್ಷ ಕ್ಯಾ. ಬೃಜೇಶ್ ಚೌಟ ಅವರನ್ನು ಸಂಪರ್ಕಿಸಿದೆ. ನಂತರ ಎರಡು ದಿನಗಳ ಕಂಬಳ ಪ್ಯಾಕೇಜ್ ಆರಂಭಿಸಿದೆ' ಎನ್ನುತ್ತಾರೆ ಸಂಸ್ಥೆಯ ರವಿ ಎಂ.

'ಆರಂಭದಲ್ಲಿ ಅನೇಕರು ಟಿಕೆಟ್ ಬುಕ್ ಮಾಡಿದ್ದರು. ಆದರೆ, ಕೋವಿಡ್–19 ಪ್ರಕರಣಗಳು ಹೆಚ್ಚಿದ್ದರಿಂದ ಹಲವರು ಟಿಕೆಟ್ ರದ್ದು ಮಾಡಿದರು. ಈ ಬಗ್ಗೆ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಅವರಿಗೂ ಮನವಿ ಮಾಡಿದ್ದು, ಕಂಬಳಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದು ಹೇಳಿದರು.

'ಬೆಂಗಳೂರಿನ ಜನರಿಗೆ ಇರುವ ಎರಡು ದಿನಗಳ ಪ್ಯಾಕೇಜ್‌ನಲ್ಲಿ ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವ ಅವಕಾಶವೂ ಇದೆ. ಮಾ.6 ರಂದು ಬೆಳಿಗ್ಗೆ ಬೆಂಗಳೂರಿನಿಂದ ಪ್ರವಾಸಿಗರು ಹೊರಡಲಿದ್ದು, ಸಂಜೆ ಕಂಬಳ ವೀಕ್ಷಣೆ ಮಾಡಲಿದ್ದಾರೆ. ಮರುದಿನ ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ. ರಾತ್ರಿ ಮತ್ತೆ ಬೆಂಗಳೂರಿಗೆ ಮರಳಲಿದ್ದಾರೆ' ಎಂದು ರವಿ ತಿಳಿಸಿದರು.



ಸನ್ಮಾನ ಸ್ವಿಗ್ಗಿ ಸಂಸ್ಥೆಯ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನ ಕಾರ್ಯಕ್ರಮದಲ್ಲಿ ಆಹಾರ ಮತ್ತು ಅಗತ್ಯ ವಸ್ತುಗಳನ್ನು ಪೂರೈಸುತ್ತಿರುವ ಮಹಿಳಾ ವಿತರಣಾ ಪಾಲುದಾರರನ್ನು ಗೌರವಿಸಲಾಯಿತು. ಸ್ವಿಗ್ಗಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ವಿವೇಕ್ ಸುಂದರ್ ಇದ್ದರು.

ನಗರದಲ್ಲಿ ಇಂದು

ಸ್ಕೂಲ್ ಬೆಲ್ ಕಾರ್ಯಕ್ರಮ ಹಾಗೂ ಕಾರ್ಯಾಗಾರ: ಉದ್ಘಾಟನೆ–ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್, ಅತಿಥಿಗಳು–ಎನ್‌ಎಸ್‌ಎಸ್ ಪ್ರಾದೇಶಿಕ ಕೇಂದ್ರದ ನಿರ್ದೇಶಕ ಖಾದ್ರಿ ನರಸಿಂಹಯ್ಯ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಎನ್.ಸತೀಶ್ ಗೌಡ, ಸ್ಥಳ–ಎನ್‌ಎಸ್‌ಎಸ್ ಭವನ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30

ಕೃಷಿ ಇಲಾಖೆ ರಾಯಭಾರಿಯಾಗಿ ನಟ ದರ್ಶನ್ ಅಧಿಕಾರ ಸ್ವೀಕಾರ: ಸ್ಥಳ–ಕೊಠಡಿ ಸಂಖ್ಯೆ 419, ಸಮ್ಮೇಳನ ಸಭಾಂಗಣ, ವಿಧಾನಸೌಧ, ಮಧ್ಯಾಹ್ನ 3



ರಸಸಂಜೆ: ಮೃದುಲಾ ಭಾಸ್ಕರ್, ದಿವ್ಯಾ ಹೊಸ್ಕೆರೆ ಮತ್ತು ಡಾ.ಶೇಷಾದ್ರಿ ಅಯ್ಯಂಗಾರ್ ಅವರಿಂದ ಭರತನಾಟ್ಯ ಏಕವ್ಯಕ್ತಿ ನೃತ್ಯ ಪ್ರದರ್ಶನ, ಅತಿಥಿ–ಖ್ಯಾತ ನೃತ್ಯ ಕಲಾವಿದೆ ವೈಜಯಂತಿ ಕಾಶಿ, ಆಯೋಜನೆ–ವೆಂಕಟೇಶ ನಾಟ್ಯ ಮಂದಿರ, ಸ್ಥಳ–ಎ.ಡಿ.ಎ.ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6 (ಮಾ.7ರವರೆಗೆ ಕಾರ್ಯಕ್ರಮ ನಡೆಯಲಿದೆ)





ಚಿತ್ರಪಟ ನಾಟಕದ ದೃಶ್ಯ

'ಚಿತ್ರಪಟ' ನಾಟಕ ಪ್ರದರ್ಶನ: ರಚನೆ–ಎಚ್.ಎಸ್. ವೆಂಕಟೇಶ ಮೂರ್ತಿ, ನಿರ್ದೇಶನ, ವಿನ್ಯಾಸ–ಮಂಜುನಾಥ್ ಎಲ್.ಬಡಿಗೇರ್, ಪ್ರಸ್ತುತಿ–ಸಮಷ್ಟಿ ತಂಡ, ಸ್ಥಳ–ರಂಗಶಂಕರ, ಸಂಜೆ 7.30

ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ: ಉದ್ಘಾಟನೆ–ಸಣ್ಣ ಕೈಗಾರಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಸಿ.ಸಿ.ಪಾಟೀಲ, ಅಧ್ಯಕ್ಷತೆ–ಶಾಸಕ ಎಂ.ಸತೀಶ್ ರೆಡ್ಡಿ, ಸ್ಥಳ–ವೈಟ್ ಹೌಸ್ ಕನ್ವೆನ್ಷನ್ ಹಾಲ್, ಬಿಡಿಎ ಕಾಂಪ್ಲೆಕ್ಸ್ ಹತ್ತಿರ, ಎಚ್.ಎಸ್.ಆರ್. ಬಡಾವಣೆ 6ನೇ ಹಂತ, ಸಂಜೆ 4

'ಐ ರೈಸ್' ಸರಣಿ ಉದ್ಘಾಟನಾ ಕಾರ್ಯಕ್ರಮ: ಅತಿಥಿ–ನಿವೃತ್ತ ಪೊಲೀಸ್ ಅಧಿಕಾರಿ ನೀಲಮಣಿ ಎನ್.ರಾಜು, ಆಯೋಜನೆ, ಸ್ಥಳ–ಆರ್ಟ್ ಹೌಸ್, ಅರಮನೆ ರಸ್ತೆ, ವಸಂತನಗರ, ಸಂಜೆ 6



ನೀಲಮಣಿ ಎನ್‌.ರಾಜು

ಕಾರ್ಮಿಕರ ಬೃಹತ್ ಪಾದಯಾತ್ರೆ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ ಎಂದು ಆರೋಪಿಸಿ ಸಾವಿರಾರು ಕಾರ್ಮಿಕರು ನಗರದಲ್ಲಿ ಗುರುವಾರ ಬೃಹತ್ ಪಾದಯಾತ್ರೆ ನಡೆಸಿದರು.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ನೇತೃತ್ವದಲ್ಲಿ 'ಬಜೆಟ್ ಅಧಿವೇಶನ ಚಲೋ' ಘೋಷಣೆಯಡಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು. ಕಾರ್ಖಾನೆಗಳ ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು, ಪಂಚಾಯತ್ ಗುತ್ತಿಗೆ ನೌಕರರು, ಅಸಂಘಟಿತ ಕಾರ್ಮಿಕರು ಸೇರಿದಂತೆ ಹಲವರು ಪಾದಯಾತ್ರೆಯಲ್ಲಿದ್ದರು.

ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ, ಮೇಲ್ಸೇತುವೆ ಹಾಗೂ ಶೇಷಾದ್ರಿ ರಸ್ತೆ ಮಾರ್ಗವಾಗಿ ಸ್ವಾತಂತ್ರ್ಯ ಉದ್ಯಾನದವರೆಗೂ ಪ್ರತಿಭಟನೆ ಸಾಗಿತು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದ ಕಾರ್ಮಿಕರು, ತಮ್ಮ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿದರು. ಈ ಕುರಿತ ಘೋಷಣಾ ಫಲಕಗಳನ್ನು ಪಾದಯಾತ್ರೆಯಲ್ಲಿ ಪ್ರದರ್ಶಿಸಿದರು. ವಿಧಾನಸೌಧದತ್ತ ಹೊರಟಿದ್ದ ಪಾದಯಾತ್ರೆಯನ್ನು, ಉದ್ಯಾನದಲ್ಲಿ ಪೊಲೀಸರು ತಡೆದರು. ಉದ್ಯಾನದಲ್ಲಿ ಸೇರಿದ ಪ್ರತಿಭಟನಕಾರರು, ಬಹಿರಂಗ ಸಭೆ ನಡೆಸಿದರು.

'ದುಡಿಯುವ ವರ್ಗವನ್ನು ಸರ್ಕಾರಗಳು ಕಡೆಗಣಿಸುತ್ತಿವೆ. ಬಂಡವಾಳಶಾಹಿಗಳ ಪರ ಆಡಳಿತ ನಡೆಸುತ್ತಿವೆ. ಮಿತಿ ಮೀರಿರುವ ದಿನಬಳಕೆ ವಸ್ತುಗಳ ಬೆಲೆ ಏರಿಕೆ, ರೈತರು ಹಾಗೂ ಕಾರ್ಮಿಕರ ವಿರೋಧಿ ಕಾಯ್ದೆಗಳನ್ನು ಖಂಡಿಸಿ ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ' ಎಂದೂ ಪ್ರತಿಭಟನಕಾರರು ಹೇಳಿದರು. ಪಾದಯಾತ್ರೆಯಿಂದಾಗಿ ಮೆಜೆಸ್ಟಿಕ್, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ವಾಹನಗಳ ಸಂಚಾರವೇ ಬಂದ್ ಆಗಿತ್ತು. ಇದರಿಂದಾಗಿ ವಾಹನಗಳ ದಟ್ಟಣೆ ಉಂಟಾಗಿ, ಸಾರ್ವಜನಿಕರು ಗಂಟೆಗಟ್ಟಲೇ ನಿಂತಲೇ ನಿಲ್ಲಬೇಕಾಯಿತು.

ಕಾರ್ಮಿಕರ ಬೇಡಿಕೆಗಳು

- ಸಂಘಗಳಿಗೆ ಮಾನ್ಯತೆ ನೀಡಲು ಹಾಗೂ ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಬೇಕು
- ಮಾಸಿಕ ಕನಿಷ್ಠ ₹ 24 ಸಾವಿರ ವೇತನ ನಿಗದಿ ಮಾಡಬೇಕು
- ಲಾಕ್‌ಡೌನ್, ಸೀಲ್‌ಡೌನ್, ಕ್ವಾರಂಟೈನ್ ಅವಧಿಗಾಗಿ ಕಾರ್ಮಿಕರಿಗೆ ವೇತನ ಕೊಡಿಸಬೇಕು
- ಸ್ಕೀ ನೌಕರರು, ಪಂಚಾಯಿತಿ ನೌಕರರು, ಪುರಸಭೆ ನೌಕರರು, ಸಾರಿಗೆ ನೌಕರರು, ಆಟೊ–ಟ್ಯಾಕ್ಸಿ ಚಾಲಕರು, ಮನೆ ಕೆಲಸದವರು, ಬೀದಿ ವ್ಯಾಪಾರಿಗಳ ಬೇಡಿಕೆಗಳನ್ನು ಈಡೇರಿಸಬೇಕು
- ರಾಜ್ಯ ಕಾರ್ಮಿಕರ ಸಮ್ಮೇಳನ ನಡೆಸಿ, ಕರ್ನಾಟಕ ಕಾರ್ಮಿಕ ಅಧ್ಯಯನ ಸಂಸ್ಥೆ ಬಲಪಡಿಸಬೇಕು
- ಅಸಂಘಟಿತ ಕಾರ್ಮಿಕರಿಗೆ ಭವಿಷ್ಯ ನಿಧಿ, ಪಿಂಚಣಿ ಸೌಲಭ್ಯ ಕಲ್ಪಿಸಬೇಕು.
- ಕಟ್ಟಡ ಕಾರ್ಮಿಕರ ಕಲ್ಯಾಣ ಯೋಜನೆಯನ್ನು ಸಮರ್ಪಕವಾಗಿ ಜಾರಿ ತರಬೇಕು

ಪೊಲೀಸ್ ಠಾಣೆಗಳ ವ್ಯಾಪ್ತಿ ಮರುರಚನೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಪೊಲೀಸ್ ಠಾಣೆಗಳ ವ್ಯಾಪ್ತಿಯನ್ನು ಶೀಘ್ರವೇ ಮರು ರಚಿಸಲಾಗುವುದು' ಎಂದು ಗೃಹಸಚಿವ ಬಸವರಾಜ ಬೊಮ್ಮಾಯಿ ಹೇಳಿದರು. ವಿಧಾನ ಪರಿಷತ್‌ನಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್ ಸದಸ್ಯ ಎಚ್.ಎಂ.ರಮೇಶ್‌ಗೌಡ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಸಂಬಂಧ ಪೊಲೀಸ್ ಕಮಿಷನರ್ ನೇತೃತ್ವದಲ್ಲಿ ಸಮಿತಿ ರಚನೆ ಮಾಡಲಾಗಿದೆ. ಶೀಘ್ರದಲ್ಲಿಯೇ ವರದಿ ಬರಲಿದೆ' ಎಂದರು.

'ಸಿಸಿಟಿವಿ ಕ್ಯಾಮೆರಾ ಇಲ್ಲದ ಕಡೆ ಸಿಗ್ನಲ್ ಜಂಪ್ ಪತ್ತೆಗೆ ತಂತ್ರಜ್ಞಾನ ಬಳಸಿಕೊಳ್ಳಲಾಗುತ್ತಿದೆ. ನಿಯಮ ಉಲ್ಲಂಘಿಸಿದ ಸಂದರ್ಭದಲ್ಲಿ ವಾಹನ ಮತ್ತು ಸವಾರರನ್ನು ಹಿಡಿಯಲು ಪೊಲೀಸರು ರಸ್ತೆಯಲ್ಲಿ ಅಡ್ಡಬರುವುದು ಗಮನಕ್ಕೆ ಬಂದಿದೆ. ಆ ಸಂದರ್ಭದಲ್ಲಿ ಅಪಘಾತವಾಗದಂತೆ, ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ' ಎಂದರು.

ವೃದ್ಧೆ ಹತ್ಯೆ; ಚಿನ್ನಾಭರಣ ಸಮೇತ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ ಕತ್ತು ಹಿಸುಕಿ ವೃದ್ಧೆಯೊಬ್ಬರನ್ನು ಹತ್ಯೆ ಮಾಡಲಾಗಿದ್ದು, ಕೃತ್ಯದ ಬಳಿಕ ಚಿನ್ನಾಭರಣ ಸಮೇತ ಆರೋಪಿಗಳು ಪರಾರಿಯಾಗಿದ್ದಾರೆ.

'ಆನೆಪಾಳ್ಯದ ನಿವಾಸಿ ದಿಲ್ಯಾನ್ ಬಾನು (62) ಕೊಲೆಯಾದವರು. ಮಗನ ಜೊತೆ ಅವರು ವಾಸವಿದ್ದರು. ಗುರುವಾರ ಬೆಳಿಗ್ಗೆ ಮಗ ಕೆಲಸಕ್ಕೆ ಹೋಗಿದ್ದ ವೇಳೆಯಲ್ಲೇ ಈ ಕೃತ್ಯ ನಡೆದಿದೆ' ಎಂದು ಪೊಲೀಸರು ಹೇಳಿದರು.

'ಮನೆಗೆ ನುಗ್ಗಿದ್ದ ಆರೋಪಿಗಳು, ದಿಲ್ಯಾನ್ ಬಾನು ಅವರ ಕತ್ತು ಹಿಸುಕಿ ಕೊಂದಿದ್ದಾರೆ. ನಂತರ, ಅವರ ಮೈ ಮೇಲೆ ಹಾಗೂ ಮನೆಯಲ್ಲಿದ್ದ ಚಿನ್ನಾಭರಣ ತೆಗೆದುಕೊಂಡು ಸ್ಥಳದಿಂದ ಹೊರಟು ಹೋಗಿದ್ದಾರೆ.'

'ಟೆಂಪೊ ಚಾಲಕನಾಗಿದ್ದ ಮಗ, ಕೆಲಸ ಮುಗಿಸಿ ಮಧ್ಯಾಹ್ನ ಊಟಕ್ಕೆಂದು ಮನೆಗೆ ಬಂದಿದ್ದರು. ಅವಾಗಲೇ ತಾಯಿ ಮೃತದೇಹ ಕಂಡಿತ್ತು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

'ವೃದ್ಧೆ ಒಬ್ಬರೇ ಮನೆಯಲ್ಲಿರುವುದನ್ನು ತಿಳಿದುಕೊಂಡು ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನವಿದೆ. ಮಗನ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ' ಎಂದೂ ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಕೋಲಾರ ಜಿಲ್ಲೆಯ ಕೆ.ಜಿ.ಎಫ್ ಠಾಣೆ ವ್ಯಾಪ್ತಿಯಲ್ಲಿ ಘಟನೆ

ಪಿಎಸ್‌ಐ ಮೇಲೆಯೇ ಲಾಂಗ್ ಬೀಸಿದ ರೌಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಕಳ್ಳತನ ಎಸಗಿದ್ದ ರೌಡಿ ಅಪೇನ್ ಅಲಿಯಾಸ್ ಜ್ಞಾನೇಶ್ (36) ಎಂಬಾತ, ತನ್ನನ್ನು ಬಂಧಿಸಲು ಬಂದ ಪಿಎಸ್‌ಐ ಹರಿನಾಥ್ ಮೇಲೆಯೇ ಲಾಂಗ್‌ನಿಂದ ಹಲ್ಲೆ ಮಾಡಿ ಪರಾರಿಯಾಗಿದ್ದಾನೆ.

ಮಹದೇವಪುರ ಠಾಣೆ ಪಿಎಸ್‌ಐ ಹರಿನಾಥ್ ಹಾಗೂ ಸಿಬ್ಬಂದಿ, ಆರೋಪಿಯನ್ನು ಬಂಧಿಸಲು ಕೋಲಾರ ಜಿಲ್ಲೆಯ ಕೆ.ಜಿ.ಎಫ್ ಠಾಣೆ ವ್ಯಾಪ್ತಿಗೆ ಹೋದಾಗ ಬುಧವಾರ ರಾತ್ರಿ ಈ ಘಟನೆ ನಡೆದಿದೆ. ಗಾಯಗೊಂಡಿರುವ ಹರಿನಾಥ್ ಅವರನ್ನು ನಗರದ ಹಾಸ್ಮಟ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ.



ರೌಡಿ ಅಪೇನ್

'ಪಿಎಸ್‌ಐ ಮೇಲೆ ಹಲ್ಲೆ ಮಾಡಿದ ಬಳಿಕ ಅಪೇನ್ ಪರಾರಿಯಾಗಿದ್ದಾನೆ. ಆತನ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಕೋಲಾರ ಹಾಗೂ ಬೆಂಗಳೂರು ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ಆರಂಭಿಸಿದ್ದಾರೆ' ಎಂದು ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.



ಹಲ್ಲೆಗೊಳಗಾದ ಸಬ್ ಇನ್‌ಸ್ಪೆಕ್ಟರ್ ಹರಿಕುಮಾರ್ ಹೊಸ್ಮಾಟ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಲಾಂಗ್ ಹಿಡಿದು ಪರಾರಿ: 'ವೈಟ್‌ಫೀಲ್ಡ್ ಉಪವಿಭಾಗ ವ್ಯಾಪ್ತಿಯಲ್ಲಿ ಕಳ್ಳತನ ಎಸಗಿದ್ದ ಅಪೇನ್, ಹಲವು ದಿನಗಳಿಂದ ತಲೆಮರೆಸಿಕೊಂಡು ಓಡಾಡುತ್ತಿದ್ದ. ಆತನನ್ನು ಬಂಧಿಸಲು ಪಿಎಸ್‌ಐ ಹಾಗೂ ಐವರು ಸಿಬ್ಬಂದಿ, ಕೆ.ಜಿ.ಎಫ್‌ಗೆ ಹೋಗಿದ್ದರು' ಎಂದೂ ಅಧಿಕಾರಿ ತಿಳಿಸಿದರು.

'ಆರೋಪಿ ಮನೆ ಬಳಿ ಹೋಗಿದ್ದ ಪೊಲೀಸರು, ಶರಣಾಗುವಂತೆ ಹೇಳಿದ್ದರು. ಅದಕ್ಕೆ ಒಪ್ಪದ ಆರೋಪಿ, ಪೊಲೀಸರ ಮೇಲೆಯೇ ಹಲ್ಲೆಗೆ ಮುಂದಾಗಿದ್ದ. ಲಾಂಗ್‌ನಿಂದ ಪಿಎಸ್‌ಐ ಕೈಗೆ ಹೊಡೆದಿದ್ದ. ಆತ್ಮರಕ್ಷಣೆಗಾಗಿ ಪಿಎಸ್‌ಐ ಗುಂಡು ಹಾರಿಸಿದ್ದರು. ತಪ್ಪಿಸಿಕೊಂಡಿದ್ದ ಆರೋಪಿ, ಲಾಂಗ್ ಹಿಡಿದುಕೊಂಡೇ ಸ್ಥಳದಿಂದ ಪರಾರಿಯಾದ. ಮಾರ್ಗಮಧ್ಯೆಯೇ ಆತ ಮತ್ತಷ್ಟು ಸಾರ್ವಜನಿಕರನ್ನು ಬೆದರಿಸಿರುವ ಸಾಧ್ಯತೆಯೂ ಇದೆ' ಎಂದೂ ಹೇಳಿದರು.

ಕೆ.ಜಿ.ಎಫ್ ರೌಡಿ: 'ಕೊಲೆ ಯತ್ನ, ಸುಲಿಗೆ, ಜೀವ ಬೆದರಿಕೆ, ಕಳ್ಳತನ ಸೇರಿದಂತೆ 32 ಅಪರಾಧ ಪ್ರಕರಣಗಳಲ್ಲಿ ಆರೋಪಿಯಾಗಿರುವ ಅಪೇನ್ ಹೆಸರು, ಕೆ.ಜಿ.ಎಫ್ ಠಾಣೆಯ ರೌಡಿಪಟ್ಟಿಯಲ್ಲಿದೆ. ಸಹಚರನೊಬ್ಬನ ಜೊತೆ ಸೇರಿ ಆರೋಪಿ ಕೃತ್ಯ ಎಸಗುತ್ತಿದ್ದ' ಎಂದೂ ಅಧಿಕಾರಿ ತಿಳಿಸಿದರು.

'ಮಹದೇವಪುರ, ಕೆ.ಆರ್.ಪುರ, ಬಾಣಸವಾಡಿ ಹಾಗೂ ಸುತ್ತಮುತ್ತ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಅಪರಾಧ ಕೃತ್ಯ ಎಸಗಿದ್ದ ಮಾಹಿತಿ ಇದೆ. ಆತನ ವಿರುದ್ಧ ಕೆಲ ಪ್ರಕರಣಗಳ ತನಿಖೆಯನ್ನು ಸಿಸಿಬಿ ನಡೆಸುತ್ತಿದೆ' ಎಂದೂ ಹೇಳಿದರು.

ಅಮಾನತು ಆದೇಶ ಹಿಂದಕ್ಕೆ ಪಡೆಯಲು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹ

ಸಂಗಮೇಶ್ವರ ಅಮಾನತು– ಕೋಲಾಹಲ

ಪ್ರಜಾವಾಣಿ ವಾರ್ತೆ



ವಿಧಾನ ಮಂಡಲದಲ್ಲಿ

ಬೆಂಗಳೂರು: 'ಒಂದು ರಾಷ್ಟ್ರ– ಒಂದು ಚುನಾವಣೆ'ಯ ಚರ್ಚೆ ವಿರೋಧಿಸಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸುತ್ತಿದ್ದ ವೇಳೆ ಅಂಗಿ ಬಿಚ್ಚಿ ಪ್ರತಿಭಟನೆ ತೋರಿದ ಭದ್ರಾವತಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ಕೆ.ಸಂಗಮೇಶ್ವರ ಅವರನ್ನು ಸದನದಿಂದ ಒಂದುವಾರ ಅಮಾನತು ಮಾಡಿರುವುದು ಕೋಲಾಹಲಕ್ಕೆ ಕಾರಣವಾಯಿತು.

'ಅಮಾನತು ಆದೇಶವನ್ನು ಹಿಂದಕ್ಕೆ ಪಡೆಯಬೇಕು. ಇಲ್ಲದಿದ್ದರೆ ನಮ್ಮೆಲ್ಲರನ್ನೂ ಅಮಾನತು ಮಾಡಿ ಹೊರಗೆ ಕಳಿಸಿ' ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿ ನಡೆಸುತ್ತಿದ್ದಾಗ, ಸಂಗಮೇಶ್ವರ ಅಂಗಿ ಬಿಚ್ಚಿ ಹೆಗಲ ಮೇಲೆ ಹಾಕಿಕೊಂಡರು. ಈ ವೇಳೆ ಕಾಗೇರಿ, 'ಇದು ರಸ್ತೆ ಎಂದುಕೊಂಡಿದ್ದೀರಾ. ಇದು ಸದನ. ಸದನಕ್ಕೆ ಅಗೌರವ ತೋರುತ್ತಿದ್ದೀರಿ. ಇಂತಹ ವರ್ತನೆಯನ್ನು ಸಹಿಸಲು ಸಾಧ್ಯವಿಲ್ಲ' ಎಂದು ಎಚ್ಚರಿಕೆ ನೀಡಿದರು. ಸಂಗಮೇಶ್ವರ ಸಮಜಾಯಿಷಿ ನೀಡಲು ಮುಂದಾದರು. 'ನಿಮಗೆ ಮಾನ ಮರ್ಯಾದೆ ಇಲ್ಲವೇನ್ರಿ' ಎಂದು ಗದರಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೂ ತರಾಟೆಗೆ ತೆಗೆದುಕೊಂಡರು. ಈ ವೇಳೆ ಪಕ್ಕದಲ್ಲಿದ್ದ ಕಾಂಗ್ರೆಸ್ ಸದಸ್ಯ ಡಿ.ಕೆ. ಶಿವಕುಮಾರ್ ಅವರು ಸಂಗಮೇಶ್ವರ್‌ಗೆ ಶರ್ಟ್ ತೊಡಿಸಿದರು. ಬಳಿಕ ಸಭಾಧ್ಯಕ್ಷರು ಕಲಾಪವನ್ನು 15 ನಿಮಿಷ ಮುಂದೂಡಿದರು.

ಸಂಗಮೇಶ್ವರ ತಡೆದ ಮಾರ್ಷಲ್‌ಗಳು

ಭೋಜನ ವಿರಾಮದ ವೇಳೆ ಮೊಗಸಾಲೆ ಒಳಗೆ ಪ್ರವೇಶಿಸಲು ಬಂದ ಸಂಗಮೇಶ್ವರ ಅವರನ್ನು ಮಾರ್ಷಲ್‌ಗಳು ಬಾಗಿಲ ಬಳಿಯೇ ತಡೆದರು. 'ಸಭಾಧ್ಯಕ್ಷರ ಆದೇಶ ಇರುವುದರಿಂದ ಒಳಗೆ ಬಿಡಲು ಸಾಧ್ಯವಿಲ್ಲ' ಎಂದು ಹೇಳಿದರು. 'ಅಂತಹ ಆದೇಶ ಇದೆಯೇ, ಇದ್ದರೆ ಪ್ರತಿ ತೋರಿಸಿ' ಎಂದು ಸಂಗಮೇಶ್ವರ ಏರು ಧ್ವನಿಯಲ್ಲಿ ಪ್ರಶ್ನಿಸಿದರು. ಸಾಕಷ್ಟು ವಾಗ್ವಾದ ನಡೆಸಿದರೂ ಅವರನ್ನು ಒಳಗೆ ಬಿಡಲಿಲ್ಲ.

ಈ ವಿಷಯ ತಿಳಿದು ಅಲ್ಲಿಗೆ ಬಂದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆ.ಆರ್.ರಮೇಶ್‌ಕುಮಾರ್, ಎಚ್.ಕೆ.ಪಾಟೀಲ ಮುಂತಾದವರು ಸಂಗಮೇಶ್ವರ ಅವರನ್ನು ಒಳಗೆ ಕರೆದೊಯ್ದರು. 'ಯಾರ್ರಿ ತಡೆಯೋರು, ತಡಿಲೀ ನೋಡೋಣ' ಎಂದು ಸಿದ್ದರಾಮಯ್ಯ ಸವಾಲು ಹಾಕಿದರು. ಮಾರ್ಷಲ್‌ಗಳು ಸುಮ್ಮನೆ ನೋಡುತ್ತಾ ನಿಂತಿದ್ದರು.

ನಂತರ ಕಲಾಪ ಆರಂಭವಾಗುತ್ತಿದ್ದಂತೆ ಕಾಗೇರಿ ಅವರು, 'ಸದನದಲ್ಲಿ ಬೇಜವಾಬ್ದಾರಿ ಹಾಗೂ ಅಶಿಸ್ತನ್ನು ಸಹಿಸಲು ಸಾಧ್ಯವಿಲ್ಲ' ಎಂದುಹೇಳಿದರು.

ಸಂಗಮೇಶ್ವರ ಅವರನ್ನು ಸದನದಿಂದ ಇದೇ 12ರ ವರೆಗೆ ಅಮಾನತು ಮಾಡುವ ಪ್ರಸ್ತಾವವನ್ನು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಮಂಡಿಸಿದರು. ಬಳಿಕ ನಿರ್ಧಾರ ಪ್ರಕಟಿಸಿದ ಕಾಗೇರಿ ಅವರು, 'ಸಂಗಮೇಶ್ವರ ಕೂಡಲೇ ಸದನದಿಂದ ಹೊರಕ್ಕೆ ಹೋಗಬೇಕು' ಎಂದು ಸೂಚಿಸಿದರು.

ಅಮಾನತ್ತು ಹಿಂದಕ್ಕೆ ಪಡೆಯಲು ಪಟ್ಟು: ಭೋಜನ ವಿರಾಮದ ಬಳಿಕ ಕಲಾಪ ಮತ್ತೆ ಆರಂಭಗೊಂಡ ಬಳಿಕ ಸಿದ್ದರಾಮಯ್ಯ ಮಾತನಾಡಿ, ಸಂಗಮೇಶ್ವರ ಅವರ ಅಮಾನತು ಆದೇಶವನ್ನು ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದರು.

'ಸಂಗಮೇಶ್ವರ ಅವರ ಕುಟುಂಬದ ಸದಸ್ಯರ ಮೇಲೆ ದೌರ್ಜನ್ಯದ ಪ್ರಕರಣ ದಾಖಲಿಸಲಾಗಿದೆ. ಅವರಿಗೆ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಬೇಕಿತ್ತು. ಅವಕಾಶ ಸಿಗದ ಕಾರಣ ಪ್ರತಿಭಟನೆ ಮಾಡಿದ್ದಾರೆ. ಆದ್ದರಿಂದ ಅವರ ಅಮಾನತು ಆದೇಶ ಹಿಂದಕ್ಕೆ ಪಡೆಯಬೇಕು. ಇಲ್ಲವಾದರೆ ನಮ್ಮೆಲ್ಲರನ್ನೂ ಅಮಾನತು ಮಾಡಿ' ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

'ಸಭಾಧ್ಯಕ್ಷರ ಆದೇಶ ಪ್ರಜಾಪ್ರಭುತ್ವದ ಕಗ್ಗೊಲೆ. ಇಲ್ಲಿ ಹಿಟ್ಲರ್ ಆಡಳಿತ ನಡೆಯಲ್ಲ. ನೀವು ಎಲ್ಲರನ್ನೂ ಅರೆಸ್ಟ್ ಮಾಡಿಸಿ ಹೊರಗೆ ಕಳಿಸಿ' ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ರೈತರಿಗೆ ಬಿಸಿಲಿನಲ್ಲಿ ಕಾಯುವ ಶಿಕ್ಷೆ!

ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ ಪ್ರಕ್ರಿಯೆ ನಿಧಾನಗತಿ

ಪ್ರಜಾವಾಣಿ ವಾರ್ತೆ



ಬೆಂಬಲ ಬೆಲೆಗೆ ರಾಗಿ ಮಾರಲು ಟ್ರ್ಯಾಕ್ಟರ್‌ನಲ್ಲಿ ಬಂದಿರುವ ರೈತರು

ಹೆಸರಘಟ್ಟ: ರಾಗಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲು ಸರ್ಕಾರ ಮುಂದಾಗಿದ್ದು, ನೂರಾರು ಟ್ರ್ಯಾಕ್ಟರ್‌ಗಳಲ್ಲಿ ರೈತರು ರಾಗಿ ಹೊತ್ತು ತರುತ್ತಿದ್ದಾರೆ. ಆದರೆ, ಅಧಿಕಾರಿಗಳು ದಿನಕ್ಕೆ ಐದರಿಂದ ಆರು ಟ್ರ್ಯಾಕ್ಟರ್‌ನಷ್ಟು ರಾಗಿ ಮಾತ್ರ ಖರೀದಿಸುತ್ತಿದ್ದು, ರೈತರು ಬಿಸಿಲಿನಲ್ಲಿಯೇ ದಿನಗಟ್ಟಲೇ ಕಾಯಬೇಕಾಗಿದೆ.

'ಕುರುಬರಹಳ್ಳಿ ಗ್ರಾಮದಲ್ಲಿ ರಾಗಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲಾಗುತ್ತಿದೆ. ಅಧಿಕಾರಿಗಳು ಬೆಳಿಗ್ಗೆ ಹತ್ತಕ್ಕೆ ಬಂದು, ಸಂಜೆ ಐದು ಗಂಟೆಗೆಲ್ಲ ಹೋಗುತ್ತಾರೆ. ದಿನಕ್ಕೆ ಐದಾರು ಟ್ರ್ಯಾಕ್ಟರ್ ರಾಗಿ ಮಾತ್ರ ತೂಕಕ್ಕೆ ಹಾಕುತ್ತಾರೆ. ಹೆಚ್ಚು ಅಧಿಕಾರಿಗಳನ್ನು ಈ ಕಾರ್ಯಕ್ಕೆ ನಿಯೋಜಿಸಬೇಕು' ಎಂದು ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಹೆಸರಘಟ್ಟ ವಲಯದ ಅಧ್ಯಕ್ಷ ಎಸ್.ಜಯಣ್ಣ ಒತ್ತಾಯಿಸಿದರು.

'ಹೋಬಳಿಯ ಶಾನುಭೋಗನಹಳ್ಳಿ, ಕಾಕೋಳು, ರಾಜಾನುಕುಂಟೆ, ಮತ್ಕೂರು, ದಿಬ್ಬೂರು ಗ್ರಾಮಗಳಿಂದ ರೈತರು ರಾಗಿ ತರುತ್ತಿದ್ದು, ಒಂದು ದಿನಕ್ಕೆ ಟ್ರ್ಯಾಕ್ಟರ್ ಬಾಡಿಗೆಯೇ ₹2,000 ಇದೆ. ಆ ದಿನ ಅವರ ಸರದಿ ಬಾರದಿದ್ದರೆ ಟ್ರ್ಯಾಕ್ಟರ್ ಬಾಡಿಗೆಯೂ ಹೆಚ್ಚಾಗುತ್ತದೆ. ಬೆಂಬಲ ಬೆಲೆಯಲ್ಲಿ ಶೇಕಡಾ ಕಾಲುಭಾಗದಷ್ಟು ಟ್ಯಾಕ್ಟರ್ ಬಾಡಿಗೆಗೇ ಹೋದರೆ, ರೈತರಿಗೆ ಲಾಭ ಸಿಗುವುದೇ ಇಲ್ಲ' ಎಂದು ಅವರು ಹೇಳಿದರು.

'ನಾನು ರಾಗಿ ತಂದು ಎರಡು ದಿನ ಆಯಿತು. ಹತ್ತು ಕ್ವಿಂಟಲ್ ರಾಗಿ ಇದೆ. ಟ್ಯಾಕ್ಟರ್ ಅನ್ನು ರಸ್ತೆ ಬದಿ ನಿಲ್ಲಿಸಿಕೊಂಡು ಇಲ್ಲೇ ಉಳಿದಿದ್ದೇವೆ. ಕುಡಿಯಲು, ಮುಖ ತೊಳೆಯಲು ಕೂಡ ನೀರಿಲ್ಲ' ಎಂದು ರಾಜಾನುಕುಂಟೆ ಗ್ರಾಮದ ರೈತ ಚಂದ್ರಶೇಖರ್ ಅಳಲು ತೊಡಿಕೊಂಡರು.

ಭೈರಪ್ಪ ವಿರುದ್ಧ ಕ್ರಮಕ್ಕೆ ಒತ್ತಾಯ

ಬೆಂಗಳೂರು: ತಿಗಳ ಸಮುದಾಯದ ಆರಾಧ್ಯದೇವತೆ ದ್ರೌಪದಿಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಸಾಹಿತಿ ಎಸ್.ಎಲ್. ಭೈರಪ್ಪ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಸದಸ್ಯ ಪಿ.ಆರ್. ರಮೇಶ್ ಒತ್ತಾಯಿಸಿದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಪೌರಾಣಿಕ ಹಿನ್ನೆಲೆ ಹೊಂದಿರುವ ದ್ರೌಪದಿ ಬಗ್ಗೆ ಅಪಹಾಸ್ಯ ಮಾಡುವ ಮೂಲಕ ತಿಗಳ ವಹ್ನಿಕುಲ ಸಮುದಾಯ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದ್ದಾರೆ. ಅವರ ವಿರುದ್ಧ ಐಪಿಸಿ ಸೆಕ್ಷನ್ 205, 298, 505ರ ಅಡಿ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಪ್ರತಿ ಸಮುದಾಯಕ್ಕೂ ಅದರದೇ ಆದ ಪುರಾಣ ಮತ್ತು ಐತಿಹಾಸಿಕ ನಂಟು ಇರುತ್ತದೆ. ಆ ನಂಬಿಕೆಗಳ ಮೇಲೆ ಆಯಾ ಸಮುದಾಯದ ಧಾರ್ಮಿಕ ಭಾವನೆ, ಸಂಪ್ರದಾಯ, ಆಚರಣೆಗಳಿರುತ್ತವೆ. ಒಂದು ಸಮುದಾಯದ ಸಂಪ್ರದಾಯದ ಬಗ್ಗೆ ಕೀಳಾಗಿ ಮಾತನಾಡುವುದು ಸರಿಯಲ್ಲ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಭೈರಪ್ಪ ಅವರ ಹೇಳಿಕೆ ಕುರಿತಂತೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿಯನ್ನು ಅವರು ಉಲ್ಲೇಖಿಸಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಈ ಬಗ್ಗೆ ಪ್ರತಿಕ್ರಿಯೆ ನೀಡಿಸುವುದಾಗಿ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಚಿಕಿತ್ಸೆ ಸಿಗದೇ ರೋಗಿ ಸಾವು: ಆರೋಪ

ಪ್ರಜಾವಾಣಿ ವಾರ್ತೆ

ಕೆರಗೋಡು (ಮಂಡ್ಯ): ತೀವ್ರ ಅಸ್ವಸ್ಥರಾಗಿದ್ದ ಮಹಿಳೆಯೊಬ್ಬರಿಗೆ ಸಕಾಲಕ್ಕೆ ಚಿಕಿತ್ಸೆ ದೊರೆಯದೇ ಮೃತಪಟ್ಟಿದ್ದಾಗಿ ಆರೋಪಿಸಿ, ಮಹಿಳೆಯ ಸಂಬಂಧಿಕರು ಹಾಗೂ ಸಾರ್ವಜನಿಕರು ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ಮಂಡ್ಯ ತಾಲ್ಲೂಕು ಬಸರಾಳು ಹೋಬಳಿ ಹೊಸಹಳ್ಳಿ ಗ್ರಾಮದ ನಿಂಗರಾಜಮ್ಮ (50), ಎರಡು ದಿನಗಳಿಂದ ಅನಾರೋಗ್ಯಕ್ಕೀಡಾಗಿದ್ದರು. ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವುದಕ್ಕಾಗಿ ಗುರುವಾರ ಬೆಳಿಗ್ಗೆ ಖಾಸಗಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದರು. ಪ್ರಯಾಣಿಕರಿಂದ ಭರ್ತಿಯಾಗಿದ್ದ ಆ ಬಸ್ಸಿನಲ್ಲಿ ಸುಮಾರು ಇಪ್ಪತ್ತೈದು ಕಿ.ಮೀ ನಿಂತುಕೊಂಡೇ ಪ್ರಯಾಣಿಸಿದ್ದಾರೆ. ಮಾರ್ಗಮಧ್ಯದಲ್ಲಿ ಬಸ್ಸಿನಲ್ಲಿಯೇ ಕುಸಿದು ಬಿದ್ದಿದ್ದಾರೆ. ಕೂಡಲೇ ಅವರನ್ನು ಸಾರ್ವಜನಿಕರ ನೆರವಿನಿಂದ, ಸಮೀಪದ ಕೆರಗೋಡು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆತರಲಾಗಿದೆ. ಆದರೆ, ಈ ವೇಳೆ ಕರ್ತವ್ಯ ನಿರತ ಆರೋಗ್ಯ ಸಿಬ್ಬಂದಿ ಇಲ್ಲದ ಕಾರಣ ಸೂಕ್ತ ಚಿಕಿತ್ಸೆ ಸಿಗದೆ ನಿಂಗರಾಜಮ್ಮ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಪ್ರತಿಭಟನೆ: ಆಸ್ಪತ್ರೆ ಸಿಬ್ಬಂದಿಯ ಬೇಜವಾಬ್ದಾರಿಯಿಂದ ಮಹಿಳೆ ಮೃತಪಟ್ಟಿದ್ದು, ಪರಿಹಾರ ನೀಡಬೇಕು. ಅಗತ್ಯ ಸಿಬ್ಬಂದಿಯನ್ನು ನೇಮಿಸಬೇಕು ಎಂದು ಒತ್ತಾಯಿಸಿ ಮೃತರ ಸಂಬಂಧಿಕರು, ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಕಚ್ಚಾ ತೈಲ ಉತ್ಪಾದನೆ ಹೆಚ್ಚಳಕ್ಕೆ ಒಪೆಕ್ ಅನುಮತಿ

ಲಂಡನ್ (ಎಎಫ್‌ಪಿ): ಮಾರುಕಟ್ಟೆಯಲ್ಲಿನ ಬೇಡಿಕೆಗೆ ಅನುಸಾರವಾಗಿ ಕಚ್ಚಾ ತೈಲ ಉತ್ಪಾದನೆ ಹೆಚ್ಚಳಕ್ಕೆ ಅನುಮತಿ ನೀಡಲು ತೈಲ ಉತ್ಪಾದನೆ ಮತ್ತು ರಫ್ತು ಮಾಡುವ ದೇಶಗಳ ಒಕ್ಕೂಟ (ಒಪೆಕ್) ಗುರುವಾರ ನಿರ್ಧರಿಸಿದೆ.

'ರಷ್ಯಾ ಮತ್ತು ಕಜಕಸ್ತಾನ ಕ್ರಮವಾಗಿ ಪ್ರತಿದಿನ 130,000 ಹಾಗೂ 20,000 ಬ್ಯಾರಲ್‌ಗಳಷ್ಟು ಹೆಚ್ಚು ಕಚ್ಚಾ ತೈಲ ಉತ್ಪಾದನೆ ಮಾಡಲು ಅನುಮತಿ ನೀಡಲಾಗಿದೆ' ಎಂದು ಸದಸ್ಯ ರಾಷ್ಟ್ರಗಳ ಸಚಿವರ ಮಟ್ಟದ ಸಭೆಯ ನಂತರ ಒಪೆಕ್ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ವಿದ್ವಾನ್ ಬಾಬು ರೈಗೆ 'ಶೇಣಿ ಪ್ರಶಸ್ತಿ'



ಮಂಗಳೂರು: ಸುರತ್ಕಲ್‌ನ ಶೇಣಿ ಗೋಪಾಲಕೃಷ್ಣ ಭಟ್ ಚಾರಿಟಬಲ್ ಟ್ರಸ್ಟ್ ವತಿಯಿಂದ ನೀಡುವ 2020ನೇ ಸಾಲಿನ 'ಶೇಣಿ ಪ್ರಶಸ್ತಿ'ಗೆ ಹಿರಿಯ ಮೃದಂಗ ವಾದಕ ವಿದ್ವಾನ್ ಬಾಬು ರೈ ಕೋಟೆಕಾರ್ ಆಯ್ಕೆಯಾಗಿದ್ದಾರೆ.

'ಮಾ.14ರಂದು ಸಂಜೆ 4.30ಕ್ಕೆ ನಗರದ ಶರವು ಮಹಾಗಣಪತಿ ದೇವಸ್ಥಾನದ ಆವರಣದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. 97 ವರ್ಷದ ಬಾಬು ರೈ ಅವರಿಗೆ ಶೇಣಿ ಗೋಪಾಲಕೃಷ್ಣ ಭಟ್ಟರೊಂದಿಗಿದ್ದ ಒಡನಾಟ ಹಾಗೂ ಕಲಾ ಪ್ರೌಢಿಮೆಯನ್ನು ಗುರುತಿಸಿ, ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯ ಜತೆಗೆ ₹25 ಸಾವಿರ ಗೌರವ ಧನ ನೀಡಲಾಗುತ್ತದೆ' ಎಂದು ಟ್ರಸ್ಟ್ ಅಧ್ಯಕ್ಷ ಎಂ.ಆರ್.ವಾಸುದೇವ ತಿಳಿಸಿದರು.

ಬಿಎಂಟಿಸಿ ಬಸ್– ಬೈಕ್ ಅಪಘಾತ; ಕಾನ್‌ಸ್ಟೆಬಲ್ ಸಾವು

ಬೆಂಗಳೂರು: ಬ್ಯಾಡರಹಳ್ಳಿ ಬಳಿ ಬಿಎಂಟಿಸಿ ಬಸ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಕಾನ್‌ಸ್ಟೆಬಲ್ ರಾಮಾಚಾರಿ (47) ಮೃತಪಟ್ಟಿದ್ದಾರೆ.



ರಾಮಾಚಾರಿ

'ನಗರದ ಸಿಟಿ ಮಾರ್ಕೆಟ್ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ ರಾಮಾಚಾರಿ, ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ಕೆಂಪೇಗೌಡ ನಗರದಲ್ಲಿ ನೆಲೆಸಿದ್ದರು. ಕೆಲಸ ಮುಗಿಸಿಕೊಂಡು ಗುರುವಾರ ಮಧ್ಯಾಹ್ನ ಬೈಕ್‌ನಲ್ಲಿ ಮನೆಯತ್ತ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಬಸ್ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಬೈಕ್‌ಗೆ ಬಸ್ ಗುದ್ದಿತ್ತು. ಬಸ್ಸಿನ ಹಿಂದಿನ ಚಕ್ರವು ಬೈಕ್ ಹಾಗೂ ಸವಾರ ರಾಮಾಚಾರಿ ಮೇಲೆಯೇ ಹರಿದು ಹೋಗಿದೆ. ತೀವ್ರ ಗಾಯಗೊಂಡು ರಾಮಾಚಾರಿ ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಸ್ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಆತನನ್ನು ವಶಕ್ಕೆ ಪಡೆದು, ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿದೆ.

ಜಾಗತಿಕ ರ‍್ಯಾಂಕಿಂಗ್ ಪಟ್ಟಿಗೆ ಬೆಂಗಳೂರಿನ 2 ಸಂಸ್ಥೆಗಳು

ನವದೆಹಲಿ (ಪಿಟಿಐ): 'ಕ್ಯೂಎಸ್ ವರ್ಲ್ಡ್ ಯೂನಿವರ್ಸಿಟಿ ರ‍್ಯಾಂಕಿಂಗ್' ನಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಸೇರಿ ದೇಶದ 12 ಉನ್ನತ ಶಿಕ್ಷಣ ಸಂಸ್ಥೆಗಳು ಸ್ಥಾನ ಪಡೆದಿವೆ.

'ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರ ತಂದಿರುವ ಸುಧಾರಣೆಗಳಿಂದಾಗಿ ದೇಶದ ಶೈಕ್ಷಣಿಕ ಸಂಸ್ಥೆಗಳು ಜಾಗತಿಕ ರ‍್ಯಾಂಕಿಂಗ್ ಪಡೆಯಲು ಸಾಧ್ಯವಾಗಿದೆ' ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ಗುರುವಾರ ಹೇಳಿದರು.

ರ‍್ಯಾಂಕಿಂಗ್‌ಗೆ ವಿವಿಧ ದೇಶಗಳ ಒಟ್ಟು 100 ಶೈಕ್ಷಣಿಕ ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ. ಬಾಂಬೆ, ದೆಹಲಿ, ಮದ್ರಾಸ್, ಖರಗಪುರ ಹಾಗೂ ಗುವಾಹಟಿ ಐಐಟಿಗಳು, ಐಐಎಂ–ಅಹಮದಾಬಾದ್, ಜವಾಹರಲಾಲ್ ನೆಹರೂ ವಿ.ವಿ., ಅಣ್ಣಾ ವಿ.ವಿ., ದೆಹಲಿ ವಿ.ವಿ. ಹಾಗೂ ಒ.ಪಿ.ಜಿಂದಾಲ್ ವಿ.ವಿ. ಈ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

ಪೆಟ್ರೋಲಿಯಂ ಎಂಜಿನಿಯರಿಂಗ್ ವಿಭಾಗದಲ್ಲಿ ಐಐಟಿ–ಮದ್ರಾಸ್ 30ನೇ ರ‍್ಯಾಂಕ್ ಪಡೆದಿದೆ. ಮಿನರಲ್ಸ್ ಆ್ಯಂಡ್ ಮೈನಿಂಗ್ ಎಂಜಿನಿಯರಿಂಗ್ ವಿಭಾಗದಲ್ಲಿ ಬಾಂಬೆ ಹಾಗೂ ಖರಗಪುರ ಐಐಟಿಗಳು ಕ್ರಮವಾಗಿ 41 ಹಾಗೂ 44ನೇ ರ‍್ಯಾಂಕ್ ಪಡೆದಿವೆ.

ವಿಪ್ರೊ ತೆಕ್ಕೆಗೆ ಕ್ಯಾಪ್ಕೊ

ನವದೆಹಲಿ (ಪಿಟಿಐ): ಲಂಡನ್‌ನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಕ್ಯಾಪ್ಕೊ ಕಂಪನಿಯನ್ನು ವಿಪ್ರೊ ₹ 10,500 ಕೋಟಿಗೂ ಹೆಚ್ಚಿನ ಮೊತ್ತಕ್ಕೆ ಖರೀದಿಸಲಿದೆ. ಈ ಖರೀದಿಯು ವಿಪ್ರೊ ಪಾಲಿನ ಅತಿದೊಡ್ಡ ಸ್ವಾಧೀನ ಪ್ರಕ್ರಿಯೆ ಎಂದು ಕರೆಸಿಕೊಳ್ಳಲಿದೆ.

ಈ ಕಂಪನಿಯ ಖರೀದಿಯ ನಂತರ ವಿಪ್ರೊಗೆ, ಬ್ಯಾಂಕಿಂಗ್ ಮತ್ತು ಹಣಕಾಸು ವಲಯಗಳ 30 ದೊಡ್ಡ ಗ್ರಾಹಕರು ಲಭ್ಯವಾಗಲಿದ್ದಾರೆ. 'ಕ್ಯಾಪ್ಕೊ ಕಂಪನಿಯ ಸ್ವಾಧೀನದಿಂದಾಗಿ ನಾವು ನಮ್ಮ ಹಣಕಾಸು ಸೇವಾ ವಹಿವಾಟನ್ನು ವಿಸ್ತರಿಸಲು ಸಾಧ್ಯವಾಗುತ್ತದೆ' ಎಂದು ವಿಪ್ರೊ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಥಿಯರಿ ಡೆಲಾಪೋರ್ಟ್ ಹೇಳಿದ್ದಾರೆ.

ಸ್ವಾಧೀನದ ನಂತರವೂ ಕ್ಯಾಪ್ಕೊ ಕಂಪನಿಯು, ಅದರ ಈಗಿನ ಸಿಇಒ ಲ್ಯಾನ್ಸ್ ಲೆವಿ ಅವರ ನೇತೃತ್ವದಲ್ಲಿ ಪ್ರತ್ಯೇಕ ಸಂಸ್ಥೆಯಾಗಿಯೇ ಕೆಲಸ ನಿರ್ವಹಿಸಲಿದೆ. ಆದರೆ, ಲೆವಿ ಅವರು ತಮ್ಮ ಕೆಲಸಗಳ ಬಗ್ಗೆ ಡೆಲಾಪೋರ್ಟ್ ಅವರಿಗೆ ಕಾಲಕಾಲಕ್ಕೆ ವಿವರ ನೀಡಲಿದ್ದಾರೆ.

ಶಿರಾಡಿ: ಹೆದ್ದಾರಿಗೆ ಬಂದ ಕಾಡಾನೆ ಕೆಲ ನಿಮಿಷ ಸಂಚಾರ ಬಂದ್



ರಾಷ್ಟ್ರೀಯ ಹೆದ್ದಾರಿ ಬಳಿ ಕಾಣಿಸಿಕೊಂಡ ಕಾಡಾನೆ

ಸಕಲೇಶಪುರ: ಶಿರಾಡಿ ಘಾಟ್‌ನ ಬೆಂಗಳೂರು– ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ಸಂಜೆ ಕಾಡಾನೆಯೊಂದು ಕಾಣಿಸಿಕೊಂಡಿದ್ದರಿಂದ, ಸುಮಾರು 10 ನಿಮಿಷಗಳವರೆಗೆ ಈ ಮಾರ್ಗದಲ್ಲಿ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು.

ಘಾಟ್‌ನ ಡಬಲ್ ಟರ್ನ್ ಬಳಿ, ಭಾರಿ ಎತ್ತರದ ಒಂಟಿ ಸಲಗವು ರಸ್ತೆಯ ಒಂದು ಬದಿಯಿಂದ ಮತ್ತೊಂದು ಬದಿಗೆ ಹೊರಟಿತ್ತು. ರಸ್ತೆಯ ಬದಿಯಲ್ಲಿ ಇಳಿಜಾರು ಪ್ರದೇಶವಿದ್ದ ಕಾರಣ ರಸ್ತೆ ಬದಿಯಲ್ಲಿಯೇ ನಿಂತಿದೆ. ಆನೆ ಎಲ್ಲಿ ದಾಳಿ ಮಾಡುತ್ತದೆಯೋ ಎಂಬ ಭಯದಿಂದ ಚಾಲಕರು ತಮ್ಮ ವಾಹನಗಳನ್ನು ರಸ್ತೆಯಲ್ಲೇ ಕೆಲ ನಿಮಿಷಗಳವರೆಗೆ ನಿಲ್ಲಿಸಿದ್ದಾರೆ. ರಸ್ತೆ ಬದಿ ನಿಂತಿದ್ದ ಕಾಡಾನೆಯನ್ನು ಪ್ರಯಾಣಿಕರು ಮೊಬೈಲ್ ಕ್ಯಾಮೆರಾಗಳಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಸಿಎಲ್‌ಪಿ ಸಭೆ ಬಳಿಕ ಕಾಂಗ್ರೆಸ್ ನಿಲುವು ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ರಾಷ್ಟ್ರ–ಒಂದು ಚುನಾವಣೆ ವಿಷಯದಲ್ಲಿ ಚರ್ಚೆ ನಡೆಸುವ ತೀರ್ಮಾನಕ್ಕೆ ಬಂದಿದ್ದ ಕಾಂಗ್ರೆಸ್ ನಾಯಕರು, ಶಾಸಕಾಂಗ ಪಕ್ಷದ ಸಭೆಯ ಬಳಿಕ ತಮ್ಮ ನಿಲುವು ಬದಲಾಯಿಸಿದರು.

'ಒಂದು ರಾಷ್ಟ್ರ– ಒಂದು ಚುನಾವಣೆ'ಯಲ್ಲಿ ತಮ್ಮ ವಾದ ಮಂಡಿಸಲು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿ ಕಾಂಗ್ರೆಸ್‌ನ 19 ಶಾಸಕರು ತಯಾರಿ ನಡೆಸಿಕೊಂಡು ಬಂದಿದ್ದರು. ಆದರೆ, ವಿಶೇಷ ಚರ್ಚೆಯ ಬಗ್ಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ(ಸಿಎಲ್‌ಪಿ) ಸಭೆಯಲ್ಲಿ ಶಾಸಕ ಕೆ.ಆರ್.ರಮೇಶ್ ಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ವಿಶೇಷ ಚರ್ಚೆಯಲ್ಲಿ ಭಾಗವಹಿಸುವುದರ ಸಂಬಂಧ ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಚೇರಿಯಿಂದ ಸಭಾಧ್ಯಕ್ಷರ ಕಚೇರಿಗೆ ಪತ್ರವನ್ನೂ ಬರೆಯಲಾಗಿತ್ತು. ಆದರೆ, ಗುರುವಾರ ಬೆಳಿಗ್ಗೆ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೆ.ಆರ್. ರಮೇಶ್‌ಕುಮಾರ್ ಅವರು ಈ ಚರ್ಚೆಯ ಬಗ್ಗೆ ತಾತ್ವಿಕ ನೆಲೆಯಲ್ಲಿ ತಮ್ಮ ತಕರಾರು ಎತ್ತಿದರು.

'ಈಗ ಒಂದು ದೇಶ ಒಂದು ಚುನಾವಣೆ ಬಗ್ಗೆ ಚರ್ಚೆಯ ಅಗತ್ಯವಿಲ್ಲ. ಅದನ್ನು ಬೇಕಿದ್ದರೆ ಸಂಸತ್ತಿನಲ್ಲಿ ಮಾಡಿಕೊಳ್ಳಲಿ. ನಮ್ಮ ರಾಜ್ಯವೇ ಏಕೆ ಮೊದಲು ಮಾಡಿತು ಎಂಬ ಹೆಗ್ಗಳಿಕೆ ಪಡೆಯಬೇಕು. ಇದಕ್ಕೆ ನೀವೆಲ್ಲ ಒಪ್ಪಿಕೊಂಡಿದ್ದು ಯಾಕೆ?' ಎಂದು ಪ್ರಶ್ನಿಸಿದರು ಎಂದು ಮೂಲಗಳು ಹೇಳಿವೆ.

'ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಒಪ್ಪಿಕೊಂಡ ಮಾತ್ರಕ್ಕೆ ಹಾಗೆ ನಡೆದುಕೊಳ್ಳಬೇಕೆಂದೇನೂ ಇಲ್ಲ. ಹಿಂದೆ ಬಿಜೆಪಿಯವರು ಬಿಎಸಿ ಸಭೆಯಲ್ಲಿ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದರೆ? ನೀವು ಏಕೆ ಸಹಕಾರ ನೀಡುತ್ತೀರಿ' ಎಂದು ರಮೇಶ್ ಕುಮಾರ್ ಪ್ರಶ್ನಿಸಿದರು ಎಂದು ಹೇಳಲಾಗಿದೆ.

ಅಂತಿಮವಾಗಿ ರಮೇಶ್ ಕುಮಾರ್ ಅವರ ಮಾತನ್ನು ಒಪ್ಪಿದ ಸಿದ್ದರಾಮಯ್ಯ 'ಈ ವಿಶೇಷ ಚರ್ಚೆಯಲ್ಲಿ ಭಾಗವಹಿಸುವುದು ಬೇಡ. ಚರ್ಚೆ ನಡೆಯಲು ಬಿಡುವುದು ಬೇಡ' ಎಂದೂ ಸಭೆಯಲ್ಲಿ ಹೇಳಿದರು.

ಚುನಾವಣೆ ವ್ಯವಸ್ಥೆ ಸುಧಾರಣೆ: ಕಾಗೇರಿ ಪ್ರತಿಪಾದನೆ

ಬೆಂಗಳೂರು: ಬಹು ಪಕ್ಷ ವ್ಯವಸ್ಥೆ, ಮೈತ್ರಿ ಸರ್ಕಾರಗಳು, ಮಧ್ಯಂತರ ಚುನಾವಣೆಗಳಿಂದ ಈ ಕಾಲದಲ್ಲಿ ಚುನಾವಣೆಯಲ್ಲಿ ಏಕರೂಪತೆ ತರುವುದು ದೊಡ್ಡ ಸವಾಲು. ಈ ಸವಾಲು ಹಾಗೂ ಸಮಸ್ಯೆಗಳ ನಿವಾರಣೆಗೆ ಚುನಾವಣೆ ವ್ಯವಸ್ಥೆ ಸುಧಾರಣೆ ಕುರಿತು ವ್ಯಾಪಕ ಚರ್ಚೆಯಾಗಬೇಕು ಎಂದು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರತಿಪಾದಿಸಿದರು.

ವಿಧಾನಸಭೆಯಲ್ಲಿ ಗುರುವಾರ ನಡೆದ 'ಒಂದು ರಾಷ್ಟ್ರ– ಒಂದು ಚುನಾವಣೆ' ವಿಶೇಷ ಚರ್ಚೆ ಆರಂಭಿಸುವ ಮುನ್ನ ಅವರು ಪ್ರಾಸ್ತಾವಿಕ ಮಾತುಗಳನ್ನು ಆಡಿದರು.

ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಿ ಒಂದು ರಾಷ್ಟ್ರ ಒಂದು ಚುನಾವಣೆ ಮಾಡಬಹುದು. ಈ ಪ್ರಕ್ರಿಯೆಯಲ್ಲಿ ಸಂವಿಧಾನಬದ್ಧವಾದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಹೊರತುಪಡಿಸಲೇಬೇಕು ಎಂದರು.

ಏಕಕಾಲಕ್ಕೆ ಚುನಾವಣೆ ನಡೆಸಿದರೆ ಮಾನವ ಶ್ರಮ, ಸಮಯ ಹಾಗೂ ಭಾರಿ ಮೊತ್ತದ ಹಣ ಉಳಿತಾಯವಾಗುತ್ತದೆ. ಮೂಲಸೌಲಭ್ಯ, ಸಿಬ್ಬಂದಿ, ರಕ್ಷಣಾ ವೆಚ್ಚ, ಮತ ಎಣಿಕೆ– ಎಲ್ಲದರಲ್ಲೂ ದೇಶದ ಆರ್ಥಿಕತೆಯ ಮೇಲಿನ ಹೊರೆ ಕಡಿಮೆಯಾಗುತ್ತದೆ. ಈಚಿನ ವರ್ಷಗಳಲ್ಲಿ ಶೇಕಡವಾರು ಮತದಾನ ತೀವ್ರವಾಗಿ ಕುಸಿತ ಕಂಡುಬರುತ್ತಿರುವ ಕಾರಣ ಕಡ್ಡಾಯ ಮತದಾನ ಜಾರಿ ಮಾಡಬೇಕು ಎಂಬ ಸಲಹೆ ನೀಡಿದರು. ಏಕಕಾಲಕ್ಕೆ ಚುನಾವಣೆ ನಡೆಸಲು ಸಂವಿಧಾನದ ಐದು ವಿಧಿಗಳಿಗೆ ತಿದ್ದುಪಡಿ ಮಾಡಬೇಕಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

'ಆರ್‌ಎಸ್‌ಎಸ್ ಬಗ್ಗೆ ಹೆಮ್ಮೆ ಇದೆ'

ಬೆಂಗಳೂರು: 'ಹೌದು, ನಾನು ಆರ್‌ಎಸ್‌ಎಸ್‌ನಿಂದ ಬಂದಿದ್ದೇನೆ. ಪ್ರಧಾನಿ ಮೋದಿಯವರೂ ಆರ್‌ಎಸ್‌ಎಸ್‌ನಿಂದ ಬಂದವರು. ಆ ಬಗ್ಗೆ ನಮಗೆ ಹೆಮ್ಮೆ ಇದೆ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಾಂಗ್ರೆಸ್‌ಗೆ ತಿರುಗೇಟು ನೀಡಿದರು.

ವಿಧಾನಸಭೆಯಲ್ಲಿ ದಿನದ ಕಲಾಪದ ಕೊನೆಯಲ್ಲಿ ಕಾಂಗ್ರೆಸ್ ಸದಸ್ಯರು ಆರ್‌ಎಸ್‌ಎಸ್ ವಿರುದ್ಧ ಘೋಷಣೆ ಕೂಗಿದಾಗ ಯಡಿಯೂರಪ್ಪ ಸಿಟ್ಟಿಗೆದ್ದು, 'ಹೌದು ನಾವೆಲ್ಲ ಆರ್‌ಎಸ್‌ಎಸ್‌ನವರು ಏನೀಗ? ಏನ್ ಮಾಡ್ತೀರಿ' ಎಂದು ಪ್ರಶ್ನಿಸಿದರು. 'ಆರ್‌ಎಸ್‌ಎಸ್ ಅನ್ನು ಟೀಕಿಸಿ ಟೀಕಿಸಿ ಈ ಸ್ಥಿತಿಗೆ ಬಂದಿದ್ದೀರಿ. ಇಲ್ಲಿ ಅರವತ್ತು ಎಪ್ಪತ್ತು ಜನ ಇದ್ದೀರಿ ಎಂದು ಕೂಡಿಕೊಳ್ಳಿ. ಹೀಗೆ ಮುಂದುವರಿಸಿದರೆ ಕಾಂಗ್ರೆಸ್ ನಾಮಾವಶೇಷ ಆಗುತ್ತದೆ' ಎಂದು ಹೇಳಿದರು.

ಆರ್‌ಎಸ್‌ಎಸ್ ದೇಶದ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಸಂಘಟನೆ ಎಂದೂ ಯಡಿಯೂರಪ್ಪ ಹೇಳಿದರು.

ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, 'ಈ ಚರ್ಚೆಗೂ ಆರ್‌ಎಸ್‌ಎಸ್‌ಗೂ ಸಂಬಂಧ ಇಲ್ಲ. ಆ ಸಂಘಟನೆಯ ಬಗ್ಗೆ ಇಲ್ಲಿ ಚರ್ಚಿಸುವುದು ಅಪ್ರಸ್ತುತ' ಎಂದು ತಿಳಿಸಿದರು.

ಕ್ರಿಯಾಲೋಪ ಎತ್ತಿದ ಎಚ್‌.ಕೆ.ಪಾಟೀಲ

'ಒಂದು ರಾಷ್ಟ್ರ– ಒಂದು ಚುನಾವಣೆ' ಕುರಿತು ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ ಯಾವ ನಿಯಮದಡಿ ಅವಕಾಶ ನೀಡಿ ಮಂಡಿಸಲಾಗಿದೆ ಎಂದು ಕಾಂಗ್ರೆಸ್‌ನ ಎಚ್‌.ಕೆ.ಪಾಟೀಲ ಕ್ರಿಯಾಲೋಪ ಎತ್ತಿದರು.

ವಿಧಾನಸಭೆಯಲ್ಲಿ ಸರ್ಕಾರಿ ಕಲಾಪ ಅಥವಾ ಗೊತ್ತುವಳಿ ನಿರ್ಣಯ ಮತ್ತು ಖಾಸಗಿ ಸದಸ್ಯರ ನಿರ್ಣಯ ಮಂಡಿಸಲು ಅವಕಾಶವಿದೆ. ಕೇಂದ್ರ ಸರ್ಕಾರದ ಯಾವುದೇ ಶ್ವೇತ ಪತ್ರ,ಕರಡು ಮಸೂದೆ, ಇನ್ನಾವುದೇ ಪ್ರಸ್ತಾವನೆ ಇಲ್ಲದೇ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳಲ್ಲಿ ಅವಕಾಶವೇ ಇಲ್ಲ ಎಂದು ಪಾಟೀಲ ವಾದಿಸಿದರು.

ಸುದ್ದಿ 2 ನಿಮಿಷ

ತ್ರಿಸದಸ್ಯ ಸಮಿತಿ ರಚನೆ ಸ್ವಾಗತಾರ್ಹ: ತೋಂಟದ ಶ್ರೀ

ಗದಗ: ಹಿಂದುಳಿದ ಜನರಿಗೆ ಅವಕಾಶ ಕಲ್ಪಿಸುವ ಕೆಲಸವೇ ಸರ್ಕಾರದ ಮೂಲ ಉದ್ದೇಶ ಆಗಿರಬೇಕು ಎಂದು ತೋಂಟದ ಸಿದ್ಧರಾಮ ಸ್ವಾಮೀಜಿ ಅಭಿಪ್ರಾಯಪಟ್ಟರು.

ಗುರುವಾರ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, 'ವಿವಿಧ ಸಮುದಾಯಗಳು ಮೀಸಲಾತಿಯಲ್ಲಿ ಹೆಚ್ಚಿನ ಪಾಲು ಪಡೆಯಲು, ಪ್ರವರ್ಗಗಳಲ್ಲಿ ಬದಲಾವಣೆ ಮತ್ತು ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಇಟ್ಟಿರುವ ಬೇಡಿಕೆಗಳ ಕುರಿತು ಪರಿಶೀಲನೆ ನಡೆಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತ್ರಿಸದಸ್ಯ ಸಮಿತಿ ರಚಿಸಿದ್ದು ಸ್ವಾಗತಾರ್ಹ. ಸರ್ಕಾರ ಈ ಕೆಲಸವನ್ನು ನಾಲ್ಕು ತಿಂಗಳ ಹಿಂದೆಯೇ ಮಾಡಬೇಕಿತ್ತು. ತಡವಾಗಿಯಾದರೂ ಸಮಿತಿ ರಚಿಸಿದ್ದು ಸಂತಸದ ಸಂಗತಿ' ಎಂದು ತೋಂಟದ ಶ್ರೀಗಳು ತಿಳಿಸಿದರು.

'ಮೀಸಲಾತಿಗೆ ಸಂಬಂಧಿಸಿದಂತೆ ಸಮಗ್ರ ದಿಕ್ಕಿನಲ್ಲಿ ಅಧ್ಯಯನ ನಡೆಯಬೇಕು. ಮೀಸಲಾತಿಯನ್ನು ಉಳ್ಳವರೇ ಪಡೆಯುವಂತಾಗಬಾರದು. ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಸೌಲಭ್ಯ ದೊರೆಯಬೇಕಿದೆ. ಈ ವಿಚಾರದಲ್ಲಿ ಸಚಿವರು, ಶಾಸಕರು, ರಾಜಕಾರಣಿಗಳು ಪಕ್ಷಭೇದ ಮರೆತು ಹೋರಾಟ ಮಾಡಬೇಕು' ಎಂದು ಹೇಳಿದರು.



ಮಾಜಿ ಸಚಿವ ರಮೇಶ ಜಾರಕಿಹೊಳಿ ಅವರ ಸಿ.ಡಿ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಶ್ರೀಗಳು, 'ಬೇವಿನ ಬೀಜವ ಬಿತ್ತಿ ಮಾವಿನ ಫಲ ಬೇಕೆಂದರೆ ಹೇಗೆ' ಎಂದು ಪ್ರಶ್ನಿಸಿದರು.

ಮೀಸಲಾತಿಗೆ ಸಮಿತಿ ರಚನೆ ಕುತಂತ್ರ– ಸಿದ್ದರಾಮಯ್ಯ

ಬೆಂಗಳೂರು: 'ಮೀಸಲಾತಿ ಬೇಡಿಕೆಗಳ ಪರಿಶೀಲನೆಗೆ ಉನ್ನತಾಧಿಕಾರದ ಸಮಿತಿ ರಚಿಸುವ ರಾಜ್ಯ ಸರ್ಕಾರದ ನಿರ್ಧಾರ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಕುತಂತ್ರ ಅಷ್ಟೆ. ಇದರಲ್ಲಿ ಲವಲೇಶದಷ್ಟು ಪ್ರಾಮಾಣಿಕತೆ ಇಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

'ಮೀಸಲಾತಿ ಬಿಕ್ಕಟ್ಟನ್ನು ಶಾಶ್ವತವಾಗಿ ಪರಿಹರಿಸುವ ಪ್ರಾಮಾಣಿಕ ಉದ್ದೇಶವನ್ನು ಮುಖ್ಯಮಂತ್ರಿ ಹೊಂದಿದ್ದರೆ, ಪೂರ್ಣಗೊಂಡು ಸಿದ್ಧ ಇರುವ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ ವರದಿಯನ್ನು ಒಪ್ಪಿಕೊಂಡು ಅನುಷ್ಠಾನಗೊಳಿಸಲಿ. ಮೀಸಲಾತಿ ಹೆಚ್ಚಳ ಮತ್ತು ಪ್ರವರ್ಗಗಳ ಬದಲಾವಣೆ ಬೇಡಿಕೆಯನ್ನು ಮೀಸಲಾತಿ ಹೆಚ್ಚಳದ ಮೂಲಕ ಮಾತ್ರ ಶಾಶ್ವತವಾಗಿ ಪರಿಹರಿಸಲು ಸಾಧ್ಯ. ರಾಜ್ಯ ಸರ್ಕಾರ ತಕ್ಷಣ ಈ ಬೇಡಿಕೆಯನ್ನು ಕೇಂದ್ರ ಸರ್ಕಾರದ ಮುಂದಿಟ್ಟು ಒತ್ತಾಯಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

'ಈಗ ಎದ್ದಿರುವ ಮೀಸಲಾತಿ ವಿವಾದ ಬಿಜೆಪಿ ಮತ್ತು ಸಂಘ ಪರಿವಾರದ ಕುಟಿಲ ರಾಜಕಾರಣದ ಫಲ. ಎಚ್ಚರ ವಹಿಸದೆ ಹೋದರೆ ಇವರು ಹಚ್ಚಿರುವ ವಿವಾದದ ಬೆಂಕಿಗೆ ಇವರೇ ಸ್ವಯಂ ಬಲಿ ಆಗಲಿದ್ದಾರೆ' ಎಂದೂ ಹೇಳಿದ್ದಾರೆ.

ಜಾತಿ ಗಣತಿ ವರದಿ ಬಿಡುಗಡೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಸಲಾತಿಗಾಗಿ ವಿವಿಧ ಸಮುದಾಯದವರು ನಡೆಸಿರುವ ಹೋರಾಟ ಗುರುವಾರ ವಿಧಾನ ಪರಿಷತ್‌ನಲ್ಲಿಯೂ ಪ್ರತಿಧ್ವನಿಸಿತು. ಪಕ್ಷಭೇದ ಮರೆತು ಸದಸ್ಯರು ಈ ವಿಷಯವನ್ನು ಪ್ರಸ್ತಾಪಿಸಿದರು.

ಎಚ್‌. ಕಾಂತರಾಜು ನೇತೃತ್ವದ ಆಯೋಗದ ಸಾಮಾಜಿಕ-ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಸರ್ಕಾರ ಸ್ವೀಕರಿಸಿ, ಬಹಿರಂಗಪಡಿಸಿದರೆ ಮೀಸಲಾತಿಗೆ ಸಂಬಂಧಿಸಿದ ಎಷ್ಟೋ ಸಮಸ್ಯೆಗಳು ಪರಿಹಾರವಾಗಲಿವೆ ಎಂದು ಸದಸ್ಯರು ಒಕ್ಕೊರಲಿನಿಂದ ಪ್ರತಿಪಾದಿಸಿದರು.

ಗಮನ ಸೆಳೆಯುವ ಸೂಚನೆ ಮಂಡಿಸಿದ ಬಿಜೆಪಿಯ ಕೆ.ಪಿ. ನಂಜುಂಡಿ, 'ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಜಾತಿ ಜನಗಣತಿ ಸಮೀಕ್ಷಾ ವರದಿ ಸಿದ್ಧವಾಗಿ ಎರಡು ವರ್ಷಗಳೇ ಆಗಿವೆ. ಹಿಂದುಳಿದವರು ಮಾತ್ರವಲ್ಲದೆ, ಮೇಲ್ವರ್ಗದವರೂ ಈಗ ಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಯಾವ ಸಮುದಾಯದವರು ಎಷ್ಟಿದ್ದಾರೆ, ಯಾರಿಗೆ ಮೀಸಲಾತಿ ಅವಶ್ಯಕತೆ ಇದೆ ಎಂಬುದು ಈ ವರದಿಯಿಂದ ಸ್ಪಷ್ಟವಾಗಲಿದ್ದು, ಅದನ್ನು ಬಿಡುಗಡೆ ಮಾಡುವುದು ಹೆಚ್ಚು ಪ್ರಸ್ತುತ' ಎಂದರು.

ಬಿಜೆಪಿಯ ಎಚ್‌. ವಿಶ್ವನಾಥ್, 'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ₹162 ಕೋಟಿ ವೆಚ್ಚದಲ್ಲಿ ವೈಜ್ಞಾನಿಕವಾಗಿ ಈ ಜಾತಿಗಣತಿ ಮಾಡಿಸಿದ್ದಾರೆ. ಅವರ ಸರ್ಕಾರ ಮತ್ತು ನಂತರ ಅಧಿಕಾರ ನಡೆಸಿದ ಸರ್ಕಾರಗಳು ವರದಿ ಬಿಡುಗಡೆಗೆ ಏಕೆ ಹಿಂದೇಟು ಹಾಕುತ್ತಿವೆ ಎಂಬುದು ಅರ್ಥವಾಗುತ್ತಿಲ್ಲ' ಎಂದರು.

'ಸಂವಿಧಾನ ಉಲ್ಲಂಘನೆ'

'ಧರ್ಮಾತೀತ ಮತ್ತು ಜಾತ್ಯತೀತವಾಗಿ ಕೆಲಸ ಮಾಡುತ್ತೇವೆ ಎಂದು ಪ್ರಮಾಣ ವಚನ ಸ್ವೀಕರಿಸಿರುವ ಸಚಿವರು ಅವರ ಜಾತಿಗೆ ಸಂಬಂಧಿಸಿದ ಮೀಸಲಾತಿ ಹೋರಾಟದಲ್ಲಿ ನೇರವಾಗಿ ಪಾಲ್ಗೊಳ್ಳುತ್ತಿದ್ದಾರೆ. ಇದು ಸಂವಿಧಾನದ ಉಲ್ಲಂಘನೆ' ಎಂದು ಜೆಡಿಎಸ್‌ನ ಮರಿತಿಬ್ಬೇಗೌಡ ದೂರಿದರು.

'ಜಾತಿಗಣತಿ ವರದಿ ಬಿಡುಗಡೆ ಮಾಡುವುದು ಬಿಟ್ಟು, ಕಾಲಹರಣ ಮಾಡುವ ಉದ್ದೇಶದಿಂದ ಸರ್ಕಾರವು ತ್ರಿಸದಸ್ಯ ಸಮಿತಿ ರಚಿಸುವ ಬಗ್ಗೆ ಮಾತನಾಡುತ್ತಿದೆ' ಎಂದೂ ಅವರು ಟೀಕಿಸಿದರು.



ವಿಧಾನ ಮಂಡಲದಲ್ಲಿ

ಒಂದೇ ಚುನಾವಣೆ: ಇಲ್ಲ ಮನ್ನಣೆ

ಒಂದನೇ ಪುಟದಿಂದ

ಜೆಡಿಎಸ್ ಸದಸ್ಯರು ಚರ್ಚೆಯನ್ನು ವಿರೋಧಿಸಿ ಸಭಾತ್ಯಾಗ ನಡೆಸಿದರು.

'ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಣತಿಯಂತೆ ವಿಧಾನಸಭಾಧ್ಯಕ್ಷರು ಈ ಚರ್ಚೆ ನಡೆಸುತ್ತಿದ್ದಾರೆ. ಈ ಚರ್ಚೆಯನ್ನು ವಿರೋಧಿಸುತ್ತೇವೆ' ಎಂದು ಕಾಂಗ್ರೆಸ್ ಸದಸ್ಯರು ಹರಿಹಾಯ್ದರು.

'ಈ ಚರ್ಚೆಗೂ ಆರ್‌ಎಸ್‌ಎಸ್‌ಗೂ ಸಂಬಂಧವಿಲ್ಲ. ಎಲ್ಲ ವಿಧಾನಸಭೆಗಳಲ್ಲೂ ಚರ್ಚೆ ನಡೆಸಬೇಕು ಎಂದು ಅಖಿಲ ಭಾರತ ವಿಧಾನಸಭಾಧ್ಯಕ್ಷರ ಸಮಾವೇಶದಲ್ಲಿ ತೀರ್ಮಾನವಾಗಿದೆ. ಈ ಚರ್ಚೆಗೆ ನಮ್ಮ ರಾಜ್ಯವೇ ನಾಂದಿ ಹಾಡಲಿ ಎಂಬ ಕಾರಣಕ್ಕೆ ಎಲ್ಲ ಪಕ್ಷಗಳ ಜತೆ ಚರ್ಚಿಸಿಯೇ ನಿಗದಿ ಮಾಡಲಾಗಿದೆ' ಎಂದು ಸಭಾಧ್ಯಕ್ಷ ಕಾಗೇರಿ ಸಮಜಾಯಿಷಿ ನೀಡಿದರು.

'ನಾವು ಇದನ್ನು ವಿರೋಧಿಸುತ್ತೇವೆ. ಗ್ರಾಮ ಪಂಚಾಯಿತಿಯಿಂದ ಹಿಡಿದು ಸಂಸತ್ ಚುನಾವಣೆವರೆಗೆ ಇದೆ. ಯಾವ ಚುನಾವಣೆ ಬಗ್ಗೆ ಚರ್ಚೆ ನಡೆಸಬೇಕು? ಈ ವಿಷಯ ಸಂಸತ್ತಿನಲ್ಲಿ ಚರ್ಚೆಯಾಗಲಿ. ಇಲ್ಲಿನ ಚರ್ಚೆಯಿಂದ ಉಪಯೋಗ ಇಲ್ಲ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಹಿಂದೆ ನೀವು ಸಂವಿಧಾನದ ವಿಚಾರ ಬಗ್ಗೆ ಚರ್ಚೆ ಏರ್ಪಡಿಸಿದ್ದೀರಿ. ಸಂವಿಧಾನಕ್ಕೂ ಈ ವಿಚಾರಕ್ಕೂ ಹೋಲಿಕೆ ಮಾಡಲು ಸಾಧ್ಯವಿಲ್ಲ. ಸಂಸದೀಯ ಮೌಲ್ಯಗಳು ವಿಷಯದ ಬಗ್ಗೆ ಮೊನ್ನೆ ಚರ್ಚೆ ನಡೆಯಿತು. ಒಳ್ಳೆ ಚರ್ಚೆ ಎಂದು ನಾವೆಲ್ಲ ಬಂದೆವು. ಆಗಲೇ ನಿಮ್ಮ ಮುಖವಾಡ ಗೊತ್ತಾಯಿತು' ಕಾಂಗ್ರೆಸ್‌ನ ಕೆ.ಆರ್.ರಮೇಶ್‌ಕುಮಾರ್ ಛೇಡಿಸಿದರು.

'ಮಹಾತ್ಮ ಗಾಂಧಿ ಕೊಂದವರಿಗೆ ಧಿಕ್ಕಾರ', 'ಆರ್‌ಎಸ್‌ಎಸ್ ಹಾಗೂ ಕೇಶವ ಕೃಪಾದ ಅಜೆಂಡಾ ಓದುತ್ತಿರುವ ಕಾಗೇರಿ ಅವರಿಗೆ ಧಿಕ್ಕಾರ', 'ಸಂವಿಧಾನದ ನಿಯಮಾವಳಿ ಗಾಳಿಗೆ ತೂರಿದ ಬಿಜೆಪಿಗೆ ಧಿಕ್ಕಾರ' ಎಂದು ಘೋಷಣೆಗಳನ್ನು ಕೂಗಿದರು.

ಪರಿಷತ್ತಿನಲ್ಲೂ ವಿರೋಧ: ವಿಧಾನ ಪರಿಷತ್‌ನಲ್ಲಿ ಚರ್ಚೆ ವಿರೋಧಿಸಿ ಮಾತನಾಡಿದ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, 'ಒಂದೇ ಚುನಾವಣೆ ನಡೆಸಬೇಕಾದರೆ ಸಂವಿಧಾನಕ್ಕೆ ತಿದ್ದುಪಡಿ ಅಗತ್ಯ. ಅಂತಹ ಅಧಿಕಾರ ಸಂಸತ್ತಿಗೆ ಇದೆ. ಒಂದು ಸಂಘಟನೆ, ಒಂದು ಪಕ್ಷದ ಕಾರ್ಯಸೂಚಿಯನ್ನು ಇಲ್ಲಿ ತರಲಾಗಿದೆ' ಎಂದು ಟೀಕಿಸಿದರು.

'ಚರ್ಚೆಗೆ ಅವಕಾಶ ಕಲ್ಪಿಸಲು ನನಗೆ ಅಧಿಕಾರವಿದೆ' ಎಂದ ಸಭಾಪತಿ ಬಸವರಾಜ ಹೊರಟ್ಟಿ, ಶುಕ್ರವಾರ ಕಲಾಪ ಸಲಹಾ ಸಮಿತಿ ಸಭೆ ನಡೆಯುವವರೆಗೂ ಚರ್ಚೆಗೆ ಸಮ್ಮತಿ ನೀಡಿದರು. ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಮಾತು ಆರಂಭಿಸುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಸಭಾಪತಿ ಪೀಠದ ಎದುರು ಧರಣಿ ನಡೆಸಿದರು. ಹೀಗಾಗಿ, ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಲಾಯಿತು.

ಶಿವರಾತ್ರಿಗೆ ರಾಬರ್ಟ್ ಜಾಗರಣೆ



ದರ್ಶನ್

ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯದ ಬಹುನಿರೀಕ್ಷಿತ ಚಿತ್ರ 'ರಾಬರ್ಟ್' ಕೊನೆಗೂ ಮಾರ್ಚ್ 11ಕ್ಕೆ ತೆರೆಯ ಮೇಲೆ ಬರುತ್ತಿದೆ.

ಹಾಗೆಂದು 'ರಾಬರ್ಟ್' ಹಾದಿಯೇನೂ ಸುಗಮವಾಗಿರಲಿಲ್ಲ. ಚಿತ್ರ ನಿರ್ಮಾಣದ ಹಂತದಲ್ಲೇ ಎದುರಾದ ಲಾಕ್‌ಡೌನ್ ಕೆಲಕಾಲ ಅಡ್ಡಿಪಡಿಸಿತು. ಕೋವಿಡ್ ಕಾರಣಕ್ಕೆ ಚಿತ್ರಮಂದಿರಗಳಲ್ಲಿ ಶೇ 50ರಷ್ಟು ಮಾತ್ರ ಆಸನ ಭರ್ತಿಗೆ ಅವಕಾಶವಿತ್ತು. ಇತಿಮಿತಿಗಳ ಮಧ್ಯೆ ಎಚ್ಚರಿಕೆಯ ಹೆಜ್ಜೆ ಇಟ್ಟಿತ್ತು ಚಿತ್ರತಂಡ.

ಈ ನಡುವೆ ಟಾಲಿವುಡ್, 'ರಾಬರ್ಟ್' ತೆಲುಗು ಅವತರಣಿಕೆ ಬಿಡುಗಡೆಗೆ ಕ್ಯಾತೆ ತೆಗೆಯಿತು. ಮಾರ್ಚ್ 11ರಂದೇ ತೆಲುಗಿನ ಎರಡು ಸಿನಿಮಾಗಳು ಬಿಡುಗಡೆ ಆಗುವ ಕಾರಣ ಕನ್ನಡ ಚಿತ್ರದ ತೆಲುಗು ಆವೃತ್ತಿ ಬಿಡುಗಡೆಗೆ ತಡೆ ಒಡ್ಡಿತ್ತು. ದಕ್ಷಿಣ ಭಾರತದ ಚಲನಚಿತ್ರ ವಾಣಿಜ್ಯ ಮಂಡಳಿಗಳ ಸಭೆಯಲ್ಲಿ ಈ ಸಮಸ್ಯೆ ಬಗೆಹರಿಯಿತು.

ಚಿತ್ರತಂಡದ ಇಚ್ಛೆಯಂತೆ 'ರಾಬರ್ಟ್' ಚಿತ್ರಮಂದಿರಗಳಲ್ಲೇ ತೆರೆ ಕಾಣುತ್ತಿದೆ. ಪ್ರಚಾರವಂತೂ ಭರ್ಜರಿಯಾಗಿ ನಡೆದಿದೆ. ಮೇಕಿಂಗ್, ಶೂಟಿಂಗ್, ಫಸ್ಟ್ ಲುಕ್‌ನಿಂದಲೇ 'ರಾಬರ್ಟ್' ನಿರೀಕ್ಷೆ ಹುಟ್ಟುಹಾಕಿದೆ.

ನಾಯಕಿ ಆಶಾ ಭಟ್ ಅವರಿಗೆ ಇದು ಕನ್ನಡದಲ್ಲಿ ಮೊದಲ ಸಿನಿಮಾ. ಪ್ರೇಕ್ಷಕ ಹೇಗೆ ಸ್ವೀಕರಿಸುತ್ತಾನೆ ಎಂದು ತಿಳಿಯುವ ಕುತೂಹಲ ಮತ್ತು ಆತಂಕ ಎರಡೂ ಅವರಲ್ಲಿ ಮನೆ ಮಾಡಿದೆ. ಉಮಾಪತಿ ಫಿಲ್ಮ್ಸ್ ಬ್ಯಾನರ್ ಅಡಿ ಉಮಾಪತಿ ಶ್ರೀನಿವಾಸ್ ಗೌಡ ನಿರ್ಮಾಪಕರು. ತರುಣ್ ಸುಧೀರ್ ನಿರ್ದೇಶಕರು. ❖



ರಿಷಬ್ ಶೆಟ್ಟಿ

ಈ ವರ್ಷ ಡಬಲ್ ವಸೂಲ್

ರಿಕ್ಕಿ, ಕಿರಿಕ್ ಪಾರ್ಟಿ ಮೂಲಕ ನಿರ್ದೇಶಕರಾಗಿ ಚಂದನವನಕ್ಕೆ ಕಾಲಿಟ್ಟ ರಿಷಬ್ ಶೆಟ್ಟಿ, ಬೆಲ್‌ಬಾಟಂನಲ್ಲಿ ನಾಯಕರಾಗಿ ತೆರೆ ಮೇಲೆ ಬಂದರು. ಕಳೆದ ವರ್ಷ ಲಾಕ್‌ಡೌನ್‌ನಲ್ಲಿ 'ಹೀರೋ' ಆದ ಇವರು ಇಂದು ತೆರೆ ಮೇಲೆ ಅನ್‌ಲಾಕ್ ಆಗುತ್ತಿದ್ದಾರೆ.

ಅಭಿಲಾಷ್ ಪಿ.ಎಸ್.

• ನೀವು 'ಹೀರೋ' ಆಗಿದ್ದು ಹೇಗೆ?


ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಎಲ್ಲಿಗೂ ಹೋಗಲು ಆಗುತ್ತಿಲ್ಲ, ಸಿದ್ಧವಾಗಿದ್ದ ಚಿತ್ರಕಥೆಗಳ ಚಿತ್ರೀಕರಣ ಸಾಧ್ಯವಿಲ್ಲ ಎನ್ನುವ ವೇಳೆ ಜನರಿಗೆ ಹೊಸ ಕಂಟೆಂಟ್ ನೀಡಬೇಕು ಎನ್ನುವ ಆಲೋಚನೆ ಹುಟ್ಟಿಕೊಂಡಿತು. ಕಳೆದ ಜೂನ್‌ನಲ್ಲಿ ಕೆಲ ಮಾರ್ಗಸೂಚಿಗಳನ್ನು ಹೊರಡಿಸಿ, ಚಿತ್ರೀಕರಣಕ್ಕೆ ಅವಕಾಶ ನೀಡಿದ್ದರು. ರಾತ್ರಿ ಬೆಳಗಾಗುವುದರೊಳಗೆ ಹುಟ್ಟಿಕೊಂಡ ಕಥೆ ಇದು. ಒಂದು ದಿನದಲ್ಲೇ ನಡೆಯುವ ಕಥೆ. ಐದು ದಿನದಲ್ಲಿ ಚಿತ್ರದ ಸಂಭಾಷಣೆ ಬರೆದಾಗಿತ್ತು. ಹೀಗೆ 'ಹೀರೋ' ಹುಟ್ಟಿಕೊಂಡ. ಹಿಂದಿನ ನನ್ನ ಚಿತ್ರಗಳಲ್ಲಿ ಸಾಮಾಜಿಕ ಸಂದೇಶವಿತ್ತು, ಈ ಬಾರಿ ಸಣ್ಣ ತಂಡದೊಂದಿಗೆ, ಸಣ್ಣ ಎಳೆಯ ಕಥೆ ಇಟ್ಟುಕೊಂಡು ಜನರಿಗೆ ಭರ್ಜರಿ ಮನರಂಜನೆ ನೀಡುತ್ತಿದ್ದೇವೆ.

• ಲಾಕ್‌ಡೌನ್‌ನಲ್ಲಿ ಚಿತ್ರೀಕರಣದ ಜಾಗ ಹುಡುಕುವ ಸವಾಲು ಹೇಗಿತ್ತು?

ರುದ್ರಪ್ರಯಾಗ ಸಿನಿಮಾಗಾಗಿ ಸಂಭಾಷಣೆ ಬರೆಯಲು ನನ್ನ ಸ್ನೇಹಿತರು ಹಾಸನದ ಸಮೀಪ ಒಂದು ಜಾಗವನ್ನು ಹೇಳಿದ್ದರು. ಬೆಂಗಳೂರಿನಲ್ಲಿದ್ದು ಕಥೆ ಬರೆಯಲು ಸಾಧ್ಯವಿರಲಿಲ್ಲ. ನಾನು ಹಾಗೂ ರಾಜ್ ಬಿ.ಶೆಟ್ಟಿ ಅವರು ಸಂಭಾಷಣೆ ಬರೆಯಲು ಅಲ್ಲಿಗೆ ಹೋಗಬೇಕಾಗಿತ್ತು. ಹೀರೋ ಕಥೆ ಹುಟ್ಟಿಕೊಂಡಾಗ ನಿರ್ದೇಶಕರಿಗೆ ಈ ಜಾಗದ ಬಗ್ಗೆ ಹೇಳಿ, ಚಿತ್ರ ತೋರಿಸಿದ್ದೆ. 200-300 ಎಕರೆಯ ಸಿರುಗೂರು ಎಸ್ಟೇಟ್ ಅದು. ಅವರಿಗೆ ಇಷ್ಟವಾಯಿತು. ಮಾರ್ಗಸೂಚಿ ಪ್ರಕಾರ ಚಿತ್ರೀಕರಣ ಸಂದರ್ಭದಲ್ಲಿ 50 ಜನರಿಗಿಂತ ಹೆಚ್ಚು ಇರಬಾರದು ಎಂಬ ನಿರ್ಬಂಧವಿತ್ತು. ಬೆಂಗಳೂರಿನಲ್ಲಿ ಇದು ಸಾಧ್ಯವಿಲ್ಲ. ಹೀಗಾಗಿ ಈ ಎಸ್ಟೇಟ್ ಒಳಗೆ 24 ಜನರ ಪಾಳೆಯಗಾರರನ್ನು ಇಟ್ಟುಕೊಂಡು ಚಿತ್ರೀಕರಣ ಮಾಡಿದೆವು. ಇಲ್ಲಿ ಹೀರೋ ನಾನೊಬ್ಬನೇ ಅಲ್ಲ. ಎಲ್ಲರೂ ಹೀರೋಗಳೇ. 100 ಜನರ ಕೆಲಸವನ್ನು 24 ಜನರು ಮಾಡಿದ್ದೇವೆ. ಇನ್ನು ಆ ಲಾಕ್‌ಡೌನ್ ಅವಧಿಯಲ್ಲಿ ಶೈನಿ ಶೆಟ್ಟಿ ಅವರು ನಮಗೆ ಬೆಂಗಳೂರಿನಿಂದ ಅಗತ್ಯ ವಸ್ತುಗಳನ್ನು ತೆಗೆದುಕೊಂಡು ಬರುತ್ತಿದ್ದರು.

• ಚಿತ್ರದಲ್ಲಿನ ಪಾತ್ರಗಳ ಆಯ್ಕೆ ಹೇಗಿತ್ತು?

ಇಲ್ಲಿ ಯಾವ ಪಾತ್ರವನ್ನೂ ನಿರ್ದೇಶಕರು ಆಯ್ಕೆ ಮಾಡಿಲ್ಲ. ಮನುಷ್ಯರನ್ನು ಇಟ್ಟುಕೊಂಡು ಬರೆದ ಕಥೆ ಇದು. ನಾನು, ಪ್ರಮೋದ್ ಶೆಟ್ಟಿ, ಹಾಗೂ ನಾಯಕಿ. ಮೊದಲಿಗೆ ಇಷ್ಟೇ ಜನರನ್ನು ಇಟ್ಟು ಕಥೆ ಹೆಣೆಯಲಾಗಿತ್ತು. ನಂತರ ಪ್ರಮೋದ್ ಶೆಟ್ಟಿ ಅವರ ಪಾತ್ರಕ್ಕೆ ಹಿನ್ನೆಲೆ ಕೊಟ್ಟಾಗ ಮಂಜುನಾಥ ಗೌಡ ಅವರು ಸೇರ್ಪಡೆಯಾದರು. ಹೀಗೆ ಕಥೆ ಬೆಳೆಯಿತು. ಇದು ಪ್ರಯೋಗಾತ್ಮಕ ಚಿತ್ರ. ಕಳೆದ ಜೂನ್ 23ಕ್ಕೆ ಕಥೆ ಯೋಚನೆ ಹುಟ್ಟಿಕೊಂಡಿತು, ಮುಂದಿನ 5 ದಿನದಲ್ಲಿ 40 ಪುಟ ಸಂಭಾಷಣೆ ಸಿದ್ಧವಾಯಿತು. ಜುಲೈ 7ರಿಂದ ಚಿತ್ರೀಕರಣ ಆರಂಭಿಸಿದ್ದೆವು. ಎಲ್ಲವೂ ಫಟಾಫಟ್. ಆದರೆ, ಎಲ್ಲ ಕಥೆಗಳಿಗೆ ಹಾಗೂ ಸಿನಿಮಾಗಳಿಗೆ ಈ ಮಾದರಿ ಅನ್ವಯವಾಗುವುದಿಲ್ಲ. ಇದೇ 'ಹೀರೋ' ಚಿತ್ರವನ್ನು ಸಾಮಾನ್ಯ ಸಂದರ್ಭದಲ್ಲಿ ಮಾಡಿದ್ದರೆ ಆರು ತಿಂಗಳು ಪ್ರಿಪ್ರೊಡಕ್ಷನ್‌ಗೆ ಬೇಕಿತ್ತು. ತಲೆಯೊಳಗಿನ ಐಡಿಯಾಗಳು ಲಾಕ್‌ಡೌನ್‌ನಿಂದ ಹೊರಬಂದವು. ಚಿತ್ರದಲ್ಲಿ ನನ್ನ ತಮ್ಮನಿಗೂ ಒಂದು ಪಾತ್ರ ಹಾಕಿದೆವು.



ಪ್ರಮೋದ್ ಶೆಟ್ಟಿ

• ಚಿತ್ರದಲ್ಲಿ ಸಾಹಸದ ದೃಶ್ಯಗಳು, ಹೊಡೆದಾಟಗಳು ಹೆಚ್ಚಿವೆಯಲ್ಲ?

ಚಿತ್ರದಲ್ಲಿ ರಕ್ತದಾನ, ಮಹಾದಾನ ಆಗಿದೆ. ನಮ್ಮ ಪ್ರೊಡಕ್ಷನ್‌ನಲ್ಲೂ ಹಾಗೂ ನಾನು ಇಲ್ಲಿಯವರೆಗೂ ನಟಿಸಿರುವ ಚಿತ್ರಗಳಲ್ಲಿ ಇಷ್ಟು ರಕ್ತ ಹರಿಸಿಲ್ಲ. ಕಥೆಯೇ ಇದನ್ನು ಬಯಸುತ್ತದೆ. ಮೊದಲಾರ್ಧದಲ್ಲಿ ಕೆಲವು ಆ್ಯಕ್ಷನ್ ದೃಶ್ಯಗಳನ್ನು ನಾನೇ ನಿರ್ದೇಶಿಸಿದ್ದೆ. ಮುಖ್ಯವಾದ ದೃಶ್ಯಗಳನ್ನು ವಿಕ್ರಮ್ ಅವರು ಬಂದ ನಂತರ ಚಿತ್ರೀಕರಿಸಲಾಯಿತು. ಹೆಚ್ಚಿನ ದೃಶ್ಯಗಳಲ್ಲಿ ನಿಜವಾಗೇ ಒದ್ದರು. ಆದರೆ, ಆ ಮಳೆ, ಕಲ್ಲುಮುಳ್ಳಲ್ಲಿ ಎದ್ದು ಬಿದ್ದು ಚಿತ್ರೀಕರಣ ಮಾಡುವುದು ಖುಷಿಯಾಗಿತ್ತು. ಹಾಗೆ ನೋಡಿದರೆ, ರೌಡಿ ಪಾತ್ರದಲ್ಲಿದ್ದ ಪ್ರಮೋದ್ ಶೆಟ್ರು ಒಬ್ಬರೇ ಸುರಕ್ಷಿತವಾಗಿದ್ದರು.

• ಬತ್ತಳಿಕೆಯಲ್ಲಿ ಉಳಿದ ಬಾಣಗಳು?

ಬೆಲ್‌ಬಾಟಂ-2 ಬಿಗ್‌ಬಜೆಟ್ ಸಿನಿಮಾ. ಹಾಗೇ ಈಗಿನ 'ಹೀರೋ' ಕೂಡಾ ಪೂರ್ಣ ಕಮರ್ಷಿಯಲ್ ಚಿತ್ರ. ಹರಿಕಥೆ ಅಲ್ಲ ಗಿರಿಕಥೆ ಒಂದು ಹ್ಯೂಮರಸ್ ರೈಡ್. ಅದರಲ್ಲಿ ಕಲಾವಿದರ ಬಳಗವೇ ಇದೆ.ಗರುಡಗಮನ, ರುದ್ರಪ್ರಯಾಗ, ಕಿರಿಕ್ ಪಾರ್ಟಿ-2 ಹಲವು ಚಿತ್ರಗಳು ಸೆಟ್ಟೇರಬೇಕು. ಈ ವರ್ಷ ನಾಲ್ಕು ಸಿನಿಮಾ ರಿಲೀಸ್ ಮಾಡುತ್ತೇವೆ. ಕಳೆದ ಮಾರ್ಚ್‌ಗೆ ಮೂರು ಸಿನಿಮಾ ಶುರುವಾಗಬೇಕಿತ್ತು. ಲಾಫಿಂಗ್ ಬುದ್ಧ, ಹರಿಕಥೆ ಅಲ್ಲ ಗಿರಿಕಥೆ ಹಾಗೂ ರುದ್ರಪ್ರಯಾಗ್ ಪ್ರಾರಂಭವಾಗಬೇಕಿತ್ತು. ಬೆಲ್‌ಬಾಟಂ-2 ಇದೀಗ ಮುಗಿಸಬೇಕು. ಕಳೆದ ವರ್ಷ ಕಳೆದುಕೊಂಡಿದ್ದನ್ನು ಈ ವರ್ಷ ಡಬಲ್ ವಸೂಲ್ ಮಾಡಬೇಕು ಎನ್ನುವುದೇ ಗುರಿ. ❖

'ಹೊಟ್ಟೆ ಬೆಳೆಸಿದ್ದು ಬೇರೆ ಚಿತ್ರಕ್ಕೆ'

ಟ್ರೇಲರ್‌ನಲ್ಲಿ 'ನಾನೇ ಆ ರೌಡಿ' ಎನ್ನುತ್ತಾ ಪ್ರವೇಶಿಸುವ ಪ್ರಮೋದ್ ಶೆಟ್ಟಿ ಅವರೂ ಚಿತ್ರದ ಅನುಭವ ಹಂಚಿಕೊಂಡರು. 'ಮೊದಲು ಒಂದು ಸ್ಪಷ್ಟನೆ. ಹೊಟ್ಟೆ ಬೆಳೆಸಿದ್ದೆ. ಈ ಪಾತ್ರಕ್ಕಾಗಿ ಅಲ್ಲ. ಲಾಫಿಂಗ್ ಬುದ್ಧ ಚಿತ್ರ ಕೊರೊನಾದಿಂದ ಮುಂದಕ್ಕೆ ಹೋಯಿತು. ಆದರೆ ಹೊಟ್ಟೆ ಉಳಿದುಕೊಂಡಿತು. ಅನಿವಾರ್ಯ ಹೊತ್ತುಕೊಂಡು ತಿರುಗುತ್ತಿದ್ದೇನೆ. ಇನ್ನು ಚಿತ್ರದ ಪಾತ್ರದ ವಿಷಯಕ್ಕೆ ಬಂದಾಗ, ಪೂರ್ಣ ಪ್ರಮಾಣದ ಖಳನಾಯಕ ಎಂದಾಕ್ಷಣ ಜನರ ಮನಸ್ಸಿಗೆ ಬರುವುದು ಫೈಟಿಂಗ್, ಡೈಲಾಗ್ಸ್. ಆದರೆ ಈ ಚಿತ್ರದಲ್ಲಿ ಇದಕ್ಕಿಂತ ಹೆಚ್ಚಾಗಿ ಭಾವನೆಗಳನ್ನು ಕಣ್ಣಲ್ಲೇ ನೀಡುವ ಪಾತ್ರವಿದು. ಇದನ್ನು ನಾನು ಪ್ರಯತ್ನಿಸಿದ್ದೇನೆ. ಹೆದರಿಸಿದ್ದೇನೆ ಎನ್ನುವ ಖುಷಿ ಇದೆ' ಎಂದರು.

ಪೂರ್ಣ ಸಂದರ್ಶನದ ವಿಡಿಯೋ ನೋಡಲು ಇಲ್ಲಿ ನ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಶರಣ್ಯಾ ಕಂಡ ಕನಸು

ರೇಷ್ಮಾ

ಜೀ ಕನ್ನಡದ ಜನಪ್ರಿಯ ಧಾರಾವಾಹಿ ಗಟ್ಟಿಮೇಳದ 'ಸಾಹಿತ್ಯ' ಪಾತ್ರ, ಧಾರಾವಾಹಿಗೆ ಕೆಲವೊಂದು ಪ್ರಮುಖ ತಿರುವುಗಳನ್ನು ನೀಡಿತ್ತು. ಸುಮಾರು 50 ಎಪಿಸೋಡುಗಳಷ್ಟು ಪ್ರಸಾರವಾದ ಸಾಹಿತ್ಯ ಪಾತ್ರಕ್ಕೆ ಜನ ಇಂದಿಗೂ ಬೈಯುತ್ತಿದ್ದಾರೆ. ಸಾಹಿತ್ಯ ಎಂಬ ಖಳನಟಿಯಾಗಿ ಗಟ್ಟಿಮೇಳ ಪ್ರವೇಶಿಸಿ ಹೆಸರಾದವರು ಶರಣ್ಯಾ ಶೆಟ್ಟಿ. 'ರವಿ ಬೋಪಣ್ಣ' ಸಿನಿಮಾದ ಸಣ್ಣ ಪಾತ್ರದ ಮೂಲಕ ನಟನೆ ಆರಂಭಿಸಿದ ಶರಣ್ಯಾಗೆ 'ಗಟ್ಟಿಮೇಳ' ಮೊದಲ ಧಾರಾವಾಹಿ. ಈ ಧಾರಾವಾಹಿಯಿಂದಲೇ ಸಾಕಷ್ಟು ಹೆಸರು ಗಳಿಸಿರುವ ಇವರ ಕೈಯಲ್ಲೀಗ ಹಲವು ಸಿನಿಮಾಗಳಿವೆ. ಇಂತಿಪ್ಪ ಶರಣ್ಯಾ ತಮ್ಮ ಕಿರುತೆರೆ ಹಾಗೂ ಸಿನಿಪಯಣದ ಕುರಿತು ಮಾತನಾಡಿದ್ದಾರೆ.

ನಟನೆಯ ನಂಟು: ಶರಣ್ಯಾ ತಂದೆ ಸಿನಿಮಾ ವಿತರಕರಾಗಿದ್ದವರು. ಆ ಕಾರಣಕ್ಕೆ ಚಿಕ್ಕ ಹುಡುಗಿಯಾಗಿದ್ದಾಗಿನಿಂದಲೂ ಪ್ರೀಮಿಯರ್ ಷೋ, ಶೂಟಿಂಗ್‌ಗಳಿಗೆಲ್ಲಾ ಇವರನ್ನೂ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ನಟ, ನಟಿಯರನ್ನೆಲ್ಲಾ ನೋಡುತ್ತಿದ್ದ ಇವರಿಗೆ ತಾನು ಅವರಂತೆ ಆಗಬೇಕು ಎನ್ನಿಸುತ್ತಿತ್ತು. ಇದರೊಂದಿಗೆ ಬಾಲ್ಯದಿಂದಲೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಸದಾ ಮುಂದಿದ್ದರು. ಜೊತೆಗೆ ಶಾಸ್ತ್ರೀಯ ನೃತ್ಯ ಪ್ರಕಾರಗಳಲ್ಲೂ ಪಳಗಿದವರು. ಮಾಡೆಲಿಂಗ್‌ನಲ್ಲೂ ಪಳಗಿದ್ದ ಇವರಿಗೆ ಸಿನಿಮಾ ನಟಿಯಾಗಬೇಕು ಎಂಬುದು ಬಾಲ್ಯದ ಕನಸು.

ಖ್ಯಾತಿ ತಂದುಕೊಟ್ಟ ನೆಗೆಟಿವ್ ಪಾತ್ರ: ಮೊದಲಿನಿಂದಲೂ ಸಿನಿಮಾ ಮಾಡಬೇಕು ಎಂಬ ಕನಸಿಟ್ಟುಕೊಂಡಿದ್ದ ಇವರಿಗೆ ಧಾರಾವಾಹಿ ಅವಕಾಶ ಬಂದಾಗ ತಿರಸ್ಕರಿಸಲು ಸಾಧ್ಯವಾಗಿರಲಿಲ್ಲ. ನೆಗೆಟಿವ್ ಪಾತ್ರವಾದರೂ ಹೆಚ್ಚು ತೂಕವಿರುವ ಪಾತ್ರ, ಜೊತೆಗೆ ಚಾಲೆಂಜಿಂಗ್ ಎನ್ನಿಸಿದ್ದ ಕಾರಣ ನಟಿಸಲು ಒಪ್ಪಿಕೊಂಡರು. 'ನೆಗೆಟಿವ್, ಪಾಸಿಟಿವ್ ಎನ್ನುವುದಕ್ಕಿಂತ ಪಾತ್ರಕ್ಕೆ ಎಷ್ಟು ಪ್ರಾಮುಖ್ಯವಿದೆ ಎನ್ನುವುದೂ ಮುಖ್ಯವಾಗುತ್ತದೆ. ಸಿನಿಮಾ ಎಂದರೆ ಹಲವು ಪಾತ್ರಗಳಲ್ಲಿ ಕಾಣಿಸಿಕೊಳ್ಳಬಹುದು. ಧಾರಾವಾಹಿ ಎಂದರೆ ಮೂರು, ನಾಲ್ಕು ವರ್ಷಗಳ ಕಾಲ ಒಂದೇ ಪಾತ್ರಕ್ಕೆ ಸಿಮೀತವಾಗಿರಬೇಕು ಎಂಬ ಆತಂಕ ನನ್ನಲ್ಲಿತ್ತು. ಆ ಕಾರಣಕ್ಕೆ ನನಗೆ ಸಿನಿಮಾದ ಮೇಲೆ ಹೆಚ್ಚು ಒಲವಿತ್ತು' ಎನ್ನುತ್ತಾರೆ ಮಲೆನಾಡಿನ ಬೆಡಗಿ.

ಸಾಹಿತ್ಯ ಪಾತ್ರ ತಂದ ತಿರುವು: 'ನಾನು ಶರಣ್ಯಾ ಎನ್ನುವುದನ್ನೂ ಮರೆತು ಜನ ನನ್ನನ್ನು ಸಾಹಿತ್ಯ ಎಂದೇ ಗುರುತಿಸುತ್ತಾರೆ. ಅಷ್ಟರ ಮಟ್ಟಿಗೆ ಹೆಸರು ತಂದಿದೆ ಈ ಪಾತ್ರ. ವೈಯಕ್ತಿಕವಾಗಿ ಹೇಳಬೇಕು ಎಂದರೆ ನಾನು ಮೊದಲಿನಿಂದಲೂ ಹೆಚ್ಚು ಮಾತನಾಡದ ಮುಗ್ಧ ಸ್ವಭಾವದ ಹುಡುಗಿಯಾಗಿದ್ದೆ. ಧಾರಾವಾಹಿ ಮಾಡಿದ ಮೇಲೆ ನನ್ನಲ್ಲಿ ಧೈರ್ಯ ಹೆಚ್ಚಿದೆ. ನೆಗೆಟಿವ್ ಪಾತ್ರ ಮಾಡಿದಾಗ ಜನ ಬೈಯ್ಯುತ್ತಾರೆ. ಆದರೆ ನಮ್ಮ ನಟನೆಯನ್ನು ಇಷ್ಟಪಡುತ್ತಾರೆ. ಅದು ನನಗೆ ಖುಷಿಯ ವಿಚಾರ. ವಿಲನ್‌ಗೂ ಇಷ್ಟೊಂದು ಪ್ರೀತಿ ಸಿಗುತ್ತಾ ಎಂದು ನೆನಪಿಸಿಕೊಂಡು ಖುಷಿಯಾಗುತ್ತದೆ. ಆ ಪಾತ್ರ ನನ್ನ ಗುರುತಿಗೆ ಕಾರಣವಾಗಿದೆ' ಎಂಬ ಖುಷಿ ಇವರದ್ದು.



ಶರಣ್ಯಾ ಶೆಟ್ಟಿ

ಕೈಯಲ್ಲಿರುವ ಸಿನಿಮಾಗಳು: ಸದ್ಯ 'ರವಿ ಬೋಪಣ್ಣ' ಸಿನಿಮಾ ತಯಾರಾಗಿದ್ದು ಬಿಡುಗಡೆಗೆ ಸಿದ್ಧವಾಗಿದೆ. '1980' ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದು ಪ್ರಿಯಾಂಕ ಉಪೇಂದ್ರ ಜೊತೆ ತೆರೆ ಹಂಚಿಕೊಂಡಿದ್ದಾರೆ. ಈ ಸಿನಿಮಾ ಮುಂದಿನ ತಿಂಗಳಿನಲ್ಲಿ ಬಿಡುಗಡೆಯಾಗುತ್ತಿದೆ. ಇದರೊಂದಿಗೆ '14 feb', 'ಸ್ಪೂಕಿ ಕಾಲೇಜ್', '31 ಡೇಸ್' ಸಿನಿಮಾಗಳೂ ಇವರ ಬತ್ತಳಿಕೆಯಲ್ಲಿವೆ.

ಮಹಿಳಾ ಪ್ರಧಾನ ಸಿನಿಮಾ ಮಾಡುವ ಆಸೆ: ಶಾಸ್ತ್ರೀಯ ನೃತ್ಯಗಾರ್ತಿ ಆಗಿರುವ ಕಾರಣ ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ನಾಟ್ಯ ಕಲೆ ಕುರಿತಾದ ಮೇಲಿನ ಮಹಿಳಾ ಪ್ರಧಾನ ಸಿನಿಮಾ ಮಾಡುವ ಹಂಬಲ ಹೊಂದಿದ್ದಾರೆ ಶರಣ್ಯಾ. ತೂಕದ ಪಾತ್ರವಿದ್ದರೆ ಪಾತ್ರ ಎಷ್ಟೇ ಸಣ್ಣದಾಗಿದ್ದರೂ ಷರತ್ತು ಹಾಕದೇ ಪಾತ್ರ ಮಾಡಲು ಸಿದ್ಧ ಎನ್ನುವ ಇವರ ಮಾತಲ್ಲಿ ನಟಿಯಾಗಿ ಸಿನಿರಂಗದಲ್ಲಿ ಗಟ್ಟಿಯಾಗಿ ಬೇರೂರುವ ಕನಸೂ ವ್ಯಕ್ತವಾಗುತ್ತದೆ.

ಪರಭಾಷೆಯಿಂದಲೂ ಅವಕಾಶ: ಮೊದಲಿನಿಂದಲೂ ಪರಭಾಷಾ ಕಿರುತೆರೆ ಕ್ಷೇತ್ರದಿಂದ ಇವರಿಗೆ ಅವಕಾಶ ಬಂದಿದ್ದವು. ಈ ನಡುವೆ ತಮಿಳು, ತೆಲುಗು ಸಿನಿಮಾಗಳಿಂದಲೂ ಅವಕಾಶಗಳು ಬಂದಿವೆ. 'ಸದ್ಯ ಕೈಯಲ್ಲಿ ಸಾಕಷ್ಟು ಸಿನಿಮಾಗಳಿರುವುದರಿಂದ ಮುಂದಿನ ದಿನಗಳಲ್ಲಿ ಪರಭಾಷೆಯ ಬಗ್ಗೆ ಯೋಚಿಸುತ್ತೇನೆ. ಸದ್ಯ ಕನ್ನಡದಲ್ಲೇ ಇಷ್ಟೊಂದು ಅವಕಾಶಗಳಿರುವುದು ಖುಷಿ ತಂದಿದೆ' ಎನ್ನುತ್ತಾ ಮಾತು ಮುಗಿಸುತ್ತಾರೆ. ❖

ಕಾಡಂಚಿನಲ್ಲಿರುವ ಗವಿರಂಗನಾಥ ಸ್ವಾಮಿ ದೇವಾಲಯ, ಸಾಗಣೆಗೆ ಅವಕಾಶ ಕೊಡದ ಗೋರಕ್ಷಕರು

ಚಿರತೆ ಪಾಲಾಗುತ್ತಿರುವ ಹರಕೆ ಕರುಗಳು!

• ಎಂ.ಎನ್.ಯೋಗೇಶ್



ಗವಿರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ಗೋಶಾಲೆ ತೆರೆಯಲು ಒತ್ತಾಯಿಸಿ, ಕೆ.ಆರ್‌ಪೇಟೆ ತಹಶೀಲ್ದಾರ್ ಕಚೇರಿ ಎದುರು ರೈತಸಂಘದ ಮುಖಂಡರು ಈಚೆಗೆ ಕರುಗಳೊಂದಿಗೆ ಪ್ರತಿಭಟನೆ ನಡೆಸಿದ್ದರು.

ಮಂಡ್ಯ: ರಾಜ್ಯ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ನಂತರ ಕೆ.ಆರ್.ಪೇಟೆ ತಾಲ್ಲೂಕು ಗವಿರಂಗನಾಥಸ್ವಾಮಿ ದೇವಾಲಯಕ್ಕೆ ಹರಕೆಗೆ ಬಿಟ್ಟ ಕರುಗಳು ಚಿರತೆಗಳ ಪಾಲಾಗುತ್ತಿವೆ.

ಗವಿರಂಗನಾಥ ಸ್ವಾಮಿ ದೇವಾಲಯ ಸಂತೇಬಾಚಹಳ್ಳಿ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿದೆ. ಈ ದೇವಾಲಯಕ್ಕೆ ರೈತರು ಹಸುವಿನ ಕರುಗಳನ್ನು ಹರಕೆಗೆ ಬಿಡುವುದು ಸಂಪ್ರದಾಯ. ಮೊದಲು ದೇಸಿ ತಳಿ ಹಸುವಿನ ಕರುಗಳನ್ನು ಮಾತ್ರ ಬಿಡುತ್ತಿದ್ದರು. ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ಜಾರಿಗೆ ಬಂದ ನಂತರ, ಮಿಶ್ರತಳಿ ಹಸುವಿನ ಕರುಗಳನ್ನೂ ಹರಕೆಗೆ ಬಿಡುತ್ತಿದ್ದಾರೆ. ಕೆಲವರು, ಹರಕೆಯ ಹೊರತಾಗಿಯೂ ದೇವಾಲಯದ ಆವರಣದಲ್ಲಿ ಕರುಗಳನ್ನು ಬಿಟ್ಟು ಹೋಗುತ್ತಿದ್ದಾರೆ.

‘ಮಿಶ್ರತಳಿ ಹಸುವಿನ ಗಂಡು ಕರುಗಳು ಬೆಳಿಗ್ಗೆ 2 ಲೀಟರ್, ಸಂಜೆ 2 ಲೀಟರ್ ಹಾಲು ಕುಡಿಯುತ್ತವೆ. ಅಷ್ಟೊಂದು ಹಾಲನ್ನು ಕರುವಿಗೆ ಕೊಟ್ಟರೆ ರೈತರು ಹಣ ಸಂಪಾದನೆ ಮಾಡುವುದು ಹೇಗೆ? ಹೆಣ್ಣು ಕರುಗಳನ್ನು ಸಾಕಿದರೆ ಮುಂದೆ ಗರ್ಭ ಧರಿಸುತ್ತವೆ. ಗಂಡು ಕರು ಸಾಕುವುದರಿಂದ ಲಾಭವಿಲ್ಲ. ಹೀಗಾಗಿ ಗವಿರಂಗಪ್ಪನ ಗುಡಿ ಬಳಿ ಬಿಟ್ಟು ಬರುತ್ತಾರೆ’ ಎಂದು ಬಿಲ್ಲೇನಹಳ್ಳಿ ಗ್ರಾಮದ ರೈತರೊಬ್ಬರು ತಿಳಿಸಿದರು.

> **ಚಿರತೆಗಳು ಸಾಮಾನ್ಯವಾಗಿ ಕರುಗಳ ಮೇಲೆಯೇ ದಾಳಿ ಮಾಡುತ್ತವೆ. ಸಂತೇಬಾಚಹಳ್ಳಿ ಅರಣ್ಯ ಪ್ರದೇಶದಲ್ಲಿ ಕರುಗಳನ್ನು ಬಿಟ್ಟಿದ್ದರೆ ಅವುಗಳನ್ನು ರಕ್ಷಿಸಲಾಗುವುದು**
> **– ಎನ್.ಶಿವರಾಜು,**
> ಉಪ ಅರಣ್ಯ ಸಂರಕ್ಷಣಾಧಿಕಾರಿ

ಕರುಗಳ ಹರಾಜು: ದೇವಾಲಯ ಮುಜರಾಯಿ ಇಲಾಖೆಗೆ ಸೇರಿದ್ದು, ತಹಶೀಲ್ದಾರ್ ಪ್ರತಿ ವರ್ಷ ಹರಕೆ ಕರುಗಳನ್ನು ಹರಾಜು ಹಾಕುತ್ತಾರೆ. ಕಸಾಯಿಖಾನೆಗೆ ಮಾರಾಟ ಮಾಡದಂತೆ ಷರತ್ತು ವಿಧಿಸಿ, ಕರುಗಳ ಒಡೆತನದ ಹಕ್ಕನ್ನು ಮಾತ್ರ ನೀಡುತ್ತಾರೆ. ಆದರೆ, ಒಡೆತನದ ಹಕ್ಕು ಪಡೆದವರು ವರ್ತಕರಿಗೆ ಮಾರಾಟ ಮಾಡುತ್ತಾರೆ ಎಂಬ ಆರೋಪ ಮೊದಲಿನಿಂದಲೂ ಇದೆ.

ಹರಾಜಿನ ಮೂಲಕ ಕರುಗಳನ್ನು ಪಡೆದವರಿಗೆ ಅವುಗಳನ್ನು ಸಾಗಿಸಲು ಸಾಧ್ಯವಾಗದ ಕಾರಣ, ಅವು ಕಾಡುಪ್ರಾಣಿಗಳ ಬಾಯಿಗೆ ತುತ್ತಾಗುತ್ತಿವೆ. ಅಲ್ಲಲ್ಲಿ ಕರುಗಳ ಕಳೇಬರ ಪತ್ತೆಯಾಗುತ್ತಿವೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಇಲ್ಲಿನ ಅರಣ್ಯದಲ್ಲಿ ಚಿರತೆಗಳ ಸಂಖ್ಯೆ ಹೆಚ್ಚಾಗಿದ್ದು ಮನೆಗಳಿಗೇ ನುಗ್ಗಿ ಕರುಗಳನ್ನು ಹೊತ್ತೊಯ್ದು, ಕೊಂದು ಹಾಕಿದ ಉದಾಹರಣೆಗಳು ಸಾಕಷ್ಟಿವೆ.

ಜನವರಿಯಲ್ಲಿ ರೈತರೊಬ್ಬರು ಹರಾಜಿನಲ್ಲಿ 20 ಕರು ಪಡೆದಿದ್ದರು. ಆ ಕರುಗಳ ಸಾಗಾಟಕ್ಕೆ ಗೋರಕ್ಷಕರು ಬಿಡಲಿಲ್ಲ. ಈ ಕುರಿತು ಪ್ರಕರಣವೂ ದಾಖಲಾಗಿತ್ತು. ಇದನ್ನು ಖಂಡಿಸಿ ರೈತಸಂಘದ ಮುಖಂಡರು ತಹಶೀಲ್ದಾರ್ ಕಚೇರಿ ಮುಂದೆ ಪ್ರತಿಭಟಿಸಿದ್ದರು. ದೇವಾಲಯದ ಆವರಣದಲ್ಲಿ ಗೋಶಾಲೆ ತೆರೆಯಲು ಒತ್ತಾಯಿಸಿದ್ದರು. ದೇವಾಲಯದ ಆವರಣದಲ್ಲಿದ್ದ ಕರುಗಳನ್ನು ಸದ್ಯ ಗೋಶಾಲೆಯೊಂದರ ಸಿಬ್ಬಂದಿ ರಕ್ಷಿಸಿದ್ದಾರೆ.

‘ನಾವು ಕರುಗಳನ್ನು ಮಾರುವುದಿಲ್ಲ, ಹರಾಜಿನ ಮೂಲಕ ರೈತರಿಗೆ ಒಡೆತನದ ಹಕ್ಕು ನೀಡುತ್ತೇವೆ. ಕರುಗಳನ್ನು ಅವರು ಕಸಾಯಿಖಾನೆಗೆ ಮಾರಾಟ ಮಾಡಿದರೆ ಅಂಥವರ ವಿರುದ್ಧ ಪ್ರಕರಣ ದಾಖಲು ಮಾಡುತ್ತೇವೆ’ ಎಂದು ಕೆ.ಆರ್. ಪೇಟೆ ತಹಶೀಲ್ದಾರ್ ಕೆ.ಶಿವಮೂರ್ತಿ ಹೇಳಿದರು.

ಗಂಡುಕರುಗಳಿಗೆ ಬೀದಿ, ಅಡವಿ ದಿಕ್ಕು

ಚಿಕ್ಕಮಗಳೂರು: ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ಜಾರಿಯಾದ ನಂತರ ಕಾಫಿನಾಡಿನ ವಿವಿಧೆಡೆ ಗಂಡು ಕರುಗಳನ್ನು ಬೀದಿ, ಅಡವಿ ಪಾಲು ಮಾಡುತ್ತಿರುವುದು ಕಂಡುಬಂದಿದೆ.

ಕಡೂರು ಪಟ್ಟಣದಲ್ಲಿ ಅನಾಥವಾಗಿ ಅಡ್ಡಾಡುತ್ತಿದ್ದ ಗಂಡುಕರುಗಳನ್ನು ವರ್ತಕ ಲಾಲ್ ಸಿಂಗ್ ಅವರು ಬಾಣಾವರ ಸಮೀಪದ ಶ್ರೀಭಗವಾನ್ ಮಹಾವೀರ ಗೋಶಾಲೆಗೆ ಬಿಟ್ಟಿದ್ದಾರೆ. ‘ಮಲ್ಲೇಶ್ವರ, ಎಂ.ಕೋಡಿಹಳ್ಳಿಯಿಂದ ಎಂಟು ಕರುಗಳನ್ನು ತಂದು ಬಿಟ್ಟಿದ್ದರು. ಅವುಗಳನ್ನು ಗೋಶಾಲೆಗೆ ತಲುಪಿಸಿದ್ದೇವೆ’ ಎಂದು ಲಾಲ್‌ಸಿಂಗ್ ‘ಪ್ರಜಾವಾಣಿಗೆ’ ತಿಳಿಸಿದರು.

ಹೊರೆಯಾದ ಜರ್ಸಿ ಹೋರಿಗರು

ಮೈಸೂರು/ಚಾಮರಾಜನಗರ/ಹಾಸನ/ಚಿಕ್ಕಬಳ್ಳಾಪುರ/ರಾಮನಗರ: ಮೇವು– ನೀರಿನ ಸಮಸ್ಯೆಯಿಂದಾಗಿ, ಚಾಮರಾಜನಗರ ಜಿಲ್ಲೆಯಲ್ಲಿ ಕಾಡಂಚಿನ ಗ್ರಾಮಸ್ಥರು ನಾಟಿ ಮತ್ತು ಜರ್ಸಿ ಹಸು ಹಾಗೂ ಕರುಗಳನ್ನೂ ಮೇಯಲು ಬಿಡುತ್ತಾರೆ.

ರಾಮನಗರ ಜಿಲ್ಲೆಯಲ್ಲಿ ದೇಗುಲಗಳು ಇಲ್ಲವೇ ಗೋಶಾಲೆಗಳಲ್ಲಿ ಬಿಡುತ್ತಿದ್ದಾರೆ. ಜಿಲ್ಲೆಯಲ್ಲಿ ಕೇವಲ ಎರಡು ಅನುದಾನಿತ ಗೋಶಾಲೆಗಳು ಇವೆ. ಇಲ್ಲಿಯೂ ದೇಸಿ ತಳಿಗಳ ಪಾಲನೆಗೆ ಮಾತ್ರ ಆದ್ಯತೆ ನೀಡಲಾಗುತ್ತಿದೆ. ಹೀಗಾಗಿ ಎಚ್‌ಎಫ್ ತಳಿಯ ಕರುಗಳನ್ನು ಸಾಕಲು ಸಿದ್ಧರಿಲ್ಲ.

ಹಾಸನ ಜಿಲ್ಲೆಯ ಹಿರೀಸಾವೆ ಭಾಗದಲ್ಲಿ ಕುರುಚಲು ಕಾಡು ಹಾಗೂ ಖಾಲಿ ಕೆರೆಯಂಗಳಕ್ಕೆ ತಂದು ಬಿಡಲಾಗುತ್ತಿದೆ. ‘ಎಚ್‌ಎಫ್ ಅಥವಾ ಜರ್ಸಿ ಕರುವಿಗೆ ಪ್ರತಿ ನಿತ್ಯ ಕನಿಷ್ಠ ಮೂರು ಲೀಟರ್ ಹಾಲು ಬೇಕು. ದೂರದ ಗೋಶಾಲೆಗೆ ಬಿಡಲು ಹೆಚ್ಚು ಹಣ ಖರ್ಚಾಗುತ್ತದೆ. ಹಾಗಾಗಿ ಸಮೀಪದ ಕೆರೆ ಅಂಗಳದಲ್ಲಿ ಬಿಡಲಾಗಿದೆ’ ಎನ್ನುತ್ತಾರೆ ಹಿರೀಸಾವೆಯ ರೈತ ರಾಮಕೃಷ್ಣ.

‘ಮೂರು ದಿನ ಹಸುವಿನ ಹಾಲು ಉಣಿಸದಿದ್ದರೆ ಕರುಗಳು ಸತ್ತುಹೋಗುತ್ತವೆ. ಕಾಡಂಚಿಗೆ ಬಿಟ್ಟು ಬಂದರೆ ಕರುಗಳು ಕಾಡು ಪ್ರಾಣಿಗಳಿಗೆ ತುತ್ತಾಗುತ್ತವೆ’ ಎನ್ನುತ್ತಾರೆ ಅಗ್ಗುಂದ ಗ್ರಾಮದ ಕುಮಾರಸ್ವಾಮಿ.

‘ಹೋರಿಗರುಗಳನ್ನು ಕಾಡಂಚಿಗೆ ಬಿಟ್ಟರೆ, ಅವು ಒಂದೇ ಕಡೆ ನಿಂತು ಹುಲ್ಲನ್ನೆಲ್ಲ ಮೇಯುತ್ತವೆ. ಆನೆ ಮೊದಲಾದ ಸಸ್ಯಾಹಾರಿ ಪ್ರಾಣಿಗಳಿಗೆ ಹುಲ್ಲು ಸಾಕಾಗುವುದಿಲ್ಲ. ಆಗ ಆನೆಗಳು ಸುತ್ತಮುತ್ತಲ ಜಮೀನಿನ ಕಡೆ ಬರುತ್ತವೆ. ಜಾನುವಾರುಗಳ ಸಂಖ್ಯೆ ಕಾಡಂಚಿನಲ್ಲಿ ಹೆಚ್ಚಿದಂತೆ ಮಾಂಸಹಾರಿ ಪ್ರಾಣಿಗಳು ಅಲ್ಲಿಗೆ ಬರುತ್ತವೆ. ಇದರಿಂದ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತದೆ. ಕಾಡಿನ ಪರಿಸರದಲ್ಲಿ ಮಾನವನ ಯಾವುದೇ ಬಗೆಯ ಹಸ್ತಕ್ಷೇಪವು ತೊಂದರೆಯನ್ನೇ ಹೆಚ್ಚಿಸುತ್ತದೆ’ ಎನ್ನುತ್ತಾರೆ ವನ್ಯಜೀವಿ ತಜ್ಞ ರಾಜಕುಮಾರ್.

ಮೈಸೂರಿನ ಪಿಂಜರಪೋಳಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಹಸುಗಳು ಬರುತ್ತಿಲ್ಲ. ‘ಮುಗುಮ್ಮಾಗಿ ಕಸಾಯಿಖಾನೆಗಳು ನಡೆಯುತ್ತಿವೆ. ಮುಂಚೆ ರೈತರಿಗೆ ಹೆಚ್ಚಿನ ಹಣ ಕೊಟ್ಟು ಖರೀದಿಸುತ್ತಿದ್ದವರು, ಈಗ ಕಡಿಮೆ ಹಣಕ್ಕೆ ಖರೀದಿಸುತ್ತಿದ್ದಾರೆ. ಕಸಾಯಿಖಾನೆಯಲ್ಲಿ ಕೊಂದು, ಮಾಂಸವನ್ನು ಪ್ಯಾಕೆಟ್‌ನಲ್ಲಿ ಹೆಚ್ಚಿನ ದರಕ್ಕೆ ಕಾಳಸಂತೆಯಲ್ಲಿ ಮಾರುತ್ತಿದ್ದಾರೆ’ ಎಂದು ಹೆಸರು ಹೇಳಲು ಬಯಸದ ಪಿಂಜರಪೋಳದ ಕೆಲಸಗಾರರೊಬ್ಬರು ತಿಳಿಸಿದರು.

ಮೇವು ಭದ್ರತೆ ಕಾಯ್ದೆ ಜಾರಿಗೊಳಿಸಿ

‘ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ಜಾರಿಗೆ ತಂದ ಮೇಲೆ, ಜಾನುವಾರುಗಳಿಗೆ ಆಹಾರ ಒದಗಿಸುವ ಮೇವು ಭದ್ರತೆ ಕಾಯ್ದೆಯನ್ನೂ ಸರ್ಕಾರ ಜಾರಿಗೊಳಿಸಬೇಕು. ಜೊತೆಗೆ ಕೊಟ್ಟಿಗೆ ಭಾಗ್ಯ ಯೋಜನೆಯನ್ನೂ ಕರುಣಿಸಬೇಕು’ ಎಂದು ಒತ್ತಾಯಿಸುತ್ತಾರೆ ಮಂಡ್ಯದ ರೈತ ಮುಖಂಡ ಎಂ.ವಿ.ರಾಜೇಗೌಡ.

ಸುದ್ದಿ 2 ನಿಮಿಷ

ಪ್ರೊ.ಕೆ.ಎಸ್‌.ರಂಗಪ್ಪಗೆ ‘ಅಶುತೋಷ್ ಮುಖರ್ಜಿ ಫೆಲೋಷಿಪ್’

ಮೈಸೂರು: ಇಂಡಿಯನ್ ಸೈನ್ಸ್ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಅವರು ದಿ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್ (ಐಎಸ್‌ಸಿಎ) ನೀಡುವ ಪ್ರತಿಷ್ಠಿತ ‘ಅಶುತೋಷ್ ಮುಖರ್ಜಿ ಫೆಲೋಷಿಪ್ 2021–22’ಕ್ಕೆ ಆಯ್ಕೆಯಾಗಿದ್ದಾರೆ.

ಪ್ರತಿ ತಿಂಗಳು ₹ 30 ಸಾವಿರ ಗೌರವಧನ ಹಾಗೂ ವಾರ್ಷಿಕ ₹ 1 ಲಕ್ಷ ಪ್ರೋತ್ಸಾಹ ಧನವನ್ನು ಈ ಫೆಲೋಷಿಪ್ ಒಳಗೊಂಡಿದೆ. ತನ್ನ ಆಜೀವ ಸದಸ್ಯರ ಸೇವೆಯನ್ನು ಪಡೆಯುವ ಉದ್ದೇಶದಿಂದ ಐಎಸ್‌ಸಿಎ ಫೆಲೋಷಿಪ್ ಸ್ಥಾಪಿಸಿದೆ. ವಿಜ್ಞಾನ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ನೀಡಿದ ಕೊಡುಗೆಯನ್ನು ಪರಿಗಣಿಸಿ ರಂಗಪ್ಪ ಅವರನ್ನು ಆಯ್ಕೆ ಮಾಡಿದೆ. ಫೆಲೋಷಿಪ್‌ನ ಅವಧಿ ಏ.1 ರಿಂದ ಆರಂಭವಾಗಿ ಮೂರು ವರ್ಷಗಳು ಇರಲಿವೆ. ಈ ಅವಧಿಯಲ್ಲಿ ಮಾಡಿದ ಸಾಧನೆಯನ್ನು ಪರಿಗಣಿಸಿ ಮತ್ತೆ ಎರಡು ವರ್ಷಗಳವರೆಗೆ ಅವಧಿ ವಿಸ್ತರಿಸಲಾಗುವುದು ಎಂದು ಐಎಸ್‌ಸಿಎ ಪ್ರಕಟಣೆ ತಿಳಿಸಿದೆ.



‘ವಿಜ್ಞಾನ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಮಾಡಿರುವ ಕೆಲಸವನ್ನು ಗುರುತಿಸಿ ಐಎಸ್‌ಸಿಎ ಈ ಫೆಲೋಷಿಪ್‌ಗೆ ನನ್ನನ್ನು ಆಯ್ಕೆ ಮಾಡಿದೆ. ಇದು ಇನ್ನಷ್ಟು ಸಂಶೋಧನೆಗೆ ಉತ್ತೇಜನ ನೀಡಿದೆ’ ಎಂದು ರಂಗಪ್ಪ ಪ್ರತಿಕ್ರಿಯಿಸಿದ್ದಾರೆ.

‘ಸಂಸದ ಶ್ರೀನಿವಾಸ ಪ್ರಸಾದ್‌ಗೆ ಕುರುಬರ ಮೇಲೆ ಸಿಟ್ಯಾಕೆ?’

ದಾವಣಗೆರೆ: ‘ಪರಿಶಿಷ್ಟ ಪಂಗಡ ಮೀಸಲಾತಿಯಲ್ಲಿ ಕುರುಬ ಸಮಾಜಕ್ಕೆ ಅನ್ಯಾಯವಾಗಿದೆ. ಈ ಸಮಾಜದ ಪರ ಸಂಸದ ವಿ. ಶ್ರೀನಿವಾಸ ಪ್ರಸಾದ್ ಧ್ವನಿ ಎತ್ತಬೇಕಿತ್ತು. ಅದನ್ನು ಬಿಟ್ಟು ಸಮಾಜದ ಹೋರಾಟ ಟೀಕಿಸುತ್ತಿದ್ದಾರೆ. ಕುರುಬರ ಮೇಲೆ ಸಂಸದರಿಗೆ ಸಿಟ್ಯಾಕೆ’ ಎಂದು ಹಾಲುಮತ ಮಹಾಸಭಾ ರಾಜ್ಯ ಅಧ್ಯಕ್ಷ ರುದ್ರಣ್ಣ ಗುಳಗುಳಿ, ರಾಜ್ಯ ಸಂಚಾಲಕ ರಾಜು ಮೌರ್ಯ ಪ್ರಶ್ನಿಸಿದ್ದಾರೆ.

ಕುರುಬ ಸಮಾಜ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಇಂದಿಗೂ ಬಡತನದಲ್ಲಿದೆ. ಹಾಗಾಗಿ ಎಸ್‌.ಟಿ. ಮೀಸಲಾತಿಯಲ್ಲಿ ಆಗಿರುವ ಅನ್ಯಾಯಕ್ಕೆ ನ್ಯಾಯಕೊಡಿಸಲು ವಿ. ಶ್ರೀನಿವಾಸ ಪ್ರಸಾದ್ ಅವರೂ ಕೈಜೋಡಿಸಬೇಕು’ ಎಂದು ಕೋರಿದ್ದಾರೆ.

ಕಪ್ಪತ್ತಗುಡ್ಡದಲ್ಲಿ ಮತ್ತೆ ಬೆಂಕಿ

ಡಂಬಳ (ಗದಗ): ಡಂಬಳ ಹೋಬಳಿ ಡೋಣಿ ಸಮೀಪದ ಕೆಂಪುಗುಡ್ಡದಲ್ಲಿ ಗುರುವಾರ ಮಧ್ಯಾಹ್ನ ಮತ್ತೆ ಬೆಂಕಿ ಕಾಣಿಸಿಕೊಂಡಿದ್ದು ಅಂದಾಜು 50–60 ಹೆಕ್ಟೇರ್ ಅರಣ್ಯ ಬೆಂಕಿಗೆ ಆಹುತಿಯಾಗಿದೆ.

ಮುಂಡರಗಿ, ಶಿರಹಟ್ಟಿ, ಗದಗ ವಲಯದ ಅರಣ್ಯ ಇಲಾಖೆಯ 70ಕ್ಕೂ ಅಧಿಕ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.



ಗುರುವಾರ ತಡರಾತ್ರಿವರೆಗೂ ಕಾರ್ಯಾಚರಣೆ ನಡೆಯಿತು.

‘ಗುರುವಾರ ಬಿದ್ದಿರುವ ಬೆಂಕಿಯಿಂದ ಅಂದಾಜು 50ರಿಂದ 60 ಹೆಕ್ಟೇರ್ ಅರಣ್ಯ ನಾಶವಾಗಿದೆ. ಬೆಂಕಿ ನಂದಿಸಲು ಎಲ್ಲರೂ ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದೇವೆ’ ಎಂದು ಅರಣ್ಯ ಇಲಾಖೆ ಸಿಬ್ಬಂದಿ ಪ್ರದೀಪ್ ಪವಾರ್ ತಿಳಿಸಿದ್ದಾರೆ.

ಕಪ್ಪತ್ತಗುಡ್ಡವನ್ನು ಅತಿಕ್ರಮಣ ಮಾಡಿಕೊಂಡು ಸಾಗುವಳಿ ಮಾಡುತ್ತಿರುವವರ ವಿರುದ್ಧ ಪ್ರಕರಣ ದಾಖಲು ಮಾಡಿ ಜಮೀನುಗಳನ್ನು ಅರಣ್ಯ ಇಲಾಖೆ ವಶಪಡಿಸಿಕೊಂಡಿದ್ದರಿಂದ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ಈ ಘಟನೆ ಪದೇ ಪದೇ ನಡೆಯುತ್ತಿದೆ ಎಂದು ಹೆಸರು ಹೇಳಲು ಇಚ್ಛಿಸದ ಅರಣ್ಯ ಇಲಾಖೆ ಸಿಬ್ಬಂದಿಯೊಬ್ಬರು ತಿಳಿಸಿದ್ದಾರೆ.

‘ಅನುಮತಿ ಇಲ್ಲದೆ ಮೀಸಲು ಅರಣ್ಯ ಕೈಬಿಡಲಾಗದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆಯದೆ ಯಾವುದೇ ಅರಣ್ಯ ಭೂಮಿಯನ್ನು ರಾಜ್ಯ ಸರ್ಕಾರ ಮೀಸಲು ಅರಣ್ಯದಿಂದ ಕೈಬಿಡುವುದು ಸಾಧ್ಯವಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಮಲೆನಾಡು ಪ್ರದೇಶದಲ್ಲಿ ಪುನರ್ವಸತಿ ಉದ್ದೇಶಕ್ಕೆ ಅರಣ್ಯ ಭೂಮಿಯ ಒಂದು ಭಾಗವನ್ನು 2017ರಲ್ಲಿ ಮೀಸಲು ಅರಣ್ಯದಿಂದ ಕೈಬಿಟ್ಟು ಹೊರಡಿಸಿದ್ದ ರಾಜ್ಯ ಸರ್ಕಾರದ



ಆದೇಶವನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ರದ್ದುಪಡಿಸಿತು.

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 28ರ ಅಡಿಯಲ್ಲಿ ರಾಜ್ಯ ಸರ್ಕಾರ ಅಧಿಕಾರ ಚಲಾಯಿಸಲು ಅವಕಾಶ ಇಲ್ಲ ಎಂದು ಪೀಠ ಹೇಳಿದೆ.

ರಾಜ್ಯ ಅರಣ್ಯ ಕಾಯ್ದೆಯ ಸೆಕ್ಷನ್ 28ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಗಿರೀಶ್ ಆಚಾರ್ ಎಂಬುವರು ಅರ್ಜಿ ಸಲ್ಲಿಸಿ, ಇದು ಕೇಂದ್ರ ಕಾಯ್ದೆಯ ಸೆಕ್ಷನ್ 2ಕ್ಕೆ ವಿರುದ್ಧವಾಗಿದೆ ಎಂದು ಆರೋಪಿಸಿದ್ದರು.

‘ರಾಜ್ಯ ಸರ್ಕಾರ ತೆಗೆದುಕೊಂಡಿರುವ ಈ ನಿರ್ಧಾರ ಸುಪ್ರೀಂ ಕೋರ್ಟ್‌ನ ಆದೇಶಕ್ಕೂ ವಿರುದ್ಧವಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯದೆ ಮಾಡುವ ಆದೇಶವು ಮಾನ್ಯ ಆಗುವುದಿಲ್ಲ’ ಎಂದು ಪೀಠ ಅಭಿಪ್ರಾಯಪಟ್ಟಿದೆ.

ನಿಧನ ವಾರ್ತೆ

ಇಸ್ರೊ ನಿವೃತ್ತ ವಿಜ್ಞಾನಿ ಎಸ್‌.ಸಿ.ರತ್ನಾಕರ

ತೀರ್ಥಹಳ್ಳಿ: ತಾಲ್ಲೂಕಿನ ಬಸವಾನಿ ಸಮೀಪ ಶುಂಠಿಕಟ್ಟೆ ಗ್ರಾಮದವರಾದ ಇಸ್ರೊದ ನಿವೃತ್ತ ವಿಜ್ಞಾನಿ ಎಸ್‌.ಸಿ. ರತ್ನಾಕರ (64) ಬುಧವಾರ ಕಾರ್ಕಳ ತಾಲ್ಲೂಕಿನ ಎಣ್ಣೆಹೊಳೆ ನದಿಯಲ್ಲಿ ಆಕಸ್ಮಿಕವಾಗಿ ಮುಳುಗಿ ಮೃತಪಟ್ಟರು.

ರತ್ನಾಕರ ಅವರು ಅವಿವಾಹಿತರಾಗಿದ್ದು, ಕಾರ್ಕಳ ಬೈಲೂರು ರಾಮಕೃಷ್ಣಾಶ್ರಮದಲ್ಲಿ ತಂಗಿದ್ದರು. ತುಂಗಾ ಕಾಲೇಜಿನ ಹಳೆ ವಿದ್ಯಾರ್ಥಿಯಾಗಿದ್ದ ಅವರು ಕಾಲೇಜಿನ ಶೈಕ್ಷಣಿಕ



ಎಸ್‌.ಸಿ.ರತ್ನಾಕರ

ಸಲಹಾ ಮಂಡಳಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುತ್ತಿದ್ದರು.

ತಾಲ್ಲೂಕಿನ ಶುಂಠಿಕಟ್ಟೆಯಲ್ಲಿ ಗುರುವಾರ ರತ್ನಾಕರ ಅವರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿಎಂಸಿ ದೂರಿನ ಬೆನ್ನಲ್ಲೇ ಚುನಾವಣಾ ಆಯೋಗ ಆದೇಶ • ಇವಿಜಿಲ್‌ನಲ್ಲಿ 1,000 ದೂರು

‘ಮೋದಿ ಬ್ಯಾನರ್ ತೆಗೆಯಿರಿ’

ಕೋಲ್ಕತ್ತ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರಗಳಿರುವ ಹೋರ್ಡಿಂಗ್ ಮತ್ತು ಬ್ಯಾನರ್‌ಗಳನ್ನು ತೆರವು ಮಾಡುವಂತೆ ಪಶ್ಚಿಮ ಬಂಗಾಳದಲ್ಲಿರುವ ಕೇಂದ್ರ ಸರ್ಕಾರದ ಸಂಸ್ಥೆಗಳಿಗೆ ಚುನಾವಣಾ ಆಯೋಗವು ಸೂಚನೆ ನೀಡಿದೆ.

ಕೋವಿಡ್-19 ಲಸಿಕೆಯ ಬಾಟಲಿ, ಬಾಕ್ಸ್, ಪ್ರಮಾಣಪತ್ರ, ಬ್ಯಾನರ್‌ಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರವಿದೆ. ಇದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಎಂದು ಟಿಎಂಸಿ ಬುಧವಾರವಷ್ಟೇ ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು. ಇದರ ಬೆನ್ನಲ್ಲೇ ಆಯೋಗವು ಈ ಆದೇಶ ನೀಡಿದೆ.

‘ಪೆಟ್ರೋಲ್ ಬಂಕ್‌ಗಳು, ಕೇಂದ್ರ ಸರ್ಕಾರದ ಕಚೇರಿಗಳು ಮತ್ತು ಏಜೆನ್ಸಿಗಳ ಬ್ಯಾನರ್ ಮತ್ತು ಹೋರ್ಡಿಂಗ್‌ಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರವಿದೆ. ಇದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ. ಈ ಸಂಬಂಧ ಇ-ವಿಜಿಲ್ ಅಪ್ಲಿಕೇಷನ್‌ನಲ್ಲಿ 1,000ಕ್ಕೂ ಹೆಚ್ಚು ದೂರುಗಳು ಬಂದಿವೆ. ಇದರಲ್ಲಿ 450 ದೂರುಗಳು ಸಮಂಜಸವಾಗಿವೆ. ಹೀಗಾಗಿ ರಾಜ್ಯದ ಎಲ್ಲೆಡೆ ಮೋದಿ ಅವರ ಚಿತ್ರವಿರುವ ಹೋರ್ಡಿಂಗ್ ಮತ್ತು ಬ್ಯಾನರ್‌ಗಳನ್ನು ತೆರವು ಮಾಡಲು ಸೂಚಿಸಿದ್ದೇವೆ’ ಎಂದು ಆಯೋಗವು ಹೇಳಿದೆ.

‘ಕಾನೂನಿನ ಮುಂದೆ ಎಲ್ಲರೂ ಸಮಾನರು. ನೀತಿಸಂಹಿತೆಯನ್ನು ಉಲ್ಲಂಘಿಸಿದರೆ ಏನಾಗುತ್ತದೆ ಎಂಬುದು ಸಾರ್ವಜನಿಕರಿಗೆ ಗೊತ್ತಾಗಲಿದೆ. ಈ ಹೋರ್ಡಿಂಗ್‌ಗಳು ಮತ್ತು ಬ್ಯಾನರ್‌ಗಳನ್ನು 72 ಗಂಟೆಗಳ ಒಳಗೆ ತೆರವು ಮಾಡಿ ಎಂದು ಸಂಬಂಧಿತ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ’ ಎಂದು ಆಯೋಗವು ಹೇಳಿದೆ.

200ಕ್ಕೂ ಹೆಚ್ಚು ಸ್ಥಾನಗಳು: ‘ಮುಖ್ಯಮಂತ್ರಿಯಾಗಿ ತಮ್ಮ ಕಡೆಯ ದಿನಗಳನ್ನು ಮಮತಾ ಬ್ಯಾನರ್ಜಿ ಅವರು ಎಣಿಸಬೇಕು. ಮೇ 3ರ ನಂತರ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಮುಖ್ಯಮಂತ್ರಿ ಇರಲಿದ್ದಾರೆ. ಈ ಚುನಾವಣೆಯಲ್ಲಿ ಬಿಜೆಪಿ 200ಕ್ಕೂ ಹೆಚ್ಚು ಕ್ಷೇತ್ರಗಳನ್ನು ಗೆಲ್ಲಲಿದೆ’ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ.

‘ಕಮ್ಯುನಿಸ್ಟರ ರಕ್ತಪಾತವನ್ನು ಮಮತಾ ಬ್ಯಾನರ್ಜಿ ಮುಂದುವರಿಸಿದ್ದರು. ಆದರೆ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ರಕ್ತಪಾತ ಮತ್ತು ರಾಜಕೀಯ ಕೊಲೆಗಳು ನಿಲ್ಲಲಿವೆ’ ಎಂದು ಅವರು ಇಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ ಎಂದು ಎಎನ್‌ಐ ವರದಿ ಮಾಡಿದೆ.

‘ಏಕ್ ಔರ್ ನರೇನ್...’

ಪ್ರಧಾನಿ ನರೇಂದ್ರ ಮೋದಿ ಅವರ ಜೀವನವನ್ನು ಆಧರಿಸಿದ ಚಲನಚಿತ್ರ ನಿರ್ಮಾಣಕ್ಕೆ ಚಾಲನೆ ದೊರೆತಿದೆ. ಕೋಲ್ಕತ್ತ ಮೂಲದ ಚಲನಚಿತ್ರ ನಿರ್ದೇಶಕ ಮಿಲನ್ ಭೌಮಿಕ್ ‘ಏಕ್ ಔರ್ ನರೇನ್...’ ಎಂಬ ಸಿನಿಮಾವನ್ನು ನಿರ್ಮಿಸುವುದಾಗಿ ಘೋಷಿಸಿದ್ದಾರೆ. ಬಿ.ಆರ್.ಛೋಪ್ರಾ ಅವರ ಮಹಾಭಾರತ ಧಾರಾವಾಹಿಯಲ್ಲಿ ಯುಧಿಷ್ಠಿರನ ಪಾತ್ರ ನಿರ್ವಹಿಸಿದ್ದ ಗಜೇಂದ್ರ ಚೌಹಾಣ್ ಅವರು ಈ ಸಿನಿಮಾದಲ್ಲಿ ಮೋದಿ ಅವರ ಪಾತ್ರವನ್ನು ನಿರ್ವಹಿಸಲಿದ್ದಾರೆ.

‘ಈ ಸಿನಿಮಾದಲ್ಲಿ ಎರಡು ಪ್ರಮುಖ ಭಾಗಗಳು ಇರಲಿವೆ. ಒಂದು ವಿವೇಕಾನಂದ ಅವರದ್ದು. ಸೋದರತ್ವವನ್ನು ವಿವೇಕಾನಂದ ಅವರು ವಿಶ್ವದಾದ್ಯಂತ ಹೇಗೆ ಪಸರಿಸಿದರು ಎಂಬುದನ್ನು ಸಿನಿಮಾದಲ್ಲಿ ತೋರಿಸಲಾಗುತ್ತದೆ. ನಂತರ ಮೋದಿ ಅವರು ಜಾಗತಿಕ ಮಟ್ಟದಲ್ಲಿ ಭಾರತವನ್ನು ಎತ್ತರಕ್ಕೆ ಕೊಂಡೊಯ್ದ ಬಗೆಯನ್ನು ತೋರಿಸಲಾಗುತ್ತದೆ’ ಎಂದು ಮಿಲನ್ ಹೇಳಿದ್ದಾರೆ.



ಕೋಲ್ಕತ್ತದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನಡೆಸಲಿರುವ ಚುನಾವಣಾ ಪ್ರಚಾರ ಸಭೆಗೆ ಭಾರಿ ಸಿದ್ಧತೆ ನಡೆದಿದೆ. ಸಭೆ ನಡೆಯಲಿರುವ ಸ್ಥಳದಲ್ಲಿ ಅಳವಡಿಸಲು ತಂದಿರುವ ಮೈಕುಗಳನ್ನು ಟ್ರಕ್‌ನಿಂದ ಕಾರ್ಮಿಕರು ಗುರುವಾರ ಇಳಿಸಿದರು –ಎಎಫ್‌ಪಿ ಚಿತ್ರ

ಬಿಜೆಪಿ ನಿಯೋಗದಿಂದ ದೂರು

ಪಶ್ಚಿಮ ಬಂಗಾಳದ ಸ್ಥಳೀಯ ಸಂಸ್ಥೆಗಳ ಮಂಡಳಿಗಳಿಗೆ ಸರ್ಕಾರದಿಂದ ನಾಮನಿರ್ದೇಶಿತವಾಗಿರುವ ಆಡಳಿತಾಧಿಕಾರಿಗಳನ್ನು ಕೂಡಲೇ ವಜಾ ಮಾಡಬೇಕು ಎಂದು ಬಿಜೆಪಿಯು ಚುನಾವಣಾ ಆಯೋಗವನ್ನು ಆಗ್ರಹಿಸಿದೆ. 'ರಾಜ್ಯದಲ್ಲಿ 135 ಸ್ಥಳೀಯ ಸಂಸ್ಥೆಗಳಿವೆ. ಅವುಗಳಲ್ಲಿ 125ರಲ್ಲಿ ಇರುವ ಮಂಡಳಿಯ ಆಡಳಿತಾಧಿಕಾರಿಗಳ ಅವಧಿ 2020ರ ಏಪ್ರಿಲ್-ಮೇನಲ್ಲಿಯೇ ಮುಗಿದಿದೆ. ಸರ್ಕಾರವು ತನ್ನ ಪ್ರಭಾವ ಬಳಸಿ, ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡಿದೆ. ಇವರನ್ನು ಕೂಡಲೇ ವಜಾ ಮಾಡಬೇಕು' ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ನೇತೃತ್ವದಲ್ಲಿ, ಬಿಜೆಪಿ ನಿಯೋಗವು ಚುನಾವಣಾ ಆಯೋಗಕ್ಕೆ ಮನವಿ ಮಾಡಿದೆ.

ರಾಹುಲ್ ಪ್ರಚಾರಕ್ಕೆ ನಿರ್ಬಂಧ: ಆಯೋಗಕ್ಕೆ ಬಿಜೆಪಿ ಮನವಿ

ಚೆನ್ನೈ (ಪಿಟಿಐ): ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದಲ್ಲಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ತಮಿಳುನಾಡಿನಲ್ಲಿ ಪ್ರಚಾರ ನಡೆಸುವುದನ್ನು ನಿರ್ಬಂಧಿಸಬೇಕು ಎಂದು ತಮಿಳುನಾಡು ಬಿಜೆಪಿ ಘಟಕವು ಚುನಾವಣಾ ಆಯೋಗವನ್ನು ಒತ್ತಾಯಿಸಿದೆ.



ರಾಹುಲ್ ಗಾಂಧಿ

ಮಾರ್ಚ್ 1ರಂದು ಕನ್ಯಾಕುಮಾರಿ ಜಿಲ್ಲೆಯ ಮುಲಗುಮೂಡುವಿನ ಸೇಂಟ್ ಜೋಸೆಫ್ ಶಾಲೆಯಲ್ಲಿ ರಾಹುಲ್ ಗಾಂಧಿ ಅವರು ಪಾಲ್ಗೊಂಡ ಕಾರ್ಯಕ್ರಮವು ಚುನಾವಣಾ ಪ್ರಚಾರವನ್ನು ಹೋಲುತ್ತದೆ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಮುಖಂಡ ವಿ. ಬಾಲಚಂದ್ರನ್ ಆರೋಪಿಸಿದ್ದಾರೆ.

ರಾಹುಲ್ ಗಾಂಧಿ ಅವರು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 109 ಮತ್ತು 124 ಎ ಅಡಿಯಲ್ಲಿ ಅಪರಾಧ ಎಸಗಿದ್ದು ಅವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಬೇಕು ಎಂದೂ ಮನವಿ ಮಾಡಿದ್ದಾರೆ. ‘ದೇಶದಲ್ಲಿ ಅಸಹನೆ ಹಾಗೂ ಭಯದ ವಾತಾವರಣವಿದೆ. ನಾವು ಇದರ ವಿರುದ್ಧ ಹೋರಾಡಬೇಕು. ಮತ್ತೊಮ್ಮೆ ಭಾರತದಲ್ಲಿ ಸಂತುಷ್ಟ, ಆರಾಮದಾಯಕ ಹಾಗೂ ನಿರ್ಭೀತ ವಾತಾವರಣ ಸೃಷ್ಟಿಸಬೇಕಿದೆ’ ಎಂದು ರಾಹುಲ್ ವಿದ್ಯಾರ್ಥಿಗಳಿಗೆ ಹೇಳಿದ್ದರು.

ಕಾನೂನಿನಿಂದ ಸ್ಥಾಪಿಸಲ್ಪಟ್ಟ ಸರ್ಕಾರದ ಬಗ್ಗೆ ದ್ವೇಷ, ತಿರಸ್ಕಾರ ಮತ್ತು ಅಸಮಾಧಾನವನ್ನು ಉಂಟುಮಾಡುವ ಉದ್ದೇಶದಿಂದ ನೀಡಿದ ಹೇಳಿಕೆಯು ಯುವಕರನ್ನು ಮತ್ತೊಂದು ಸ್ವಾತಂತ್ರ್ಯ ಹೋರಾಟಕ್ಕೆ ಪ್ರಚೋದಿಸುತ್ತದೆ ಎಂದು ಬಿಜೆಪಿ ನಾಯಕರು ವಾದಿಸಿದ್ದಾರೆ.

ಶಶಿಕಲಾ ರಾಜಕೀಯ ನಿವೃತ್ತಿಗೆ ಎಐಎಡಿಎಂಕೆ ಹರ್ಷ: ವಿ.ಕೆ. ಶಶಿಕಲಾ ಅವರು ರಾಜಕೀಯದಿಂದ ದೂರ ಉಳಿಯುವುದಾಗಿ ಬುಧವಾರ ಪ್ರಕಟಿಸಿದ ನಿರ್ಧಾರಕ್ಕೆ ತಮಿಳುನಾಡಿನ ಆಡಳಿತಾರೂಢ ಎಐಎಡಿಎಂಕೆ ಹರ್ಷ ವ್ಯಕ್ತಪಡಿಸಿದೆ. ಶಶಿಕಲಾ ಅವರ ನಿರ್ಧಾರದಿಂದ ಪಕ್ಷಕ್ಕೆ ಒಳಿತಾಗುತ್ತದೆ ಎಂದು ಅಭಿಪ್ರಾಯಪಟ್ಟಿದೆ.

ಒಂದೊಮ್ಮೆ ಪಕ್ಷದ ಮೇಲೆ ಹಿಡಿತ ಸಾಧಿಸಿದ್ದ ಶಶಿಕಲಾ ಅವರು ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಶಿಕ್ಷೆ ಅನುಭವಿಸಿ ಬಿಡುಗಡೆಯಾಗಿ ಬಂದಿದ್ದಾರೆ. ಅವರು ಬರೆದಿರುವ ಎರಡು ಪುಟಗಳ ಪತ್ರವು, 2019ರ ಚುನಾವಣೆಯಲ್ಲಿ ಆದ ರೀತಿಯಲ್ಲಿ ಪಕ್ಷದ ಮತಬ್ಯಾಂಕ್ ಒಡೆಯದಂತೆ ತಡೆಯುವ ಉದ್ದೇಶ ಹೊಂದಿದೆ ಎಂದು ಎಐಎಡಿಎಂಕೆ ಮುಖಂಡರೊಬ್ಬರು ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಭಾರಿ ಸಂದಿಗ್ಧದಲ್ಲಿದ್ದ ಪಕ್ಷವನ್ನು ಶಶಿಕಲಾ ಅವರ ನಿರ್ಧಾರವು ಪಾರು ಮಾಡಿದೆ. ಅವರ ನಡೆಯಿಂದ ಪಕ್ಷಕ್ಕೆ ಸಾಕಷ್ಟು ಒಳಿತಾಗಲಿದೆ ಎಂದು ಅವರು ಹೇಳಿದ್ದಾರೆ. ಶಶಿಕಲಾ ಅವರು ಪತ್ರದಲ್ಲಿ ಎಲ್ಲಿಯೂ ಎಐಎಡಿಎಂಕೆ ಹೆಸರು ಉಲ್ಲೇಖಿಸಿರಲಿಲ್ಲ. ‘ಜಯಲಲಿತಾ ಅವರ ಬೆಂಬಲಿಗರ ಶತ್ರು ಎಂದರೆ ಡಿಎಂಕೆ’ ಎಂದು ಶಶಿಕಲಾ ಹೇಳಿರುವುದು ಎಐಎಡಿಎಂಕೆ ಮತ್ತು ಮುಖ್ಯಮಂತ್ರಿ ಅಭ್ಯರ್ಥಿ ಪಳನಿಸ್ವಾಮಿ ಅವರಿಗೆ ನೆರವಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮುಗಿಯದ ಡಿಎಂಕೆ ಸೀಟು ಹಂಚಿಕೆ

ವಿಧಾನಸಭಾ ಚುನಾವಣೆಗೆ ಕ್ಷೇತ್ರಗಳ ಹಂಚಿಕೆಯಲ್ಲಿ ಮಿತ್ರಪಕ್ಷ ಡಿಎಂಕೆ ತೆಗೆದುಕೊಂಡ ಕಠಿಣ ನಿಲುವು ಕಾಂಗ್ರೆಸ್‌ಗೆ ತಲೆನೋವಾಗಿ ಪರಿಣಮಿಸಿದೆ. ಹೀಗಾಗಿ ತಮಿಳುನಾಡು ಕಾಂಗ್ರೆಸ್ ಸಮಿತಿಯು (ಟಿಎನ್‌ಸಿಸಿ) ಗುರುವಾರ ತನ್ನ ನಾಯಕರೊಂದಿಗೆ ತೀವ್ರ ಸಮಾಲೋಚನೆ ನಡೆಸಿತು.

25ಕ್ಕಿಂತ ಹೆಚ್ಚು ಸ್ಥಾನಗಳು ಸಿಗುವುದಿಲ್ಲ ಎಂದಾದರೆ ಮೈತ್ರಿಯಿಂದ ಹೊರಬರುವುದು ಒಳಿತು ಎಂಬ ಅಭಿಪ್ರಾಯವನ್ನು ಪಕ್ಷದ ಒಂದು ಗುಂಪು ಮುಂದಿಟ್ಟಿತು. ಆದರೆ 27 ಸೀಟುಗಳ ಪ್ರಸ್ತಾವ ಒಪ್ಪಿಕೊಳ್ಳುವುದು ಒಳಿತು ಎಂದು ಮತ್ತೊಂದು ಗುಂಪು ಅಭಿಪ್ರಾಯಪಟ್ಟಿದೆ.

ಎಐಸಿಸಿ ಉಸ್ತುವಾರಿ ದಿನೇಶ್ ಗುಂಡೂರಾವ್ ಅವರು ಪಕ್ಷದ ಮುಖಂಡರ ಜೊತೆ ಮಾತುಕತೆ ನಡೆಸಿದರು. ‘ಎರಡೂ ಪಕ್ಷಗಳು ತಮ್ಮ ನಿಲುವಿಗೆ ಅಂಟಿಕೊಂಡಿರುವುದು ಬಿಕ್ಕಟ್ಟು ಉಂಟು ಮಾಡಿದೆ. ಮೈತ್ರಿಯಲ್ಲಿ ಪರಸ್ಪರ ಗೌರವ ಇರಬೇಕು. ಜಾತ್ಯತೀತ ಪಕ್ಷಗಳು ಒಂದಾಗಬೇಕು ಎಂಬುದು ನಮ್ಮ ಉದ್ದೇಶ’ ಎಂದು ಗುಂಡೂರಾವ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ವಿಸಿಕೆಗೆ ಆರು ಸ್ಥಾನ ಹಂಚಿಕೆ: ತಮಿಳುನಾಡು ವಿಧಾನಸಭೆಯ ಆರು ಕ್ಷೇತ್ರಗಳಲ್ಲಿ ವಿಡುಥಲೈ ಚಿರುತೈಗಳ್ ಕಚ್ಚಿ (ವಿಸಿಕೆ) ಪಕ್ಷವು ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಮಿತ್ರಪಕ್ಷ ಡಿಎಂಕೆ ಜೊತೆಗಿನ ಸೀಟು ಹಂಚಿಕೆ ಒಪ್ಪಂದ ಅಂತಿಮವಾಗಿದೆ.

ತನಗೆ ಕೇವಲ ಆರು ಕ್ಷೇತ್ರಗಳನ್ನು ನೀಡುತ್ತಿರುವುದಕ್ಕೆ ವಿಸಿಕೆ ಬೇಸರ ವ್ಯಕ್ತಪಡಿಸಿತ್ತು. ಆದರೆ ಎಐಎಡಿಎಂಕೆ–ಬಿಜೆಪಿ ಮೈತ್ರಿಕೂಟವನ್ನು ಸೋಲಿಸಲು ಡಿಎಂಕೆ ಜೊತೆ ಕೈಜೋಡಿಸುತ್ತಿರುವುದಾಗಿ ಪಕ್ಷದ ಮುಖ್ಯಸ್ಥ ಟಿ.ತಿರುಮಾವಾಲವನ್ ಹೇಳಿದ್ದಾರೆ.

> **ವಿ.ಕೆ. ಶಶಿಕಲಾ ಅವರು ರಾಜಕೀಯದಿಂದ ಹೊರಗುಳಿಯುವ ನಿರ್ಧಾರ ಶ್ಲಾಘನೀಯ. ಈ ನಿರ್ಧಾರವು ಅಮ್ಮನ (ಜಯಲಲಿತಾ) ಕನಸುಗಳನ್ನು ಈಡೇರಿಸುತ್ತದೆ**
>
> **ಸಿ.ಟಿ.ರವಿ.,** ಬಿಜೆಪಿ ಪ್ರಧಾನ ಕಾರ್ಯದರ್ಶಿ

ಟಿಎಂಸಿಗೆ ಶಿವಸೇನಾ ಬೆಂಬಲ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಬದಲಿಗೆ ಟಿಎಂಸಿಗೆ ಬೆಂಬಲ ನೀಡುತ್ತೇವೆ ಎಂದು ಶಿವಸೇನಾ ವಕ್ತಾರ ಮತ್ತು ಸಂಸದ ಸಂಜಯ್ ರಾವುತ್ ಟ್ವೀಟ್ ಮಾಡಿದ್ದಾರೆ.

‘ಪಶ್ಚಿಮ ಬಂಗಾಳದಲ್ಲಿ ಶಿವಸೇನಾ ಸ್ಪರ್ಧಿಸುತ್ತದೆಯೇ ಇಲ್ಲವೇ ಎಂದು ಹಲವರು ಕೇಳಿದ್ದಾರೆ. ಪಕ್ಷದ ಅಧ್ಯಕ್ಷ ಉದ್ಧವ್ ಠಾಕ್ರೆ ಅವರ ಜತೆಗಿನ ಚರ್ಚೆಯ ನಂತರ ಈ ನಿರ್ಧಾರಕ್ಕೆ ಬರಲಾಗಿದೆ. ಬಂಗಾಳದಲ್ಲಿ ಶಿವಸೇನಾವು, ಮಮತಾ ದೀದಿ ಅವರಿಗೆ ತನ್ನ ಸಂಪೂರ್ಣ ಬೆಂಬಲ ನೀಡಲಿದೆ’ ಎಂದು ರಾವುತ್ ಘೋಷಿಸಿದ್ದಾರೆ. ಮನಿ, ಮಸಲ್ ಮತ್ತು ಮೀಡಿಯಾ ಎಂಬ ಎಲ್ಲಾ ‘ಎಂ’ಗಳನ್ನು ‘ಮ’ಮತಾ ದೀದಿ ವಿರುದ್ಧ ಬಳಸಲಾಗುತ್ತಿದೆ. ಹೀಗಾಗಿ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಸ್ಪರ್ಧಿಸದೆ ಇರಲು ಶಿವಸೇನಾ ನಿರ್ಧರಿಸಿದೆ’ ಎಂದು ಅವರು ಹೇಳಿದ್ದಾರೆ.

ಶಿವಸೇನಾದ ನಿರ್ಧಾರವನ್ನು ಟಿಎಂಸಿ ಸ್ವಾಗತಿಸಿದೆ. ‘ಶಿವಸೇನಾದ ನಿರ್ಧಾರವನ್ನು ಸ್ವಾಗತಿಸುತ್ತೇವೆ. ಪಶ್ಚಿಮ ಬಂಗಾಳದಲ್ಲಿ ಸ್ಪರ್ಧಿಸದೇ ಇರುವುದಕ್ಕೆ ನಾವು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ’ ಎಂದು ಟಿಎಂಸಿ ಸಂಸದ ಸೌಗತಾ ರಾಯ್ ಟ್ವೀಟ್‌ನಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ಆರ್‌ಜೆಡಿ ಮತ್ತು ಸಮಾಜವಾದಿ ಪಕ್ಷಗಳು ಕಳೆದ ವಾರವಷ್ಟೇ ಟಿಎಂಸಿಗೆ ಬೆಂಬಲ ಘೋಷಿಸಿದ್ದವು.

ಈಚೆಗೆ ಆರ್‌ಜೆಡಿ ಮುಖ್ಯಸ್ಥ ತೇಜಸ್ವಿ ಯಾದವ್ ಅವರು ಮಮತಾ ಬ್ಯಾನರ್ಜಿ ಅವರನ್ನು ಭೇಟಿ ಮಾಡಿ ಬೆಂಬಲ ಘೋಷಿಸಿದ್ದರು. ಪಶ್ಚಿಮ ಬಂಗಾಳ-ಬಿಹಾರ ಗಡಿಯಲ್ಲಿರುವ ಪಶ್ಚಿಮ ಬಂಗಾಳದ ಜಿಲ್ಲೆಗಳಲ್ಲಿ ಟಿಎಂಸಿ ಪರವಾಗಿ ಪ್ರಚಾರ ನಡೆಸುವುದಾಗಿ ಅವರು ಹೇಳಿದ್ದಾರೆ. ಸಮಾಜವಾದಿ ಪಕ್ಷವು ಸಹ ಟಿಎಂಸಿ ಪರವಾಗಿ ಪ್ರಚಾರ ನಡೆಸುವುದಾಗಿ ಹೇಳಿದೆ.

ನುಡಿ-ಕಿಡಿ



ಗೆಲುವು ಮಮತಾ ಬ್ಯಾನರ್ಜಿಯವರದ್ದಾಗಲಿ ಎಂದು ನಾವು ಆಶಿಸುತ್ತೇವೆ. ಏಕೆಂದರೆ ಅವರು ನಿಜವಾದ ಬಂಗಾಳ ಹುಲಿ. ಅವರಿಗೆ ಬೆಂಬಲವಾಗಿ ನಾವು ನಿಲ್ಲುತ್ತೇವೆ

ಸಂಜಯ್ ರಾವುತ್, ಶಿವಸೇನಾ ವಕ್ತಾರ ಮತ್ತು ಸಂಸದ


ಶಿವಸೇನಾಗೆ ಪಶ್ಚಿಮ ಬಂಗಾಳದಲ್ಲಿ ನೆಲೆಯೇ ಇಲ್ಲ. ಅಂಥದ್ದರಲ್ಲಿ, ಅವರು ಬೆಂಬಲ ನೀಡುವುದರಿಂದ ಟಿಎಂಸಿಗೆ ಯಾವ ಲಾಭವೂ ಆಗುವುದಿಲ್ಲ. ಇದು ನಿಜಕ್ಕೂ ಅಪಹಾಸ್ಯ

ಪಶ್ಚಿಮ ಬಂಗಾಳ ಬಿಜೆಪಿ ಘಟಕ

ಮೆಟ್ರೊಮ್ಯಾನ್ ಎನ್‌ಡಿಎ ಸಿಎಂ ಅಭ್ಯರ್ಥಿ ಆದ ಪ್ರಹಸನ

ತಿರುವನಂತಪುರ (ಪಿಟಿಐ): ‘ಮೆಟ್ರೊಮ್ಯಾನ್’ ಇ.ಶ್ರೀಧರನ್ ಅವರನ್ನು ಕೇರಳ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎಯ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆ ಮಾಡಲಾಗಿದೆ. ಶ್ರೀಧರನ್ ನೇತೃತ್ವದಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ಅನ್ನು ಬಿಜೆಪಿ ಸೋಲಿಸಲಿದೆ ಎಂದು ಕೇಂದ್ರ ಸಚಿವ ವಿ.ಮುರಳೀಧರನ್ ಗುರುವಾರ ಘೋಷಿಸಿದರು. ಕೆಲವೇ ಗಂಟೆಗಳಲ್ಲಿ ಇ.ಶ್ರೀಧರನ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿಲ್ಲ ಎಂದು ಹೇಳಿದರು.

ಈ ಬೆಳವಣಿಗೆಯಿಂದ ಬಿಜೆಪಿ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಮುಜುಗರ ಎದುರಿಸಿತು. ‘ಇ.ಶ್ರೀಧರನ್ ಅವರನ್ನು ಕೇರಳ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎಯ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಬೇಕು ಎಂದು ಹೈಕಮಾಂಡ್‌ಗೆ ಮನವಿ ಸಲ್ಲಿಸುತ್ತೇವೆ’ ಎಂದು ಕೇರಳ ಬಿಜೆಪಿ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಅವರು ಗುರುವಾರ ಬೆಳಿಗ್ಗೆ ಹೇಳಿದ್ದರು. ಮಧ್ಯಾಹ್ನದ ವೇಳೆಗೆ, ಶ್ರೀಧರನ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಕೇಂದ್ರ ಸಚಿವರು ಘೋಷಿಸಿದ್ದರು. ಹೀಗಾಗಿ ಈ ಸುದ್ದಿ ವೈರಲ್ ಆಗಿತ್ತು.



ಇ.ಶ್ರೀಧರನ್

ಆದರೆ, ಕೆಲವೇ ಗಂಟೆಗಳಲ್ಲಿ ವಿ.ಮುರಳೀಧರನ್ ಅವರು ಸ್ಪಷ್ಟೀಕರಣ ನೀಡಿದರು. ‘ಶ್ರೀಧರನ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಬೇಕು ಎಂದು ಮನವಿ ಸಲ್ಲಿಸಲಾಗಿದೆಯಷ್ಟೆ. ಅದನ್ನು ನಾನು ತಪ್ಪಾಗಿ ಅರ್ಥೈಸಿಕೊಂಡು, ಆಯ್ಕೆ ಮಾಡಲಾಗಿದೆ ಎಂದು ಘೋಷಿಸಿದ್ದೇನೆ. ಶ್ರೀಧರನ್ ಅವರನ್ನು ಕೇರಳ ಚುನಾವಣೆಗೆ ಎನ್‌ಡಿಎಯ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿಲ್ಲ’ ಎಂದು ಮುರಳೀಧರನ್ ಅವರು ಸ್ಪಷ್ಟನೆ ನೀಡಿದರು. ಇದನ್ನು ಹಲವು ಕೇರಳಿಗರು ಟ್ವಿಟರ್‌ನಲ್ಲಿ ಲೇವಡಿ ಮಾಡಿದ್ದಾರೆ.

ಕೇರಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಮುಖ್ಯಮಂತ್ರಿಯಾಗಲು ಸಿದ್ಧನಿದ್ದೇನೆ ಎಂದು ಶ್ರೀಧರನ್ ಅವರು ಹೇಳಿದ್ದರು.

ಅಸ್ಸಾಂ: ಎನ್‌ಡಿಎ ಸೀಟು ಹಂಚಿಕೆ ಪೂರ್ಣ

ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎಯ ಮಿತ್ರಪಕ್ಷಗಳಿಗೆ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಬಿಜೆಪಿ ಗುರುವಾರ ರಾತ್ರಿ ಪೂರ್ಣಗೊಳಿಸಿದೆ. ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಅಸ್ಸಾಂ ಮುಖ್ಯಮಂತ್ರಿ ಸರ್ಬಾನಂದ ಸೋನೊವಾಲ್ ಭಾಗಿಯಾಗಿದ್ದರು. ಅಸ್ಸಾಂನ 126 ಕ್ಷೇತ್ರಗಳಲ್ಲಿ, 92ರಲ್ಲಿ ಬಿಜೆಪಿ ಕಣಕ್ಕೆ ಇಳಿಯಲಿದೆ. 26 ಕ್ಷೇತ್ರಗಳಲ್ಲಿ ಅಸ್ಸಾಂ ಗಣ ಪರಿಷತ್ ಸ್ಪರ್ಧಿಸಲಿದೆ. ಎನ್‌ಡಿಎಯ ಮತ್ತೊಂದು ಮಿತ್ರಪಕ್ಷ ಯುಪಿಪಿಎಲ್ 8 ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಿವೆ. ಅಸ್ಸಾಂನಲ್ಲಿ ಮೊದಲ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳಿಗೆ 84 ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಈಗಾಗಲೇ ಅಂತಿಮಗೊಳಿಸಿದೆ. ಈ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ: ಅಸ್ಸಾಂ ಕಾಂಗ್ರೆಸ್

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಕಾಂಗ್ರೆಸ್ ನೇತೃತ್ವದ ಮಹಾಮೈತ್ರಿಕೂಟವನ್ನು ಅಧಿಕಾರಕ್ಕೆ ತಂದರೆ, ಸರ್ಕಾರಿ ನೌಕರಿಯಲ್ಲಿ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ಜಾರಿಗೆ ತರುತ್ತೇವೆ ಎಂದು ಕಾಂಗ್ರೆಸ್ ಹೇಳಿದೆ.

ಇಲ್ಲಿ ಗುರುವಾರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುಶ್ಮಿತಾ ದೇವ್ ಅವರು ಈ ಭರವಸೆ ನೀಡಿದ್ದಾರೆ. ಮಹಾಮೈತ್ರಿಕೂಟವು ಅಧಿಕಾರಕ್ಕೆ ಬಂದರೆ ಇಲ್ಲಿನ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಲಿದೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಮಾಡಲಿರುವ ಮೊದಲ ಕೆಲಸ, ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ಜಾರಿಗೆ ತರುವುದು ಎಂದು ಅವರು ಹೇಳಿದ್ದಾರೆ.

‘ಅಸ್ಸಾಂನ ಯುವಜನರು ಮತ್ತು ಮಹಿಳೆಯರಿಗೆ ಯಾವುದೇ ಅನುಕಂಪದ ನೆರವು ಬೇಕಿಲ್ಲ. ಬದಲಿಗೆ ಉದ್ಯೋಗಾವಕಾಶ ಬೇಕಿದೆ. ಉದ್ಯೋಗದ ಮೂಲಕ ರಾಜ್ಯದ ಆರ್ಥಿಕ ಬೆಳವಣಿಗೆಯಲ್ಲಿ ಹೆಗಲು ನೀಡಲು ಅಸ್ಸಾಂನ ಜನರು ಸಿದ್ಧವಾಗಿದ್ದಾರೆ. ಹೀಗಾಗಿ ಉದ್ಯೋಗಾವಕಾಶವನ್ನು ಹೆಚ್ಚಿಸುವ ಕೆಲಸವನ್ನು ಮಹಾಮೈತ್ರಿಕೂಟದ ಸರ್ಕಾರವು ಮಾಡಲಿದೆ’ ಎಂದು ಸುಶ್ಮಿತಾ ದೇವ್ ಅವರು ಭರವಸೆ ನೀಡಿದ್ದಾರೆ.

ಅಂಕೋಲಾ ತಾಲ್ಲೂಕಿನ ಕುಗ್ರಾಮ ವರೀಲಬೇಣ: ಈ ಊರಿಗಿಲ್ಲ ರಸ್ತೆ

ರೋಗಿಗೆ ಕುರ್ಚಿಯೇ ಆಂಬುಲೆನ್ಸ್!

• ಸದಾಶಿವ ಎಂ.ಎಸ್

ಪ್ರಜಾವಾಣಿ ವಿಶೇಷ

ಕಾರವಾರ: ಇಲ್ಲಿ ರೋಗಿಗೆ ಕುರ್ಚಿಯೇ ಆಂಬುಲೆನ್ಸ್, ಊರಿನಲ್ಲಿರುವ ಹಿರಿಯರೇ ತಕ್ಷಣದ ವೈದ್ಯರು. ಈ ಊರಿಗೆ ಸರಿಯಾದ ಸಂಪರ್ಕ ರಸ್ತೆಯಿಲ್ಲ, ಕಾಡುಮೇಡಿನ ಕೊರಕಲು ಹಾದಿ...ರೋಗಿಯನ್ನು ಕರೆದುಕೊಂಡು ಹೋಗುವವರ ಕಾಲು ಸ್ವಲ್ಪ ಜಾರಿದರೂ... ಅಪಾಯ!

ಅಂಕೋಲಾ ತಾಲ್ಲೂಕಿನ ಹಟ್ಟಿಕೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವರೀಲಬೇಣ ಎಂಬ ಕುಗ್ರಾಮದ ಜನರ ಜೀವನದ ಚಿತ್ರಣವಿದು.

ಗ್ರಾಮದ ನೂರಾ ಪೊಕ್ಕ ಗೌಡ (70) ಎಂಬುವವರು ಬುಧವಾರ ಪಾರ್ಶ್ವ ವಾಯುವಿಗೆ ತುತ್ತಾಗಿದ್ದರು. ಸಮೀಪದಲ್ಲಿ ಎಲ್ಲೂ ಚಿಕಿತ್ಸೆಯ ವ್ಯವಸ್ಥೆಯಿಲ್ಲ. ಹಾಗಾಗಿ ಅವರ ಸಂಬಂಧಿಕರು ಗುರುವಾರ, ಗಟ್ಟಿಯಾದ ಕೋಲಿಗೆ ಬೆತ್ತದ ಕುರ್ಚಿಯನ್ನು ಕಟ್ಟಿ ಅದರಲ್ಲಿ ಅವರನ್ನು ಕೂರಿಸಿದರು. ಬಳಿಕ ನಾಲ್ಕಾರು ಮಂದಿ ಸೇರಿ ಹೆಗಲ ಮೇಲೆ ಹೊತ್ತುಕೊಂಡು ಕಾಡುಮೇಡಿನ ದಾರಿಯಲ್ಲಿ ಸಾಗಿದರು. ಅತ್ಯಂತ ಜಾಗರೂಕತೆಯಿಂದ ಐದು ಕಿಲೋಮೀಟರ್ ಹೆಜ್ಜೆ ಹಾಕಿ ರಸ್ತೆಗೆ ತಲುಪಿದರು.

ತಾಲ್ಲೂಕು ಕೇಂದ್ರ ಅಂಕೋಲಾದಲ್ಲಿ ಆಂಬುಲೆನ್ಸ್ ಕೂಡ ಲಭ್ಯವಿರಲಿಲ್ಲ. ಖಾಸಗಿ ವಾಹನವನ್ನು ಬಾಡಿಗೆಗೆ ನಿಗದಿ ಮಾಡಿ ಮಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಅನಿವಾರ್ಯತೆಯನ್ನು ಎದುರಿಸಿದರು.

ತಾಲ್ಲೂಕು ಕೇಂದ್ರದಿಂದ 20 ಕಿ.ಮೀ ದೂರ: ಈ ಹಳ್ಳಿಯು ದಟ್ಟಾರಣ್ಯದಿಂದ ಸುತ್ತುವರಿದಿದ್ದು, ಬೆಟ್ಟದ ಮೇಲೆ ಸ್ವಂತ ಜಮೀನಿನಲ್ಲಿ 11 ಕುಟುಂಬಗಳು ವಾಸಿಸುತ್ತಿವೆ. ತಾಲ್ಲೂಕು ಕೇಂದ್ರದಿಂದ ಸುಮಾರು 20 ಕಿ.ಮೀ ಹಾಗೂ ಹಟ್ಟಿಕೇರಿಯಿಂದ 11 ಕಿ.ಮೀ ದೂರದಲ್ಲಿದೆ. ಆರು ಕಿ.ಮೀ ದೂರದವರೆಗೆ ಕೇವಲ ದ್ವಿಚಕ್ರ ವಾಹನಗಳು ಸಂಚರಿಸಲು ಸಾಧ್ಯ. ಅಲ್ಲಿಂದ ನಂತರ ಕಾಡಿನ ನಡುವೆ ನಡೆದುಕೊಂಡೇ ಸಾಗಬೇಕು.

ಗ್ರಾಮದಲ್ಲಿ ನಾಲ್ಕೈದು ಮಕ್ಕಳಿದ್ದು, ಅವರೆಲ್ಲ ಸಕಲಬೇಣ ಎಂಬಲ್ಲಿ ಸಂಬಂಧಿಕರ ಮನೆಗಳಲ್ಲಿ ಇದ್ದುಕೊಂಡು ಶಾಲೆಗಳಿಗೆ ಹೋಗುತ್ತಿದ್ದಾರೆ. ತಮ್ಮ ಗ್ರಾಮಕ್ಕೆ ಕನಿಷ್ಠ ದ್ವಿಚಕ್ರ ವಾಹನಗಳಾದರೂ ಬರುವ ವ್ಯವಸ್ಥೆಯಾದರೆ ಬಹಳ ಅನುಕೂಲವಾಗುತ್ತದೆ ಎಂಬುದು ಗ್ರಾಮಸ್ಥರ ಒತ್ತಾಯ.

‘ಸಂಪರ್ಕದಲ್ಲಿ ಇದ್ದೇವೆ’

‘ವರೀಲಬೇಣ ಪ್ರದೇಶವು ಮೀಸಲು ಅರಣ್ಯ ಪ್ರದೇಶ ನಡುವೆಯಿದೆ. ಅಲ್ಲಿನ ಗ್ರಾಮಸ್ಥರೊಂದಿಗೆ ಸಂಪರ್ಕದಲ್ಲಿದ್ದೇವೆ. ಗ್ರಾಮಕ್ಕೆ ಬಿಎಸ್‌ಎನ್‌ಎಲ್ ಮೊಬೈಲ್ ನೆಟ್‌ವರ್ಕ್ ಸಿಗುತ್ತದೆ. ಮನೆಗಳಿಗೆ ವಿದ್ಯುತ್ ಸಂಪರ್ಕವನ್ನೂ ನೀಡಲಾಗಿದೆ’ ಎಂದು ಹಟ್ಟಿಕೇರಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಲೀಲಾ ಆಗೇರ ಪ್ರಜಾವಾಣಿಗೆ ತಿಳಿಸಿದ್ದಾರೆ.



ಅಂಕೋಲಾ ತಾಲ್ಲೂಕಿನ ಹಟ್ಟಿಕೇರಿ ಗ್ರಾಮದ ವರೀಲಬೇಣದಿಂದ ರೋಗಿಯೊಬ್ಬರನ್ನು ಕುರ್ಚಿಯಲ್ಲಿ ಕೂರಿಸಿ ಗ್ರಾಮಸ್ಥರು ಹೆಗಲ ಮೇಲೆ ಹೊತ್ತುಕೊಂಡು ಸಾಗುತ್ತಿರುವುದು

ಪ್ರಭಾವಿಗಳ ವಿರುದ್ಧ ದಿನೇಶ್ ಹೋರಾಟ



ದಿನೇಶ್ ಕಲ್ಲಹಳ್ಳಿ

ರಾಮನಗರ: ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ ದೂರು ದಾಖಲಿಸಿ ಅವರ ರಾಜೀನಾಮೆಗೆ ಕಾರಣರಾದ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಕನಕಪುರ ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮದವರು.

ನಾಗರಿಕ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷರೂ ಆಗಿರುವ ದಿನೇಶ್ ಈ ಹಿಂದೆಯೂ ಇಂತಹ ಹಲವು ಹೋರಾಟಗಳಲ್ಲಿ ಭಾಗಿಯಾಗಿದ್ದಾರೆ. ಹಲವು ಪ್ರಭಾವಿ ವ್ಯಕ್ತಿಗಳ ವಿರುದ್ಧ ಕಾನೂನು ಸಮರ ನಡೆಸುತ್ತಿದ್ದಾರೆ. ತೋಟಗಾರಿಕೆ ಸಚಿವ ನಾರಾಯಣ ಗೌಡ ತಮ್ಮ ಚುನಾವಣಾ ಅಫಿಡವಿಟ್‌ಗಳಲ್ಲಿ ಆಸ್ತಿ ವಿವರ ತಪ್ಪಾಗಿ ನೀಡಿದ್ದು, ಅವರ ವಿರುದ್ಧ ಲೋಕಾಯುಕ್ತ ತನಿಖೆ ನಡೆಸಬೇಕು ಎಂದು ಕೋರಿ ದಿನೇಶ್ ಈಚೆಗೆ ರಾಜ್ಯಪಾಲರಿಗೆ ದೂರು ನೀಡಿದ್ದರು. ಇದಕ್ಕೆ ರಾಜ್ಯಪಾಲರು ಅನುಮತಿಯನ್ನೂ ನೀಡಿದ್ದರು. ಅಕ್ರಮ ಗಣಿಗಾರಿಕೆ ಆರೋಪದ ಮೇಲೆ ಈ ಹಿಂದೆ ಡಿ.ಕೆ. ಶಿವಕುಮಾರ್ ವಿರುದ್ಧವೂ ದಿನೇಶ್ ಹೋರಾಟ ನಡೆಸಿದ್ದರು.

ಪತ್ರಿಕೋದ್ಯಮ ಪದವೀಧರರಾಗಿರುವ ಅವರು ಕೆಲ ಕಾಲ ವಾರಪತ್ರಿಕೆಗಳ ವರದಿಗಾರರಾಗಿ ಕೆಲಸ ಮಾಡಿದ್ದರು.

ಜಾರಕಿಹೊಳಿ ಸಿ.ಡಿ ಪ್ರಕರಣ: ವಿಚಾರಣೆಗೆ ಗೈರಾದ ದೂರುದಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ ಪ್ರಕರಣದ ವಿಚಾರಣೆಗೆ ಗುರುವಾರ ಗೈರಾದ ದೂರುದಾರ ದಿನೇಶ್ ಕಲ್ಲಹಳ್ಳಿ, ಭದ್ರತೆ ಕಾರಣ ನೀಡಿ ಕಬ್ಬನ್ ಪಾರ್ಕ್ ಠಾಣೆ ಇನ್‌ಸ್ಪೆಕ್ಟರ್‌ಗೆ ಪತ್ರ ಬರೆದಿದ್ದಾರೆ.

ಮಾರ್ಚ್ 2ರಂದು ಠಾಣೆಗೆ ಬಂದು ದೂರು ನೀಡಿದ್ದ ದಿನೇಶ್, ‘ರಮೇಶ ಜಾರಕಿಹೊಳಿ ಕೆಲಸದ ಆಮಿಷವೊಡ್ಡಿ ಯುವತಿಯನ್ನು ಲೈಂಗಿಕವಾಗಿ ಬಳಸಿಕೊಂಡು ದೌರ್ಜನ್ಯ ಎಸಗಿದ್ದಾರೆ. ಯುವತಿ ಹಾಗೂ ಆಕೆ ಕುಟುಂಬಕ್ಕೆ ಜೀವ ಬೆದರಿಕೆ ಹಾಕಿದ್ದಾರೆ’ ಎಂದು ಆರೋಪಿಸಿದ್ದರು.

ದೂರು ಸ್ವೀಕರಿಸಿದ್ದ ಪೊಲೀಸರು, ಪ್ರಕರಣದ ಬಗ್ಗೆ ಮತ್ತಷ್ಟು ಮಾಹಿತಿ ಕಲೆ ಹಾಕುವುದಕ್ಕಾಗಿ ದಿನೇಶ್ ಅವರಿಗೆ ನೋಟಿಸ್ ನೀಡಿದ್ದರು. ಅದಕ್ಕೆ ಪತ್ರದ ಮೂಲಕ ಉತ್ತರ ನೀಡಿರುವ ದಿನೇಶ್, ‘ನಾನು ವಿಚಾರಣೆಗೆ ಗೈರಾಗುತ್ತಿದ್ದೇನೆ’ ಎಂದು ಹೇಳಿದ್ದಾರೆ.

‘ಮಾ. 2ರಂದೇ ದೂರು ನೀಡಿದ್ದೇನೆ. ಅದರ ಹೆಚ್ಚಿನ ವಿಚಾರಣೆಗೆ ಠಾಣೆಗೆ ಬರುವಂತೆ ನೋಟಿಸ್ ನೀಡಿದ್ದೀರಾ. ಆದರೆ, ನನಗೆ ಈಗ ಹಲವರಿಂದ ಜೀವ ಬೆದರಿಕೆ ಕರೆಗಳು ಬರುತ್ತಿವೆ. ಈ ಬಗ್ಗೆ ಈಗಾಗಲೇ ರಾಮನಗರ ಜಿಲ್ಲಾ ಎಸ್ಪಿಗೆ ದೂರು ನೀಡಿದ್ದೇನೆ. ನನಗೆ ಸೂಕ್ತ ಭದ್ರತೆ ಇಲ್ಲದ ಕಾರಣದಿಂದಾಗಿ ಗುರುವಾರ ವಿಚಾರಣೆಗೆ ಬರಲು ಆಗುವುದಿಲ್ಲ’ ಎಂದೂ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ‘ನನಗೆ ಸೂಕ್ತ ಭದ್ರತೆ ನೀಡಿದರೆ, ಮಾ. 9ರಂದು ತಮ್ಮ ಎದುರು ವಿಚಾರಣೆಗೆ ಹಾಜರಾಗುತ್ತೇನೆ’ ಎಂದೂ ಅವರು ತಿಳಿಸಿದ್ದಾರೆ.

ಸಿ.ಡಿ ಮೂಲ ಪತ್ತೆಗೆ ತನಿಖೆ

ದಿನೇಶ್ ಅವರಿಗೆ ಸಿ.ಡಿ ಕೊಟ್ಟವರು ಯಾರು ಎಂಬುದರ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ. ‘ಯುವತಿ ಸಂಬಂಧಿ ಎನ್ನಲಾದ ವ್ಯಕ್ತಿಯೊಬ್ಬರು, ಮೆಜೆಸ್ಟಿಕ್ ಬಳಿಯ ರಾಮಕೃಷ್ಣ ಹೋಟೆಲ್‌ನಲ್ಲಿ ದಿನೇಶ್ ಅವರನ್ನು ಭೇಟಿಯಾಗಿದ್ದರು. ‘ಯುವತಿ ಪರ ಹೋರಾಟ ಮಾಡಿ. ಅವರಿಗೆ ನ್ಯಾಯ ಕೊಡಿಸಿ’ ಎಂದು ಅವರೇ ಸಿ.ಡಿ ಕೊಟ್ಟಿದ್ದರು ಎಂಬ ಮಾಹಿತಿ ಸಿಕ್ಕಿದೆ. ಹೋಟೆಲ್‌ನಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದ ಡಿವಿಆರ್ ಪಡೆದು, ದೃಶ್ಯಗಳ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದಿನೇಶ್ ಅವರ ದೂರಿನಲ್ಲಿ ಸ್ಪಷ್ಟತೆ ಇಲ್ಲ. ಯುವತಿ ವಿಳಾಸ ಹಾಗೂ ಆಕೆ ಯಾರು ಎಂಬುದನ್ನೂ ತಿಳಿಸಿಲ್ಲ. ಹೀಗಾಗಿ, ಯುವತಿ ಪತ್ತೆಯೂ ಕಷ್ಟವಾಗುತ್ತಿದೆ. ಯುವತಿಗಾಗಿ ಬೆಂಗಳೂರು, ಹೊರ ನಗರಗಳಲ್ಲೂ ಹುಡುಕಾಟ ನಡೆಸಲಾಗುತ್ತಿದೆ. ವಿಡಿಯೊದಲ್ಲಿರುವ ಭಾಷೆ ಗಮನಿಸಿದರೆ ಯುವತಿಯದ್ದು ಕಲಬುರ್ಗಿ ಇರಬಹುದೆಂಬ ಅನುಮಾನವಿದೆ’ ಎಂದೂ ಮೂಲಗಳು ತಿಳಿಸಿವೆ.

‘ಎಫ್‌ಐಆರ್ ಸದ್ಯಕ್ಕಿಲ್ಲ’: ‘ದಿನೇಶ್ ಅವರ ದೂರಿನಲ್ಲಿ ಸಾಕಷ್ಟು ಗೊಂದಲಗಳು ಇವೆ. ಅದಕ್ಕೆ ಸಂಬಂಧಪಟ್ಟ ಪುರಾವೆಗಳು ಕಾನೂನುಬದ್ಧವಾಗಿಲ್ಲ. ಹೀಗಾಗಿ, ಇದುವರೆಗೂ ಎಫ್‌ಐಆರ್ ದಾಖಲಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಂತ್ರಸ್ತೆ, ಆಕೆಯ ಕುಟುಂಬದವರು ಹಾಗೂ ಪ್ರತ್ಯಕ್ಷದರ್ಶಿಗಳ ಹೇಳಿಕೆ ಬೇಕು. ಈ ಬಗ್ಗೆ ನ್ಯಾಯಾಲಯದ ಹಲವು ತೀರ್ಪುಗಳಿವೆ. ಹೇಳಿಕೆ ಸಿಕ್ಕ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದೂ ಮೂಲಗಳು ತಿಳಿಸಿವೆ.

ಕೊರೊನಾ ತಂದಿಟ್ಟ ಸಂಕಷ್ಟ: ಮರದಡಿ ವಾಸ್ತವ್ಯ ಹೂಡಿದ್ದ ಮಹಿಳೆಗೆ ನೆರವಿನ ಹಸ್ತ

ಬಯಲ ಬದುಕಿಗೆ ಊರವರಿಂದ ಸೂರು

• ರೆಜಿತ್ ಕುಮಾರ್ ಗುಹ್ಯ

ಸಿದ್ದಾಪುರ (ಕೊಡಗು): ಅದು ಕೋವಿಡ್ ಲಾಕ್‌ಡೌನ್ ಸಂದರ್ಭ. ಪೊನ್ನಂಪೇಟೆಯ ಮನೆಯೊಂದರಲ್ಲಿ ಬಾಡಿಗೆ ಇದ್ದು, ಗೋಣಿಕೊಪ್ಪಲಿನ ಅಂಗಡಿಯೊಂದರಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಸುನೀತಾ ಕೆಲಸ ಕಳೆದುಕೊಂಡರು. ಮನೆಯ ಬಾಡಿಗೆ ಕಟ್ಟಲಾಗದೇ, ಇಬ್ಬರು ಮಕ್ಕಳನ್ನು ಓದಿಸಲಾಗದೇ ಪೇಟೆಯನ್ನು ಬಿಟ್ಟು ಬಂದರು.

ತಮ್ಮದು ಎಂಬ ಮನೆ ಇಲ್ಲದ ಊರಿಗೆ ಬಂದು, ಮರದಡಿ ವಾಸ್ತವ್ಯ ಹೂಡಿದ್ದ ಅವರಿಗೆ, ಇದೀಗ ತಾತ್ಕಾಲಿಕ ಸೂರೊಂದನ್ನು ನಿರ್ಮಿಸಿಕೊಡುವ ಮೂಲಕ ಊರವರು ನೆರವಾಗಿದ್ದಾರೆ.

ಅವರ ಪತಿ ಇಲ್ಲ. ಹೆತ್ತವರೂ ಇಲ್ಲ. ತಾನು ಓದದಿದ್ದರೇನಂತೆ? ಮಕ್ಕಳಿಗಾದರೂ ಒಳ್ಳೆಯ ಶಿಕ್ಷಣ ಕೊಡಿಸಬೇಕು ಎಂಬ ಛಲದಿಂದ ಜೀವನ ಸಾಗಿಸುತ್ತಿದ್ದ ಸುನೀತಾಗೆ, ಕೋವಿಡ್ ತಂದಿಟ್ಟ ಸಂಕಷ್ಟದ ಸಂದರ್ಭದಲ್ಲಿ ದಿಕ್ಕೇ ತೋಚದಂತಾಯಿತು.

ಪ್ರತಿದಿನದ ಖರ್ಚಿನೊಂದಿಗೆ, ಹಾಸನದಲ್ಲಿ ಎಂಜಿನಿಯರಿಂಗ್ ಮಾಡುತ್ತಿದ್ದ ಮಗಳು, ಪದವಿ ಓದುತ್ತಿರುವ ಮಗನ ಕಾಲೇಜಿನ ಖರ್ಚು ಇತ್ತು. ಲಾಕ್‌ಡೌನ್ ವೇಳೆ ಕೆಲಸವಿಲ್ಲದೇ ಹೋದಾಗ, ಸಂಘ ಸಂಸ್ಥೆಯಿಂದ ಹಾಗೂ ಬಡ್ಡಿಗೆ ಹಣ ಪಡೆದು ಜೀವನ ಸಾಗಿಸಿದರು. ಅವರಿಗೂ ಕೋವಿಡ್ ದೃಢಪಟ್ಟಾಗ, ತಿಂಗಳ ಕಾಲ ಚಿಕಿತ್ಸೆ ಪಡೆದು ಗುಣವಾಗಿದ್ದರು. ಈ ನಡುವೆ, ಹಲವು ತಿಂಗಳುಗಳ ಬಾಡಿಗೆ ಬಾಕಿ ಇದ್ದ ಕಾರಣ ಮನೆ ಖಾಲಿ ಮಾಡುವಂತೆ ಮಾಲೀಕರು ತಿಳಿಸಿದ್ದರು.

ಕೊನೆಗೆ ಮಾಲ್ದಾರೆಯ ತಟ್ಟಳ್ಳಿ ಹಾಡಿಯಲ್ಲಿನ ತಮ್ಮ ತಂದೆಗೆ ಸೇರಿದ ಜಾಗಕ್ಕೆ ಮಕ್ಕಳೊಂದಿಗೆ ಬಂದ ಸುನೀತಾ, ಮರದ ಅಡಿಯಲ್ಲೇ ಜೀವನ ಸಾಗಿಸಲು ಮುಂದಾದರು. ತಮ್ಮ ಸಮಸ್ಯೆಯನ್ನು ವಿವರಿಸಿ, ಅವರು ಕಣ್ಣೀರಿಟ್ಟಿದ್ದ ವಿಡಿಯೊಯೊಂದನ್ನು ಗಮನಿಸಿದ ಸ್ಥಳೀಯ ಜನಪರ ಸಂಘದ ಸದಸ್ಯರು ಹಾಗೂ ಸ್ಥಳೀಯ ಸಂಘಗಳ ಯುವಕರು ಸ್ವತಃ ಅಲ್ಲಿಗೆ ತೆರಳಿ, ತಾವೇ ನಿಂತು ಶೆಡ್ ನಿರ್ಮಾಣ ಮಾಡಿಕೊಟ್ಟಿದ್ದಾರೆ. ಸದ್ಯಕ್ಕೆ ಸುನೀತಾ ಹಾಗೂ ಅವರ ಮಗ ಶೆಡ್‌ನಲ್ಲಿ ದಿನ ದೂಡುತ್ತಿದ್ದು, ಮತ್ತಷ್ಟು ಸಹಾಯದ ನಿರೀಕ್ಷೆಯಲ್ಲಿ ಇದ್ದಾರೆ.



ಶೆಡ್ ನಿರ್ಮಿಸಿಕೊಟ್ಟ ಮಾಲ್ದಾರೆ ಜನಪರ ಸಂಘದ ಯುವಕರು

> **ಮಹಿಳೆಯ ಸಮಸ್ಯೆ ಗಮನಕ್ಕೆ ಬಂದಿದೆ. ಶುಕ್ರವಾರ ಬೆಳಿಗ್ಗೆಯೇ ಸ್ಥಳಕ್ಕೆ ಭೇಟಿ ನೀಡುತ್ತಿದ್ದು, ಸರ್ಕಾರದ ಕಡೆಯಿಂದ ಸಿಗುವ ಸೌಕರ್ಯಗಳನ್ನು ಒದಗಿಸಿಕೊಡಲಾಗುವುದು.**
>
> **ಡಾ.ಯೋಗಾನಂದ್,** ತಹಶೀಲ್ದಾರ್, ವಿರಾಜಪೇಟೆ ತಾಲ್ಲೂಕು



ಸುಭಾಷಿತ

ಭವಿಷ್ಯದ ಬಗ್ಗೆ ಚಿಂತಿಸುತ್ತಾ ನಿಮಗೆ ನೀವೇ ತೊಂದರೆ ಕೊಟ್ಟುಕೊಳ್ಳುವುದೇಕೆ? ವರ್ತಮಾನದ ಬಗ್ಗೆ ಕಾಳಜಿ ವಹಿಸಿ, ಭವಿಷ್ಯವು ತನ್ನಿಂತಾನೇ ತನ್ನ ಕಾಳಜಿಯನ್ನು ಮಾಡಿಕೊಳ್ಳುತ್ತದೆ.

-ರಮಣ ಮಹರ್ಷಿ

ಅತ್ಯಾಚಾರ ಪ್ರಕರಣ ತಪ್ಪು ಸಂದೇಶಕ್ಕೆ ಅವಕಾಶ ಬೇಡ

ದೇಶದ ಅತ್ಯುನ್ನತ ಹುದ್ದೆಗಳನ್ನು ಹೊಂದಿರುವ ವ್ಯಕ್ತಿಗಳಿಂದ ಸಮಾಜವು ಆದರ್ಶದ, ಅನುಕರಣೀಯ ನಡೆಯನ್ನೇ ಬಯಸುತ್ತದೆ. ಆ ರೀತಿಯ ಬಯಕೆ ಸಹಜವೂ ಹೌದು, ದೇಶ–ಕಾಲಗಳನ್ನು ಮೀರಿದ್ದೂ ಹೌದು. ಉನ್ನತ ಹುದ್ದೆಗಳನ್ನು ಹೊಂದಿರುವವರು ಬಾಯಿತಪ್ಪಿ ಹಗುರವಾದ ಮಾತುಗಳನ್ನು ಆಡಿದರೂ ಅದು ರವಾನಿಸುವುದು ಕೆಟ್ಟ ಸಂದೇಶವನ್ನೇ. ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ, ಮಹಾರಾಷ್ಟ್ರ ರಾಜ್ಯದ ಸರ್ಕಾರಿ ನೌಕರನೊಬ್ಬ ಸಲ್ಲಿಸಿರುವ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ದೇಶದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಶರದ್ ಎ. ಬೊಬಡೆ ಅವರು ಆತನನ್ನು ಉದ್ದೇಶಿಸಿ ಕೇಳಿದ ಪ್ರಶ್ನೆಗಳು ತೀರಾ ಕಸಿವಿಸಿ ಉಂಟುಮಾಡುವಂಥವು. ಸಿಜೆಐ ಈ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ, ಸಂತ್ರಸ್ತೆಯನ್ನು ಆರೋಪಿ ಮದುವೆ ಆಗುತ್ತಾನಾ ಎಂದು ಅವನ ಪರ ವಕೀಲರಲ್ಲಿ ಕೇಳಿದ್ದಾರೆ ಎಂದು ವರದಿಯಾಗಿದೆ. ಆರೋಪಿಗೆ ಈಗಾಗಲೇ ಮದುವೆ ಆಗಿರುವ ಕಾರಣ, ಸಂತ್ರಸ್ತೆಯನ್ನು ಮದುವೆ ಆಗಲು ಸಾಧ್ಯವಿಲ್ಲ ಎಂದು ವಕೀಲರು ನ್ಯಾಯಪೀಠಕ್ಕೆ ಉತ್ತರಿಸಿದ್ದಾರೆ ಎಂದೂ ವರದಿಯಾಗಿದೆ. ನ್ಯಾಯಪೀಠ ವಿಚಾರಣೆ ನಡೆಸುತ್ತಿದ್ದುದು, ನಿರೀಕ್ಷಣಾ ಜಾಮೀನು ರದ್ದುಗೊಳಿಸಿದ್ದನ್ನು ಪ್ರಶ್ನಿಸಿ ಆರೋಪಿ ಸಲ್ಲಿಸಿದ ಅರ್ಜಿಯನ್ನು. ವಿಚಾರಣೆ ಸಂದರ್ಭದಲ್ಲಿ, ಮದುವೆಯ ಬಗ್ಗೆ ಪ್ರಸ್ತಾಪ ಬಂದಿದೆ. ಆದರೆ, ಅತ್ಯಾಚಾರ ಎಸಗಿದ ವ್ಯಕ್ತಿಯು ಸಂತ್ರಸ್ತೆಯನ್ನು ಮದುವೆಯಾದರೂ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶ ಇಲ್ಲ. ಅತ್ಯಾಚಾರ ಎಂಬುದು ಕ್ರಿಮಿನಲ್ ಅಪರಾಧ. ಅತ್ಯಾಚಾರ ಸೇರಿದಂತೆ ಯಾವುದೇ ಕ್ರಿಮಿನಲ್ ಅಪರಾಧವನ್ನು ತನ್ನ ವಿರುದ್ಧ ಎಸಗಿದ ಕೃತ್ಯವೆಂದೇ ಪ್ರಭುತ್ವ ಭಾವಿಸುತ್ತದೆ. ಹಾಗಾಗಿಯೇ, ಅದು ತನ್ನ ಭಾಗವೇ ಆಗಿರುವ ಪೊಲೀಸ್, ಪ್ರಾಸಿಕ್ಯೂಷನ್ ನೆರವು ಪಡೆದು ತಪ್ಪು ಮಾಡಿದವನಿಗೆ ಸೂಕ್ತ ಶಿಕ್ಷೆ ವಿಧಿಸುವಂತೆ ನ್ಯಾಯಾಂಗದ ಮೊರೆ ಹೋಗುತ್ತದೆ. ಒಪ್ಪಿತ ವ್ಯವಸ್ಥೆ ಹೀಗಿರುವಾಗ, ‘ಸಂತ್ರಸ್ತೆಯನ್ನು ಮದುವೆ ಆಗುತ್ತೀಯಾ’ ಎಂಬ ಪ್ರಶ್ನೆಯು ತಪ್ಪು ಸಂದೇಶವನ್ನು ರವಾನಿಸುತ್ತದೆ.



‘ಸಂತ್ರಸ್ತೆಯನ್ನು ಮದುವೆ ಆಗುತ್ತೀಯಾ’ ಎಂಬ ಈ ಪ್ರಶ್ನೆಯು ತಪ್ಪು ಸಂದೇಶವನ್ನು ರವಾನಿಸುತ್ತದೆ

ಸಿಜೆಐ ಬೊಬಡೆ ಅವರು ಆಡಿರುವ ಮಾತಿಗೆ ಪ್ರತಿರೋಧ ವ್ಯಕ್ತವಾಗಿದೆ. ಇದು ನಿರೀಕ್ಷಿತವೂ ಹೌದು. ಇಂತಹ ಪ್ರತಿರೋಧಗಳಿಗೆ ಕಾರಣಗಳೂ ಇವೆ. ಮಹಿಳೆಯರ ಹಕ್ಕುಗಳನ್ನು ರಕ್ಷಿಸುವ ವಿಚಾರದಲ್ಲಿ ಭಾರತದ ಸುಪ್ರೀಂ ಕೋರ್ಟ್‌ಗೆ ದೊಡ್ಡ ಹೆಸರಿದೆ. ವಿಶಾಖ ಮಾರ್ಗಸೂಚಿಗಳನ್ನು ರೂಪಿಸಿ, ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಹಕ್ಕುಗಳ ರಕ್ಷಣೆ ಆಗುವಂತೆ ನೋಡಿಕೊಂಡ ದೊಡ್ಡ ಸಂಸ್ಥೆ ಭಾರತದ ಸುಪ್ರೀಂ ಕೋರ್ಟ್ ಎಂಬುದನ್ನು ಮರೆಯುವಂತಿಲ್ಲ. ಮಹಿಳೆಯರ ಹಕ್ಕುಗಳ ರಕ್ಷಣೆ ಆಗಬೇಕು, ಸಮಾಜದಲ್ಲಿ ಅವರಿಗೆ ಸಮಾನ ಅವಕಾಶ ಸಿಗಬೇಕು, ಅವರು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಎರಡನೇ ದರ್ಜೆಯ ಪ್ರಜೆಗಳಂತೆ ಆಗಬಾರದು ಎಂಬ ಸದಾಶಯದ ಮಾತುಗಳನ್ನು ಸುಪ್ರೀಂ ಕೋರ್ಟ್ ಕಾಲಕಾಲಕ್ಕೆ ಆಡಿದ್ದಿದೆ. ಈ ಕಾರಣಗಳಿಂದಾಗಿ, ಅತ್ಯಾಚಾರ ಸಂತ್ರಸ್ತೆಯನ್ನು ಮದುವೆ ಆಗಬಹುದೇ ಎಂಬ ಪ್ರಶ್ನೆಯನ್ನು ಅತ್ಯಾಚಾರ ಎಸಗಿದ ಆರೋಪ ಹೊತ್ತಿರುವವನಲ್ಲಿ ಕೇಳುವ ಪ್ರಸಂಗವನ್ನು ಜೀರ್ಣಿಸಿಕೊಳ್ಳುವುದು ಸಮಾಜದ ಪಾಲಿಗೆ ಕಷ್ಟದ್ದಾಗುತ್ತದೆ. ಅತ್ಯಾಚಾರ ಎಂಬುದು ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗೆ, ಆರೋಪಿ ಹಾಗೂ ಸಂತ್ರಸ್ತ ವ್ಯಕ್ತಿಯ ನಡುವೆ ರಾಜಿ ಸಂಧಾನದ ಮೂಲಕ ಇತ್ಯರ್ಥ ಮಾಡಿಕೊಳ್ಳಬಹುದಾದ ಅಪರಾಧ ಅಲ್ಲ. ಅದು ಕಾನೂನು ಪ್ರಕ್ರಿಯೆ ಮೂಲಕವೇ ತಾರ್ಕಿಕ ಅಂತ್ಯ ಕಾಣಬೇಕಾದ ಅಪರಾಧ. ಶಿಂಭು ಮತ್ತು ಹರಿಯಾಣ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠವೊಂದು, ‘ಅತ್ಯಾಚಾರ ಎಂಬುದು ಇಡೀ ಸಮಾಜದ ವಿರುದ್ಧ ಎಸಗುವ ಅಪರಾಧ’ ಎಂದು ಬಣ್ಣಿಸಿದೆ. ಅಷ್ಟೇ ಅಲ್ಲದೆ, ದೂರುದಾರರು–ಆರೋಪಿಗಳು ಕುಳಿತು ರಾಜಿಯ ಮೂಲಕ ಬಗೆಹರಿಸಿಕೊಳ್ಳಬಹುದಾದ ಅಪರಾಧಗಳ ವ್ಯಾಪ್ತಿಗೆ ಕೂಡ ಇದು ಬರುವುದಿಲ್ಲ ಎಂಬುದನ್ನು ಅದೇ ಪ್ರಕರಣದ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ. ಅತ್ಯಾಚಾರ ಎಸಗಿದವನ ಜೊತೆಯಲ್ಲೇ ಸಂತ್ರಸ್ತೆ ಮದುವೆ ಆಗುವುದು ಅಂದರೆ, ಆಕೆ ಮತ್ತೊಮ್ಮೆ ಕ್ರೌರ್ಯಕ್ಕೆ ತುತ್ತಾದಂತೆ. ಇಂಥದ್ದಕ್ಕೆಲ್ಲ ಅವಕಾಶ ಕಲ್ಪಿಸಬಾರದು.

ದಿನದ ಟ್ವೀಟ್

ಸುರಕ್ಷತೆಗೆ ಇರಲಿ ಕಾಳಜಿ



ರಾಷ್ಟ್ರೀಯ ಸುರಕ್ಷತಾ ದಿನಾಚರಣೆಯ ಈ ಸಂದರ್ಭದಲ್ಲಿ, ನಮ್ಮನ್ನು ನಾವು ಸಂರಕ್ಷಿಸಿಕೊಳ್ಳುವ ಬಗ್ಗೆ ಯೋಚಿಸಬೇಕಾಗಿದೆ. ಅದಕ್ಕಾಗಿ, ಸುರಕ್ಷತಾ ನಿಯಮ ಪಾಲನೆಯ ಸಂಸ್ಕಾರ ರೂಢಿಸಿಕೊಳ್ಳೋಣ ಮತ್ತು ಅಪಘಾತವನ್ನು ವೈಜ್ಞಾನಿಕವಾಗಿ ತಡೆಗಟ್ಟುವ ದಿಸೆಯಲ್ಲಿ ಜಾಗೃತಿ ಮೂಡಿಸೋಣ. ಅಮೂಲ್ಯವಾದ ಜೀವಗಳನ್ನು ರಕ್ಷಿಸಲು ಮನೆಗಳು, ಕಚೇರಿಗಳು, ಕೆಲಸದ ಸ್ಥಳಗಳು ಹಾಗೂ ರಸ್ತೆಗಳಲ್ಲಿ ಆರೋಗ್ಯ ಮತ್ತು ಸುರಕ್ಷತೆಗಾಗಿ ಇರುವ ಶಿಷ್ಟಾಚಾರಗಳನ್ನು ಪಾಲಿಸುವಂತೆ ಎಲ್ಲರನ್ನೂ ಒತ್ತಾಯಿಸೋಣ.

ನವೀನ್ ಪಟ್ನಾಯಕ್, ಒಡಿಶಾ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಮಂಗಳವಾರ, 5-3-1996

- **ಹೊಸ ತೆರಿಗೆ ಇಲ್ಲದ ರಾಜ್ಯ ಬಜೆಟ್: 132 ಕೋಟಿ ಖೋತಾ**

ಬೆಂಗಳೂರು, ಮಾರ್ಚ್ 4– ವಿದ್ಯಾವಂತ ಗ್ರಾಮೀಣ ಬಡ ಯುವಕರಿಗೆ ಸಬ್ಸಿಡಿ ಸಹಿತ ಸಾಲದ ನೆರವು, ಗಂಡು– ಹೆಣ್ಣು ತಾರತಮ್ಯ ನಿವಾರಣೆಗೆ ‘ನಮ್ಮ ಮಗಳು ನಮ್ಮ ಶಕ್ತಿ’ ಯೋಜನೆ, ಅಂಗವಿಕಲರಿಗೆ 5,000 ಟ್ರೈಸಿಕಲ್‌ಗಳು, ಅರವತ್ತೈದು ದಾಟಿ ಸ್ವಯಂ ಉದ್ಯೋಗ ಹಿಡಿದ ಹಿರಿಯರಿಗೆ ವೃತ್ತಿ ತೆರಿಗೆ ಮನ್ನಾ, ಅರಣ್ಯ ಮಾಹಿತಿಗಾಗಿ ‘ವನ ವಿಜ್ಞಾನ ಕೇಂದ್ರ’... ಇತರ ಹತ್ತು ಹಲವು ನೂತನ ಕಾರ್ಯಕ್ರಮಗಳ 1996–97ನೇ ಸಾಲಿನ, ಹೊಸ ತೆರಿಗೆ ಇಲ್ಲದ ಬಜೆಟ್ ಅನ್ನು ಹಣಕಾಸು ಸಚಿವ ಸಿದ್ದರಾಮಯ್ಯ ಅವರು ಇಂದು ವಿಧಾನಸಭೆಯಲ್ಲಿ ಮಂಡಿಸಿದರು.

ಲೋಕಸಭಾ ಚುನಾವಣೆಯ ಮೇಲೆ ಕಣ್ಣಿಟ್ಟು ಜನಸಾಮಾನ್ಯರ ಜೇಬಿಗೆ ಹೆಚ್ಚಿಗೆ ಕತ್ತರಿ ಆಡಿಸದೆ, ಇರುವ ತೆರಿಗೆಗಳನ್ನೇ ಬಹುತೇಕ ಹಗುರಗೊಳಿಸಿ, ತೆರಿಗೆ ಹೆಚ್ಚಳಕ್ಕೆ ಅಲ್ಲಿ–ಇಲ್ಲಿ ಕೈಯಾಡಿಸಿ 132.21 ಕೋಟಿ ರೂಪಾಯಿಗಳ ಖೋತಾ ಬಜೆಟ್ ಅನ್ನು ಅವರು ಬಿಡಿಸಿಟ್ಟರು.

- **ಕನ್ನಡ ಚಿತ್ರಕ್ಕೆ ಪೂರ್ಣ ತೆರಿಗೆ ವಿನಾಯಿತಿ**

ಬೆಂಗಳೂರು, ಮಾರ್ಚ್ 4– ಕನ್ನಡ ಚಲನಚಿತ್ರಗಳಿಗೆ ಮನರಂಜನಾ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ನೀಡುವ ಮತ್ತು ಅಶ್ಲೀಲ, ದ್ವಂದ್ವಾರ್ಥ, ಹಿಂಸೆಯನ್ನು ವೈಭವೀಕರಿಸುವ ಚಿತ್ರಗಳಿಗೆ ಸಹಾಯಧನವನ್ನು ಸ್ಥಗಿತಗೊಳಿಸುವ ಮಹತ್ವದ ನಿರ್ಧಾರವನ್ನು ಹಣಕಾಸು ಸಚಿವ ಸಿದ್ದರಾಮಯ್ಯ ಇಂದು ಪ್ರಕಟಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 5-3-1971

- **ರಾಜ್ಯದ 13 ಲೋಕಸಭಾ ಕ್ಷೇತ್ರಗಳಲ್ಲಿ ಶೇ 50ರಿಂದ 60ರಷ್ಟು ಮತದಾನ**

ಬೆಂಗಳೂರು, ಮಾರ್ಚ್ 4– ರಾಜ್ಯದ ಹದಿಮೂರು ಲೋಕಸಭಾ ಕ್ಷೇತ್ರಗಳಲ್ಲಿ ಇಂದು ಮತದಾನ ನಡೆದು ಶೇಕಡ 50ರಿಂದ 60ರಷ್ಟು ಮತದಾರರು ಮತ ಚಲಾಯಿಸಿರುವುದಾಗಿ ವರದಿಗಳು ಬಂದಿವೆ.

ಮತದಾನ ಎಲ್ಲ ಕಡೆಯೂ ಶಾಂತ ರೀತಿಯಿಂದ ನಡೆಯಿತೆಂದು ರಾಜ್ಯದ ಚುನಾವಣಾಧಿಕಾರಿ ‘ಪ್ರಜಾವಾಣಿ’ಗೆ ತಿಳಿಸಿದರು.

- **ನಗರದಲ್ಲಿ ಪ್ರಚಾರದ ಬಿಸಿ ಏರಿಕೆ**

ಬೆಂಗಳೂರು, ಮಾರ್ಚ್ 4– ಬಹಿರಂಗ ಪ್ರಚಾರ ನಿಲ್ಲಲು ಇನ್ನು ಒಂದು ದಿನವಿರುವ ಮುನ್ನ ಬೆಂಗಳೂರು ಲೋಕಸಭೆ ಕ್ಷೇತ್ರದಲ್ಲಿ ಪ್ರಚಾರದ ಬಿಸಿ ಏರಿತು.

ಧ್ವನಿವರ್ಧಕ ಯಂತ್ರಗಳ ಮೂಲಕ ಮತದಾರರಿಗೆ ಮನವಿ, ಅಭ್ಯರ್ಥಿಗಳ ಪರ ಮೆರವಣಿಗೆಗಳು ನಡೆದವು.

ಮಧ್ಯಾಹ್ನ ಆಡಳಿತ ಕಾಂಗ್ರೆಸ್ ಪರವಾಗಿ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು. ಆಡಳಿತ ಕಾಂಗ್ರೆಸ್ಸಿನ ಚುನಾವಣೆ ಸಂಕೇತವಾದ ಹಸು–ಕರುವಿನ ಭಾರಿ ಆಕೃತಿಯನ್ನು ಲಾರಿಯಲ್ಲಿಟ್ಟು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಸಂಜೆ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ಭಾರಿ ಬಹಿರಂಗ ಸಭೆಯನ್ನುದ್ದೇಶಿಸಿ ಭಾರತೀಯ ಜನಸಂಘದ ಅಧ್ಯಕ್ಷ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರು ಭಾಷಣ ಮಾಡಿ, ಜನಸಂಘದ ಅಭ್ಯರ್ಥಿ ಶ್ರೀ ಗೋಪಾಲಕೃಷ್ಣ ಅಡಿಗ ಅವರ ಪರವಾಗಿ ಪ್ರಚಾರ ಭಾಷಣ ಮಾಡಿದರು.

ಯಶಸ್ಸಿನ ರಣಕಹಳೆಗೆ ಬುದ್ಧಿಮಾತಿನ ಕೊಳಲಗಾನ ಬಂಡುಕೋರತನವಾಗಿ ಕೇಳಿಸುತ್ತಿರುತ್ತದೆ

ರಾವಣ ಎಂಬ ಮಹಾನ್ ರೂಪಕ



ವಿಶ್ಲೇಷಣೆ

ಸಬಿತಾ ಬನ್ನಾಡಿ

‘ಕಾಲಿಟ್ಟರೆ ಎಲ್ಲಿ ಮಾಸುವುದೋ ಎನ್ನುವಂತಿದ್ದ ಆ ರಾಜಮಾರ್ಗದ ಇಕ್ಕೆಲಗಳಲ್ಲಿಯೂ ಗಗನಚುಂಬಿಯಾದ ಉಪ್ಪರಿಗೆಯ ಮನೆಗಳಿದ್ದುವು. ಜಗತ್ತಿನ ಐಶ್ವರ್ಯವೆಲ್ಲವೂ ಅಲ್ಲಿಯೇ ಬಂದು ನೆಲೆಸಿರುವಂತೆ ನವರತ್ನಗಳಿಂದ ಅಲಂಕೃತವಾಗಿರುವ ಆ ಸೌಧಸೌಧದಿಂದಲೂ ವಾದ್ಯಧ್ವನಿ ಹೊರಹೊಮ್ಮುತ್ತಿತ್ತು. ಎಲ್ಲಿ ನೋಡಿದರೂ ನಗುವಿನ ತರಂಗಗಳನ್ನೆಬ್ಬಿಸುತ್ತಿರುವ ಹೆಣ್ಣುಗಂಡುಗಳು...’

ಇದು ಯಾವುದೋ ಅತ್ಯಾಧುನಿಕ ಮೆಟ್ರೊಪಾಲಿಟನ್ ನಗರದ ವರ್ಣನೆಯಲ್ಲ. ಹನುಮಂತನ ಕಣ್ಣಿಗೆ ಕಂಡ ರಾವಣನ ಲಂಕಾನಗರ. ಆತ ಹಾಗೇ ಮುಂದುವರಿದಾಗ, ‘ರಾಕ್ಷಸೇಶ್ವರನಾದ ರಾವಣನ ಅರಮನೆ ಸಿಕ್ಕಿತು. ಅರಮನೆಯ ಸುತ್ತಲೂ ದೊಡ್ಡ ಪ್ರಾಕಾರ; ಅಲ್ಲಿ ಎಲ್ಲಿ ನೋಡಿದರೂ ರಥಗಳೂ ವಾಹನಗಳೂ ವಿಮಾನಗಳೂ ಆನೆಕುದುರೆಗಳೂ ಕಿಕ್ಕಿರಿದು ತುಂಬಿದ್ದವು. ಅದರ ಹೊರಬಾಗಿಲು ಬಂಗಾರದಿಂದ ನಿರ್ಮಿತವಾದುದು. ಬಹು ಬಲಾಢ್ಯರಾದ ಸಾವಿರಾರು ಮಂದಿ ರಾಕ್ಷಸರು ಆ ಬಾಗಿಲ ಬಳಿ ಬಹು ಎಚ್ಚರಿಕೆಯಿಂದ ಕಾವಲು ಕೆಲಸ ನಡೆಸುತ್ತಿದ್ದರು’.

‘ಒಂದು ಕಡೆ ಹಾಸ್ಯಪರಿಹಾಸ್ಯಗಳಲ್ಲಿ ತೊಡಗಿರುವ ಹೆಣ್ಣುಗಳು; ಮತ್ತೊಂದೆಡೆ ಪರಸ್ಪರ ಆಲಿಂಗನದಲ್ಲಿ ಬಾಹ್ಯ ಜಗತ್ತನ್ನು ಮರೆತು ಅರ್ಥವಿಲ್ಲದ ಜಲ್ಪಿತದಲ್ಲಿ ಮಗ್ನರಾಗಿರುವ ಕಾಮಾಸಕ್ತರು; ಇನ್ನೊಂದೆಡೆ ಪಾನದಿಂದ ಮತ್ತೇರಿ ಬಾಯಿಗೆ ಬಂದಂತೆ ಹರಟುತ್ತಲೊ ಅಥವಾ ಒಬ್ಬರನ್ನೊಬ್ಬರು ಬಯ್ದಾಡುತ್ತಲೊ ಇರುವ ಕುಡುಕರ ತಂಡ’– ಕುವೆಂಪು ಬರೆದ ಜನಪ್ರಿಯ ವಾಲ್ಮೀಕಿ ರಾಮಾಯಣದ ‘ರಾತ್ರಿಯಲ್ಲಿ ಲಂಕಾನಗರ’ ಎಂಬ ಅಧ್ಯಾಯದಲ್ಲಿನ ವರ್ಣನೆಗಳಿವು.

ಇದನ್ನು ಓದುತ್ತಿದ್ದರೆ, ಇಂದು ಇದೇ ರಾವಣ ರಾಜ್ಯವೇ ನಮ್ಮ ‘ಅಭಿವೃದ್ಧಿ’ಯ ಮಾದರಿಯಲ್ಲವೇ ಎಂದೆನಿಸುತ್ತದೆ. ಇದೇ ಇಂದು ಎಲ್ಲರ ಕನಸು. ರಾವಣ ವಿಮಾನ ಏರಿ ಬಂದು ಸೀತೆಯನ್ನು ಅಪಹರಿಸುವುದಕ್ಕೂ ಈ ಸೊಕ್ಕಿನ ಸಂಪತ್ತಿಗೂ ಖಂಡಿತ ಸಂಬಂಧವಿದೆ. ರಾಮನು ಸೇತುವೆ ಕಟ್ಟಿ ವಾನರ ಪಡೆಯ ಸಹಾಯ ಪಡೆದು ಸೀತೆಯನ್ನು ಕರೆತರಲು ಹೋಗುವ ಶ್ರಮ ಇಂದು ಬಡತನವಾಗಿ, ಸೋಲಾಗಿ ಕಾಣಿಸುವ ಸಾಧ್ಯತೆಯೇ ಹೆಚ್ಚು. ಆದರೆ ಅಷ್ಟೆಲ್ಲ ಕಾವಲಿದ್ದ ರಾವಣ ರಾಜ್ಯವನ್ನು ಹನುಮಂತ ಪುಟ್ಟ ಕಪಿಯಾಗಿ ರೂಪು ತಳೆದು ನುಗ್ಗಿಬಿಟ್ಟ. ಕಾಡಿನ ಗಮಾರನೊಬ್ಬ ಬೃಹತ್ ಸಾಮ್ರಾಜ್ಯದ ಅಹಂಕಾರ ನಾಶಕ್ಕೆ ಬೀಜರೂಪಿಯಾಗುತ್ತಾನೆ ಎಂಬ ಈ ಸೂಚನೆ ಸಾರ್ವಕಾಲಿಕ ಎಚ್ಚರದ ಸೂಚನೆಯೂ ಆಗಿದೆ. ‘ಅರ್ಧ ಯೋಜನ ಅಗಲ ಒಂದು ಯೋಜನ ವಿಸ್ತಾರವಾದ ರಾವಣನ ಅಂತಃಪುರದಲ್ಲಿ ಅವನ ಪತ್ನಿಯರೂ ಆತನು ಭುಜಬಲದಿಂದ ಅಪಹರಿಸಿ ತಂದಿದ್ದ ರಾಜಕನ್ನಿಕೆಯರೂ ಅಸಂಖ್ಯಾತರಾಗಿ ತುಂಬಿದ್ದರು’ ಎಂಬ ವಿವರವೂ ಇದರಲ್ಲಿ ಬರುತ್ತದೆ. ಹೀಗಿದ್ದೂ ತೃಪ್ತನಾಗದೆ, ಅನ್ಯ ರಾಜ್ಯಕ್ಕೆ ಹೋಗಿ ಸೀತೆಯನ್ನು ಅಪಹರಿಸಿ ತರುವ ಅವನ ದುರಾಸೆಯು ಎಷ್ಟೆಲ್ಲಾ ಜನರ ವಿಪತ್ತಿಗೆ ಕಾರಣವಾಗುತ್ತದೆ. ಈ ಮತ್ತಷ್ಟು ವಿಸ್ತರಿಸುವ ವಾಂಛೆಯೇ ಜಗತ್ತಿನ ಹಲವು ವಿಪ್ಲವಗಳ ಮೂಲ. ಅದೇ ಸರ್ವಾಧಿಕಾರಿಗಳನ್ನು ಹುಟ್ಟಿಸುವುದು. ಅಂತಹವರೊಂದಿಗೆ ಬಹುಬಲದ ಸೈನ್ಯರೂಪಿ ಬೆಂಬಲಿಗರಿಗೂ ದಿಗ್ವಿಜಯದ ಅಮಲು ಏರಿರುತ್ತದೆ.

ರಾವಣನಿಗೆ ಸೈನ್ಯ, ಸಂಪತ್ತು ಮತ್ತು ವಿಮಾನದಂತಹ ತಂತ್ರಜ್ಞಾನ ಬಲದ ಅಹಂಕಾರವಿತ್ತು. ಕವಿ ನಾಗಚಂದ್ರ ಬಳಸುವ ‘ದುರ್ಯಶ ಪಟರವ’ ಎಂಬ ಪದವನ್ನು ನೆನಪಿಸಿಕೊಳ್ಳಬೇಕು. ಕೈಹಾಕಿದ್ದೆಲ್ಲದರಲ್ಲೂ ಯಶಸ್ಸು ಸಿಗುತ್ತಾ ಹೋದಾಗ, ಕೆಲವೊಮ್ಮೆ ಕೆಟ್ಟ ಕೆಲಸವಾಗಿದ್ದರೂ ಅದಕ್ಕೂ ಮನ್ನಣೆ ಸಿಗುತ್ತಾ ಹೋಗುತ್ತದೆ. ಇದನ್ನೆಲ್ಲಾ ವ್ಯಕ್ತಿ ತನ್ನ ಯಶಸ್ಸು ಎಂದು ಭಾವಿಸಿಕೊಳ್ಳ ತೊಡಗುತ್ತಾನೆ. ಈ ಯಶಸ್ಸಿನ ಸದ್ದು ಆತನ ಕಿವಿಯಲ್ಲಿ ಮೊಳಗುತ್ತಿರುತ್ತದಂತೆ. ಹೀಗಾಗಿ, ಆತನಿಗೆ ತಾನು ಯಾವ ಕೆಲಸಕ್ಕೆ ಕೈ ಹಾಕುತ್ತಿದ್ದೇನೆ, ಅದರ ಅಪಾಯ ಯಾವುದು ಎಂಬುದೂ ಅರಿವಿಗೆ ಬರುವುದಿಲ್ಲವಂತೆ.

ಸೀತೆಯನ್ನು ಸಲೀಸಾಗಿ ಅಪಹರಿಸಿದ್ದು ಕೂಡ ಆತನಿಗೆ ತನ್ನ ಯಶಸ್ಸು ಎಂದೇ ಕಾಣುತ್ತದೆ. ತನ್ನನ್ನು ಯಾರೂ ಮಣಿಸಲಾರರು ಎಂದೇ ಅವನು ಭಾವಿಸುತ್ತಾನೆ. ತನ್ನ ಕಾರ್ಯಯೋಜನೆಯ ಗೆಲುವಿಗಾಗಿ ಆತ ಚಿನ್ನದ ಜಿಂಕೆಯ ಮರೆಮೋಸದ ಜಾಲವನ್ನೂ ಹೆಣೆಯಬಲ್ಲ. ಯಾಕೆಂದರೆ ಅವನಿಗೆ ಹೇಗಾದರೂ ಗೆಲ್ಲುವುದೇ ಮುಖ್ಯ. ಆದರೆ ಈ ಗೆಲುವೇ ಅವನ ಅವನತಿಯ, ನಾಶದ ಮೊದಲ ಮೆಟ್ಟಿಲಾಗಿರುತ್ತದೆ.

ಎಂತಹ ವಿಪರ್ಯಾಸ ನೋಡಿ. ರಾಮ ನೆಲೆಸಬಯಸಿದ್ದು ಹನುಮಂತನಂತಹವರ ಹೃದಯದಲ್ಲಿ. ಆದರೆ ನಾವು ಬಯಸುವುದು ರಾವಣ ರಾಜ್ಯದ ವೈಭವೋಪೇತ ಅಟ್ಟಹಾಸವನ್ನು. ಅದಕ್ಕಾಗಿ ನಾವು ಹನುಮಂತನ ಪರಿವಾರ ವಾಸಿಸುವ ಕಾಡುಗಳನ್ನೇ ಬಲಿ ಕೊಡಬಲ್ಲೆವು. ಆದರೆ ಆ ಬದುಕುಗಳು ನೀಡಿದ ಸೂಚನೆಗಳನ್ನು ಮಾತ್ರ ಇನ್ನಾವುದೋ ಕೊನೆಯಿಲ್ಲದ ಬಾಯಾರಿಕೆಯ ಗೆಲುವಿಗಾಗಿ ಸೇರುವ ರಸ್ತೆಯಾಗಿಸಿಕೊಳ್ಳಬಲ್ಲೆವೇ ಹೊರತು ಅವುಗಳನ್ನು ಮೌಲ್ಯವಾಗಿಸಿಕೊಳ್ಳಲಾರೆವು. ಸೀತೆಯು ರಾವಣನ ವೈಭವದ ಕಡೆ ಕಣ್ಣೆತ್ತಿಯೂ ನೋಡಲಿಲ್ಲ. ರಾವಣ ಭಾವಿಸಿದ್ದೇನೆಂದರೆ, ಸೀತೆ ಇಂದಲ್ಲಾ ನಾಳೆ ಈ ವೈಭವಕ್ಕೆ ಒಡತಿಯಾಗಲು ಬಯಸಿಯೇ ಬಯಸುತ್ತಾಳೆ ಎಂದು. ಬಂಗಾರದ ಜಿಂಕೆಗೆ ಮಾರುಹೋದವಳು ಬಂಗಾರದರಮನೆಗೆ ಒಡತಿಯಾಗುವುದನ್ನು ನಿರಾಕರಿಸುತ್ತಾಳೆಯೇ ಎಂದು ಅವನು ಎಣಿಕೆ ಹಾಕಿರಬಹುದು. ಹೀಗೆ ಕಾಲಬುಡಕ್ಕೆ ಬಂದು ಬೀಳುವ ಸಂಪತ್ತು ಅನೈತಿಕವಾದರೇನಂತೆ, ಬಂದಾಗ ಬಾಚಿಕೊಳ್ಳಬೇಕು ಎನ್ನುವವರಿರುವ ತನಕ ಇದಕ್ಕೆ ಕೊನೆಯಿಲ್ಲ. ಹಾಗೆ ಕೊಟ್ಟಿದ್ದನ್ನು ಪಡೆದು ತೆಪ್ಪಗೆ ದಾಸರಾಗಿ ಇರಬೇಕೆಂಬುದೇ ಹತ್ತು ತಲೆಯ ಯೋಜನಾಕಾಂಕ್ಷಿಗಳ ಅನುಕ್ತ ಶಾಸನ. ಅಂತಹ ಶಾಸನ ಒಪ್ಪದವರೆಲ್ಲಾ ಅವರಿಗೆ ಬಂಡುಕೋರರಂತೆಯೇ ಕಾಣಿಸುವುದು.

ಈ ರಾವಣ ರಾಜ್ಯದಂತೆಯೇ ರಾವಣನ ಹತ್ತು ತಲೆಯೂ ಮಹಾನ್ ರೂಪಕ. ಏಕಕಾಲಕ್ಕೆ ಎಷ್ಟು ಯೋಚನೆ, ಯೋಜನೆ, ಯುಕ್ತಿ, ಕುಯುಕ್ತಿ! ಮನುಷ್ಯ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಗಳೆಂಬ ನಾಲ್ಕು ಆಶ್ರಮಗಳನ್ನು ದಾಟಬೇಕು ಎಂದು ಹೇಳುತ್ತಿದ್ದುದು ಈ ಹತ್ತು ತಲೆಯ ಯೋಜನೆಯ ವಿರುದ್ಧ ದಿಕ್ಕಿನದು. ತಾನು ಅನುಭವಿಸಿದ ನಂತರದಲ್ಲಿ ಕಿರಿಯರಿಗೆ ಜವಾಬ್ದಾರಿ ಒಪ್ಪಿಸಿ ನೀಗಿಕೊಳ್ಳುವಂತಹದು. ಕೊನೆಯ ಎರಡನ್ನು ಕಾಡಿನಲ್ಲಿ ಕಳೆಯಬೇಕಿತ್ತು. ಆದರೆ ಈಗಲೋ, ಸ್ಟೈಲಿಶ್ ಇಂಗ್ಲಿಷ್, ಅತ್ಯಾಧುನಿಕ ಗ್ಯಾಜೆಟ್, ಚಿನ್ನದ ಸರ ಇತ್ಯಾದಿಗಳನ್ನೆಲ್ಲಾ ಕಾವಿಯಲ್ಲಿ ಧರಿಸಿ ಕಾಂಕ್ರೀಟ್ ಅರಮನೆಯಲ್ಲಿ ಬಂಟರೊಂದಿಗೆ ಬಾಳುತ್ತಿರುವ ಹಲವು ‘ಸನ್ಯಾಸಿ’ಗಳಿಗೇ ಕಾಡು ಯಾವ ದಿಕ್ಕಿನಲ್ಲಿ ಇದೆ ಎಂದು ತಿಳಿದಿಲ್ಲ. ಇನ್ನು ಜವಾಬ್ದಾರಿಗಳೋ– ವಾಣಿಜ್ಯ ವ್ಯವಹಾರಗಳಿಂದ ಹಿಡಿದು ಸರ್ಕಾರ ಉಳಿಸಬೇಕೋ ಉರುಳಿಸಬೇಕೋ ಎಂಬಲ್ಲಿಯವರೆಗೆ ಗೃಹಸ್ಥರು ನಾಚಿಕೊಳ್ಳುವಷ್ಟು ಹೆಚ್ಚಾಗಿದೆ! ಜೊತೆಗೆ ಶಿಷ್ಯರುಗಳಿಗೆ ಒಳ್ಳೆಯ ಖಾತೆಗಳನ್ನು ಕೊಡಿಸಿ, ಇಲ್ಲವೇ ಕ್ಷೇತ್ರಕ್ಕೆ ಹೆಚ್ಚು ಅನುದಾನಗಳನ್ನು ಕೊಡಿಸಿ ರಾವಣ ರಾಜ್ಯದಲ್ಲಿರುವಂತೆ ವೈಭವೋಪೇತ ಮಹಲುಗಳನ್ನು ಮೇಲಕ್ಕೆಬ್ಬಿಸಬೇಕಾಗಿದೆ.

ಮನುಷ್ಯ ತಾನಾಗಿ ತಂದುಕೊಳ್ಳುವ ಈ ಗೋಳುಗಳಿಗೂ ರಾವಣ ಒಳ್ಳೆಯ ರೂಪಕ. ವಿಭೀಷಣ ಮಾತ್ರವಲ್ಲ, ಕುಂಭಕರ್ಣನೂ ಸೀತೆಯನ್ನು ಮರಳಿ ಒಪ್ಪಿಸು ಎಂದು ಬುದ್ಧಿಮಾತು ಹೇಳುತ್ತಾನೆ. ನಿನ್ನಿಂದಾಗಿ ಲಂಕೆಗೆ ವಿಪತ್ತು ಬಂದಿತು ಎನ್ನುತ್ತಾನೆ. ಆದರೂ ಆತ ಕೇಳದೆ ಕೆರಳಿದ. ಕುಂಭಕರ್ಣ ‘ಸರಿ, ನಾನು ನಿನಗಾಗಿ ಹೋರಾಡುತ್ತೇನೆ. ರಾಮನನ್ನು ಕೊಲ್ಲುತ್ತಲೇ ಸೀತೆ ನಿನ್ನ ವಶವಾಗುತ್ತಾಳೆ’ ಎನ್ನುತ್ತಾನೆ. ಈ ಸಂದರ್ಭದಲ್ಲಿ ಅತಿಕಾಯನೆಂಬ ರಾಕ್ಷಸನ ಮಾತು ಕೇಳಿದರೆ, ಈತನೇ ನಮ್ಮ ಇಂದಿನ ವಾಟ್ಸ್ಆ್ಯಪ್ ಯೂನಿವರ್ಸಿಟಿಯವರ, ಕೆಲವೊಮ್ಮೆ ಕೆಲವು ಮಾಧ್ಯಮಗಳವರ ಮೂಲಗುರುವಾಗಿರಬೇಕು ಎಂಬ ಸಂಶಯ ಹುಟ್ಟುತ್ತದೆ. ‘ನನ್ನನ್ನೂ ಸೇರಿಸಿ ಇನ್ನೂ ಐವರನ್ನು ಯುದ್ಧಕ್ಕೆ ಕಳುಹಿಸು. ಶತ್ರುಗಳು ಹತರಾದ ಮೇಲೆ ಸೀತೆ ನಿನ್ನವಳಾಗುತ್ತಾಳೆ. ಒಂದು ಪಕ್ಷ ನಾವು ಸೋತರೆ, ಅದನ್ನು ಬಹಿರಂಗ ಪಡಿಸಬೇಡ: ನಾವೇ ಗೆದ್ದೆವೆಂದು ಊರಿನಲ್ಲೆಲ್ಲಾ ಹರಡು. ಅದನ್ನು ಕೇಳಿ ನಿರಾಶಳಾದ ಸೀತೆ ಗತ್ಯಂತರವಿಲ್ಲದೆ ನಿನ್ನನ್ನು ವರಿಸುತ್ತಾಳೆ’. ರಾವಣನೂ ಒಪ್ಪದ ಗೆಲುವಿನ ಈ ನೀಚದಾರಿಯ ಮಾತು ಈಗೀಗ ಬಹಳ ದೊಡ್ಡ ರಣತಂತ್ರವೇ ಆಗುತ್ತಿದೆ– ರಾಮಾಯಣದ ರಾವಣನ ನಾಶದ ನಂತರವೂ.



ಚುರುಮುರಿ



ಸೀಡಿ ಪಾಶ

• ಸುಧೀಂದ್ರ

ಫೈಲೊಂದರ ಅಪ್ರೂವಲ್‌ಗೆಂದು ಬಾಸ್ ಹತ್ರ ಹೊರಟಿದ್ದೆ. ಅಷ್ಟರಲ್ಲಿ ಪಿ.ಎ. ಸತ್ಯ ಕೋಣೆಗೆ ನುಗ್ಗಿದ. ‘ಪಾಶ ಅನ್ನೋರು ನಿಮ್ಮನ್ನು ನೋಡ್ಬೇಕಂತೆ, ಸೀಡಿ ತೊಗೊಂಡ್ಬಂದಿದಾರಂತೆ, ಕಳಿಸ್ಲಾ?’ ಅಂದ. ಕೂಡಲೇ ನನ್ನ ಕೈಲಿದ್ದ ಫೈಲ್ ಕೆಳಗೆ ಬಿತ್ತು. ‘ಬಿಸಿಯಾಗಿದ್ದಾರೆ ಅನ್ನು’ ಅಂತ ಹೇಳಿ ಫ್ಯಾನ್ ಹಾಕಿದೆ.

ಹತ್ತು ವರ್ಷದ ಹಿಂದೆ ಕಾಲೇಜಿನಲ್ಲಿ ಜತೆಯಾಗಿದ್ದ ಹುಡುಗಿ ಮೊನ್ನೆ ಫೇಸ್‌ಬುಕ್‌ನಲ್ಲಿ ಸಿಕ್ಕಿದ್ಲು. ಕೊರೊನಾದಿಂದ ಕೆಲ್ಸ ಕಳ್ಕೊಂಡ್ಲೂಂತ ಗೊತ್ತಾಯ್ತು. ಟೆಲಿಫೋನಿಕ್ ಇಂಟರ್ವ್ಯೂ ನಾನೇ ತಗೊಂಡು ನಮ್ಮ ಕಂಪನೀಗೆ ಅವ್ಳನ್ನ ರೆಕಮಂಡ್ ಮಾಡಿದ್ದೆ. ಅವತ್ತೇ ಸಂಜೆ ಕಾಫಿಡೇಯಲ್ಲಿ ಇಬ್ರೂ ಭೇಟಿಯಾಗಿದ್ವಿ. ಎರಡು ಗಂಟೆ ಕಿಲಕಿಲ ಅಂತ ಮಾತಾಡಿದ್ವಿ. ಆಗ ಯಾರಾದ್ರೂ ನಮ್ಮಿಬ್ರ ಫೋಟೊ, ವಿಡಿಯೊ ತೊಗೊಂಡಿರಬಹುದು. ಅದ್ರ ಸೀಡೀನ ಈ ಪಾಶ ಅನ್ನೋವ್ರು ತಂದಿರಬಹುದು. ಯೋಚಿಸ್ತಿದ್ದಂತೆ ತಲೆ ಸಿಡಿಯೋಕ್ಕೆ ಶುರುವಾಯ್ತು.

ಸತ್ಯ ಮತ್ತೆ ಬಂದ. ‘ಆ ಪಾಶ ಇಷ್ಟೊತ್ತೂ ಕಾಯ್ತಿದ್ರು. ಸೀಡೀನ ಮನೆಯಲ್ಲೇ ಕೊಟ್ಟು ಹೋಗ್ತಾರಂತೆ’ ಎಂದ. ಎದೆ ಧಸಕ್ಕೆಂದಿತು.

ಬಾಸ್ ಕೈಲಿ ಸೈನ್ ಹಾಕಿಸ್ಬೇಕೂಂತಿದ್ದ ಆ ಹುಡುಗಿಯ ರೆಕ್ರೂಟ್‌ಮೆಂಟ್ ಫೈಲ್ ಕಬೋರ್ಡಿನಲ್ಲಿ ಮುಚ್ಚಿಟ್ಟೆ. ಬಾಸ್ ಬಂದ್ರು. ‘ಹೆಡ್ಡಾಫೀಸ್ನಲ್ಲಿ ಸೀಡಿ ಇಶ್ಯೂ ರೈಸ್ ಆಗಿದೆ. ಡಿಸ್ಕಷನ್‌ಗೆ ಬನ್ನಿ’ ಅಂದಾಗ, ಇವತ್ತು ನನ್ನ ಕೆಲ್ಸ ಹೋಯ್ತು ಅಂದ್ಕೊಂಡೆ.

ಮೀಟಿಂಗ್‌ನಲ್ಲಿ ಕುಳಿತಾಗ ಗೊತ್ತಾಯ್ತು, ಬಾಸ್ ಹೇಳ್ತಾ ಇದ್ದಿದ್ದು ಅವರ ಬಾಸ್ ಸಿ.ದೊಡ್ಡಣ್ಣನವರು ಪ್ರಾಜೆಕ್ಟ್ ಬಗ್ಗೆ ಕಮೆಂಟ್ ಮಾಡಿದ ವಿಷಯ ಅಂತ.

ಮನೆಗೆ ಬಂದೆ. ‘ಪಾಶ ಅನ್ನೋರು ಬಂದಿದ್ರು, ಸೀಡಿ ತಂದ್ಕೊಟ್ರು’ ಅಂದ್ಲು ಹೆಂಡ್ತಿ.

‘ಯಾವ ಸೀಡಿ?’ ಎಂದು ಗಾಬರಿಯಾದೆ. ಅಮ್ಮ ನಗ್ತಾ, ‘ನಮ್ಮ ಮದ್ವೆ ಕ್ಯಾಸೆಟ್ ಡಿಜಿಟೈಸ್ ಮಾಡೋಕೇಂತ ಸ್ಟುಡಿಯೋಗೆ ಕೊಟ್ಟಿದ್ವಲ್ಲ ಅದು. ನನ್ನ ಫ್ರೆಂಡ್ಸ್ ಮುಂದೆ ಪೆಕರು ಪೆಕರಾಗಿ ನಿಂತಿದ್ರಿ ನೀವು’ ಅಂತ ಕುಟುಕಿದಳು. ಸೀಡಿ ಪಾಶದಿಂದ ಮುಕ್ತನಾದೆ!

ಸಂಗತ

ಅಂಟಾರ್ಕ್ಟಿಕಾದ ಹಿಮಕ್ಕೇ ಡ್ರಿಲ್

ವಾಯುಗುಣದ ಚರಿತ್ರೆ ಜಾಲಾಡಲು ಚರಿತ್ರೆಯಲ್ಲೇ ಮೊದಲ ಪ್ರಯತ್ನ ಆರಂಭವಾಗಿದೆ


• ಶ್ರೀಗುರು

ಭೂಮಿಯ ಹಿಮಖಂಡಗಳು ರಾಕೆಟ್ ವೇಗದಲ್ಲಿ ಕರಗುತ್ತಿವೆ. ವಾಯುಗುಣ ಎರ್ರಾಬಿರ್ರಿ ಬದಲಾಗುತ್ತಿರುವ ಈ ದಿನಮಾನಗಳಲ್ಲಿ ಜಗತ್ತಿನಾದ್ಯಂತ ನೈಸರ್ಗಿಕ ಪ್ರಕೋಪಗಳ ಸಂಖ್ಯೆ ಹೆಚ್ಚಿದ್ದು, ಕಾರಣ ಹುಡುಕಲು ವಾಯುಗುಣ ತಜ್ಞರು ಹಗಲಿರುಳೂ ಶ್ರಮಿಸುತ್ತಿದ್ದಾರೆ.

ಸಮಸ್ಯೆಗಳಿಗೆ ಉತ್ತರವು ಭೂಮಿಯ ದಕ್ಷಿಣ ಮತ್ತು ಉತ್ತರ ಧ್ರುವಗಳಲ್ಲಿರುವ ಹಿಮದಲ್ಲೂ ಇದೆ ಎಂಬ ಸತ್ಯ ಗೊತ್ತಾದಾಗಿನಿಂದ ವಿಜ್ಞಾನಿಗಳ ಚಿತ್ತವೆಲ್ಲ ಹಿಮಖಂಡಗಳ ಮೇಲೆ ಬಿದ್ದಿದೆ. ಆಸ್ಟ್ರೇಲಿಯಾದ ವಿಜ್ಞಾನಿಗಳು ಅಂಟಾರ್ಕ್ಟಿಕಾದ ಹಿಮಗಟ್ಟಿಯನ್ನು 3,000 ಮೀಟರ್ ಆಳದವರೆಗೆ ಕೊರೆದು, 15 ಲಕ್ಷ ವರ್ಷಗಳಿಂದ ಸತತವಾಗಿ ರೂಪುಗೊಂಡ ಹಿಮದ ಗಟ್ಟಿಯನ್ನು ಹೊರತೆಗೆದು, ಅದರಲ್ಲಿ ಸಿಕ್ಕಿಕೊಂಡಿರುವ ಗಾಳಿಯನ್ನು ಪರೀಕ್ಷಿಸಿ, ಆಗ ಭೂಮಿಯ ವಾಯುಗುಣ ಹೇಗಿತ್ತು ಎಂಬ ಡೇಟಾ ಸಂಗ್ರಹಿಸಿ, ಇದುವರೆಗೆ ಭೂಮಿಯ ವಾತಾವರಣದಲ್ಲಾದ ಬದಲಾವಣೆಗೆ ಕಾರಣ ಹುಡುಕುವ ತಮ್ಮ ಪ್ರಯತ್ನ ಫಲ ನೀಡುತ್ತದೆಂಬ ವಿಶ್ವಾಸದಲ್ಲಿದ್ದಾರೆ.

ಕೊರೆಯಲು ಹುಡುಕಿರುವ ಜಾಗ ಸಮುದ್ರ ಮಟ್ಟದಿಂದ 3,000 ಮೀಟರ್ ಎತ್ತರದಲ್ಲಿದೆ. ಸುಮಾರು 300 ಟನ್ ತೂಕದ ಕೊರೆಯುವ ಯಂತ್ರಗಳನ್ನು ಅಷ್ಟು ಎತ್ತರಕ್ಕೆ ಸಾಗಿಸಿ 2,800 ಮೀಟರ್ ಆಳಕ್ಕೆ ಕೊರೆದು, ಭೂಮಿಯ ತಾಪಮಾನದ ಏರಿಕೆಗೆ ಸ್ಪಷ್ಟ ಕಾರಣಗಳನ್ನು ಕಂಡುಕೊಳ್ಳುವ ಪ್ರಯತ್ನಕ್ಕೆ ಸುಮಾರು ವರ್ಷಗಳೇ ಬೇಕು. ಕೊರೆತದ ನೇತೃತ್ವ ವಹಿಸಿರುವ ವಿಜ್ಞಾನಿ ಜೋಯೆಲ್ ಪೆಡ್ರೊ ಅವರಿಗೆ ಭೂಮಿಯ ಹಳೆಯ ವಾಯುಗುಣದ ವಿವರ ಚೆನ್ನಾಗಿ ಗೊತ್ತಿದೆ. ಆಸ್ಟ್ರೇಲಿಯಾದ ಕೇಸಿ ಸಂಶೋಧನಾ ನೆಲೆಯಿಂದ 1,100 ಕಿ.ಮೀ. ದೂರದ ಲಿಟಲ್ ಡೋಮ್‌ಸಿ ಎಂಬ ತಾಣದಲ್ಲಿ ಡ್ರಿಲ್ಲಿಂಗ್ ಮಶೀನ್‌ಗಳು ಸದ್ದು ಮಾಡಲಿವೆ. ಮಂಜುಗಡ್ಡೆಯ ಹಲವು ಪದರಗಳನ್ನು ಕೊರೆಯುತ್ತ ಹೋದಂತೆ ಏನೆಲ್ಲ ಹೊಸ ಮಾಹಿತಿ ಸಿಗಬಹುದೆಂಬ ಕುತೂಹಲ ನಮ್ಮದು ಎಂದಿರುವ ಪೆಡ್ರೊ, ಲಭ್ಯವಿರುವ ಎಲ್ಲ ತಂತ್ರಜ್ಞಾನ ಬಳಸಿಕೊಂಡು, 12 ಲಕ್ಷದಿಂದ 15 ಲಕ್ಷ ವರ್ಷದಷ್ಟು ಹಳೆಯದಾದ ಹಿಮಪದರಗಳಲ್ಲಿ ಏನಿದೆ ಎಂಬುದನ್ನು ಕಂಡುಕೊಳ್ಳಲು ನಾವು ನಡೆಸುತ್ತಿರುವ ಈ ವಿಶೇಷ ಪ್ರಯತ್ನ ಇತಿಹಾಸದಲ್ಲೇ ಮೊದಲು ಎಂದಿದ್ದಾರೆ.

ಪ್ರಯತ್ನ ವಿಶೇಷದ್ದು ಎನ್ನಲು ಕಾರಣವಿದೆ. ಈಗಾಗಲೇ ಅಂಟಾರ್ಕ್ಟಿಕಾದಿಂದ 27 ಲಕ್ಷ ವರ್ಷಗಳಷ್ಟು ಹಳೆಯದಾದ ಹಿಮವನ್ನು ಸಂಗ್ರಹಿಸಿ ಅಭ್ಯಸಿಸಲಾಗಿದೆ. ಆದರೆ ಈ ಹಿಮ ಒತ್ತೊತ್ತಾಗಿ ನಿರಂತರವಾಗಿ ರೂಪುಗೊಂಡ ಹಿಮಖಂಡದ್ದಲ್ಲ. ಪೆಡ್ರೊ ಮತ್ತು ತಂಡ ಹೊರತೆಗೆಯಲು ಪ್ರಯತ್ನಿಸುತ್ತಿರುವ ಹಿಮದಗಡ್ಡೆ ಕಳೆದ 20 ಲಕ್ಷ ವರ್ಷಗಳಿಂದ ನಿರಂತರವಾಗಿ ಸುರಿದ ಹಿಮದಿಂದ ರೂಪುಗೊಂಡಿದೆ. ಸದ್ಯಕ್ಕೆ ನಮಗೆ 8 ಲಕ್ಷ ವರ್ಷ ಹಳೆಯ ನಿರಂತರ ಹಿಮಗಟ್ಟಿಯ ತಲೆಬುಡಗಳ ಬಗ್ಗೆ ಸ್ಪಷ್ಟ ಮಾಹಿತಿ ಇದೆ. ಈಗಿನ ಕೊರೆತದಲ್ಲಿ ಹದಿನೈದು ಲಕ್ಷ ವರ್ಷಗಳ ಹಿಂದಿನ ಹಿಮಗಟ್ಟಿಯ ಆಳಕ್ಕೆ ಬೈರಿಗೆ ಹಾಕಿ, ಆಗ ಶಾಖವರ್ಧಕ ಅನಿಲ (ಗ್ರೀನ್ ಹೌಸ್‌ಗ್ಯಾಸ್) ಮತ್ತು ಇಂಗಾಲದ ಪ್ರಮಾಣ ಎಷ್ಟಿತ್ತು ಮತ್ತು ವಾಯುಗುಣ ಹೇಗಿತ್ತು ಎಂದು ಹುಡುಕುವ ಪ್ರಯತ್ನವಿದು. ಕೊರೆದು ತಂದ ಹಿಮದ ತುಂಡುಗಳ ಪೈಕಿ ಪರೀಕ್ಷೆಗೆಂದು ಆಯ್ದುಕೊಂಡ ತುಂಡನ್ನು ನಿರ್ವಾತದ ಫ್ಲಾಸ್ಕ್‌ಗೆ ಹಾಕಿ, ಅಲ್ಲಿ ಮೊದಲೇ ಇರುವ ಗಾಳಿಯನ್ನು ಸಂಪೂರ್ಣವಾಗಿ ಹೊರಹಾಕಿ ನಂತರ ಹಿಮವನ್ನು ಬಿಸಿ ಮಾಡಿ ಕರಗಿಸಿ, ಪದರಗಳಲ್ಲಿ ಸಿಕ್ಕಿಹಾಕಿಕೊಂಡಿರುವ ಗಾಳಿಯನ್ನು ಆವಿ ರೂಪದಲ್ಲಿ ಹೊಮ್ಮಿಸಿ, ಅತ್ಯಾಧುನಿಕ ಲ್ಯಾಬ್‌ಗಳ ಮಾಸ್ ಸ್ಪೆಕ್ಟ್ರೋಮೀಟರ್‌ನ ಹೈವೋಲ್ಟೇಜ್ ನಳಿಕೆಯಲ್ಲಿ ಹಾಯಿಸಿ, ಮೂಲವಸ್ತುಗಳ ಐಸೊಟೋಪುಗಳ ನೆರವಿನಿಂದ ಅದರಲ್ಲಿ ಎಷ್ಟು ಪ್ರಮಾಣದ ಇಂಗಾಲ ಮತ್ತು ಇಂಗಾಲದ ಡೈ ಆಕ್ಸೈಡ್ ಇತ್ತು ಎಂಬುದನ್ನು ಪತ್ತೆ ಮಾಡಲಾಗುತ್ತದೆ.



ಅಂಟಾರ್ಕ್ಟಿಕಾದಲ್ಲಿ ನಾಲ್ಕು ಕೋಟಿ ವರ್ಷಗಳಿಂದಲೂ ಹಿಮದ ಸ್ತರಗಳು ಬೆಳೆಯುತ್ತಿವೆ. ಅಧ್ಯಯನದ ಪ್ರಕಾರ, ಅಂಟಾರ್ಕ್ಟಿಕಾದಲ್ಲಿ 3 ಕೋಟಿ ಘನ ಕಿ.ಮೀ.ನಷ್ಟು ಹಿಮವಿದೆ. ಜಗತ್ತಿನ ಶೇ 90ರಷ್ಟು ಸಿಹಿನೀರು ಮಂಜುಗಡ್ಡೆಯ ರೂಪದಲ್ಲಿ ಅಂಟಾರ್ಕ್ಟಿಕಾದಲ್ಲೇ ಇದೆ. ಒಂದು ಕೋಟಿ ನಲವತ್ತು ಲಕ್ಷ ಚದರ ಕಿ.ಮೀ. ವಿಸ್ತೀರ್ಣದ ಅಂಟಾರ್ಕ್ಟಿಕಾದಲ್ಲಿ ಅತೀ ತಂಪು, ಗಂಟೆಗೆ 250 ಕಿ.ಮೀ. ವೇಗದ ಬೀಸುಗಾಳಿ, ಆರು ತಿಂಗಳು ನಿರಂತರ ಹಗಲು ಮತ್ತಿನ್ನಾರು ತಿಂಗಳು ನಿರಂತರ ರಾತ್ರಿ ಇರುತ್ತದೆ. ಶಾಖವರ್ಧಕ ಅನಿಲಗಳು ಅಂಟಾರ್ಕ್ಟಿಕಾದ ತಾಪಮಾನವನ್ನು ಕಳೆದ ನಲವತ್ತು ವರ್ಷಗಳಲ್ಲಿ ಎರಡೂವರೆ ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಿಸಿವೆ. ಪ್ರಖ್ಯಾತ ಲಾರ್ಸೆನ್ ಐಸ್ ಶೆಲ್ಫ್ ಶೇ 40ರಷ್ಟು ಕರಗಿದೆ.

12 ಲಕ್ಷ ವರ್ಷಗಳ ಹಿಂದೆ ಭೂಗೋಳದ ವಾಯುಗುಣ ಪ್ರತೀ 40,000 ವರ್ಷಗಳಿಗೊಮ್ಮೆ ಬದಲಾಗುತ್ತಿತ್ತು. ಈಗ ಒಂದು ಲಕ್ಷ ವರ್ಷಗಳಿಗೊಮ್ಮೆ ಬದಲಾಗುತ್ತಿದೆ ಎಂದು ಪತ್ತೆಯಾಗಿದೆ. ವಾಲಿಕೊಂಡಿರುವ ಭೂಮಿಯ ಕಕ್ಷೆಯಲ್ಲಿ ಸ್ವಲ್ಪ ಕುಲುಕಾಟವಾದಾಗ ಪ್ರತೀ ಲಕ್ಷ ವರ್ಷಕ್ಕೊಮ್ಮೆ ಭೂಮಿಗೆ ಶೀತ ಹಿಡಿದು ಹಿಮಯುಗ ಬರುತ್ತದೆ. ಇದನ್ನು ಮಿಲಂಕೋವಿಚ್ ಸೈಕಲ್ ಎನ್ನುತ್ತಾರೆ. ಭೂಮಿಯ ಮೇಲೆ ವಾಸ ಮಾಡುವ ಜೀವಿಗಳೇ ವಾಯುಗುಣದ ಭವಿಷ್ಯವನ್ನು ನಿರ್ಧರಿಸುತ್ತವೆ ಎಂಬುದು ಗೊತ್ತಾದ ಮೇಲೆ ಪ್ರಾಣಿ ಮತ್ತು ಸಸ್ಯ ಸಂಕುಲಗಳ ನಡುವಿನ ನಿರಂತರ ಯುದ್ಧದ ವೇಗವನ್ನು ಕಡಿಮೆಗೊಳಿಸುವುದು ಮತ್ತು ನಿಯಂತ್ರಣದಲ್ಲಿಡುವುದು ಅನಿವಾರ್ಯವಾಗಿದೆ.

ವಾಚಕರ ವಾಣಿ

ಇಂತಹ ಅಪಸವ್ಯಕ್ಕೆ ಕೊನೆಯಿಲ್ಲವೇ?

ನೌಕರಿ ಕೊಡಿಸುವ ಆಮಿಷವೊಡ್ಡಿ ಒಬ್ಬ ಯುವತಿಯನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ರಮೇಶ್ ಜಾರಕಿಹೊಳಿ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ನೈತಿಕವಾಗಿ ಸರಿ. ಸಿ.ಡಿ. ನಕಲಿಯೋ ಅಸಲಿಯೋ ಎನ್ನುವ ಸತ್ಯಾಸತ್ಯತೆ ತನಿಖೆಯಿಂದ ಹೊರಬರಲಿ. ಆದರೆ, ಮನುಷ್ಯನ ಸಹಜ ಲೈಂಗಿಕ ವಾಂಛೆಯನ್ನು ನಿಗೂಢವಾಗಿ ಚಿತ್ರೀಕರಿಸುವುದು, ಹಾದಿಬೀದಿಯಲ್ಲಿ ಆಬಾಲವೃದ್ಧರಾದಿಯಾಗಿ ಈ ಕುರಿತು ವಿಕೃತವೆಂಬಂತೆ ಚರ್ಚೆ, ಬಣ್ಣನೆ ಮಾಡುವುದು ಸಿ.ಡಿ. ಒಳಗಿನ ಚಿತ್ರಕ್ಕಿಂತಲೂ ಹೇಯವಾದುದು. ಇದು, ಜನ ಸಿಡಿಮಿಡಿಗೊಳ್ಳುವಷ್ಟು ಅಸಹ್ಯ ಭಾವನೆ ಸೃಷ್ಟಿಸಿದೆ. ಇಂತಹ ಅಪಸವ್ಯಗಳಿಗೆ ಕೊನೆಯಿಲ್ಲವೇ?

ಆರ್.ವೆಂಕಟರಾಜು, ಬೆಂಗಳೂರು

ಮೀಸಲಾತಿಯ ರಾಜಕೀಯ ಮೇಲಾಟ

ಮೀಸಲಾತಿ ಬೇಡಿಕೆಗಾಗಿ ಇತ್ತೀಚೆಗೆ ಹೋರಾಟಗಳು ಬಹಳ ದೊಡ್ಡದಾಗಿ ನಡೆಯುತ್ತಿವೆ. ಯಾವ ಸಮುದಾಯಗಳು ನಿಜವಾಗಿ ಅರ್ಹತೆ ಹೊಂದಿವೆಯೋ ಅವುಗಳಿಗೆ ಮೀಸಲಾತಿಯ ನ್ಯಾಯ ಸಿಗಲಿ. ಆದರೆ ಇಂದು ಸಾಲು ಸಾಲು ಸಮುದಾಯಗಳು ಮೀಸಲಾತಿಗಾಗಿ ಹೋರಾಡುತ್ತಿರುವುದನ್ನು ನೋಡಿದರೆ ವಿಚಿತ್ರ ಎನಿಸುತ್ತದೆ. ಕೆಲವು ನಾಯಕರು ಭವಿಷ್ಯದಲ್ಲಿ ರಾಜಕೀಯ ನಾಯಕತ್ವಕ್ಕಾಗಿ, ತಮ್ಮ ಸಮುದಾಯದಲ್ಲಿ ಮುಂದಿನ ನಾಯಕ ತಾವೇ ಎಂಬ ತೋರ್ಪಡಿಕೆಗಾಗಿ ಹೋರಾಟಕ್ಕಿಳಿದಿದ್ದಾರೆ ಎನಿಸುತ್ತದೆ. ಸರ್ಕಾರದ ಅಂಗವಾದ ಸಚಿವರೇ ಹೋರಾಟದಲ್ಲಿ ಭಾಗಿಯಾಗಿ ತಮ್ಮ ಸರ್ಕಾರದ ವಿರುದ್ಧವೇ ಪ್ರತಿಭಟಿಸುತ್ತಾರೆ. ಆದರೆ ಸದನದಲ್ಲಿ ಸಮಯ ಮೀಸಲಿಟ್ಟು ಈ ಕುರಿತು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ಮಾತ್ರ ಅವರು ತಯಾರಿಲ್ಲ.

ವಿರೋಧ ಪಕ್ಷಗಳ ನಾಯಕರು ಸಹ ಈ ವಿಷಯದಲ್ಲಿ ರಾಜಕೀಯದ ಆಟ ಆಡುತ್ತಿದ್ದಾರೆ. ಇದನ್ನೆಲ್ಲ ನೋಡಿದರೆ ರಾಜಕೀಯ ಮೇಲಾಟದಂತೆ ಭಾಸವಾಗುತ್ತದೆ. ಜೊತೆಗೆ ಆಯಾ ಸಮುದಾಯಗಳ ಜನರ ಭಾವನೆಗಳ ಜೊತೆ ಇವರೆಲ್ಲ ಚೆಲ್ಲಾಟ ಆಡುತ್ತಿರುವಂತೆ ತೋರುತ್ತದೆ. ಮೀಸಲಾತಿ ಕೊಡುವುದಾದರೆ ಆಯಾ ಸಮುದಾಯಗಳ ಬಡವರಿಗೆ, ಏನೂ ಇಲ್ಲದ ಕೊನೇ ಸ್ತರದ ವ್ಯಕ್ತಿಗೆ ಕೊಡಲಿ. ಕೆಲವೆಡೆ ಮೀಸಲಾತಿ ಪಡೆಯುವ ವ್ಯಕ್ತಿಯ ತಂದೆ ಒಳ್ಳೆಯ ಸರ್ಕಾರಿ ಹುದ್ದೆಯಲ್ಲಿರುತ್ತಾನೆ ಇಲ್ಲವೇ ದೊಡ್ಡ ಪ್ರಮಾಣದ ಆಸ್ತಿಪಾಸ್ತಿಯ ಒಡೆಯನಾಗಿರುತ್ತಾನೆ. ಅಂತಹ ವ್ಯಕ್ತಿಗೂ ಮೀಸಲಾತಿ ನೀಡಿದರೆ, ಅದೇ ಸಮುದಾಯದ ಮತ್ತೊಬ್ಬ ಬಡವನ ಹೊಟ್ಟೆ ಮೇಲೆ ಹೊಡೆದಂತೆ ಆಗುತ್ತದೆ. ಈ ಬಗೆಯ ಮೀಸಲಾತಿ ನಮ್ಮ ಇಂದಿನ ಸಮಾಜಕ್ಕೆ ಬೇಡ. ಶ್ರೀಮಂತರೇ ಮೀಸಲಾತಿ ಪಡೆಯುತ್ತಾ ಹೋದರೆ ಅದೇ ಸಮುದಾಯದ ಬಡವ ಬಡವನಾಗಿಯೇ ಉಳಿಯುತ್ತಾನೆ.

ಗೌತಮ್ ಗೌಡರ, ಬಾಗಲಕೋಟೆ

ವಿಶ್ವರೂಪ

‘ಅಂಜಲಿಗೆ ಭ್ರಷ್ಟಾಚಾರ
‘ವಿರೋಧಿ’ ಚಾಂಪಿಯನ್
ಪ್ರಶಸ್ತಿ’
(ಪ್ರ.ವಾ., ಫೆ. 25).
ಇಂಥ ಪ್ರಶಸ್ತಿ ಅಪರೂಪ;
ಹಾಗೆಯೆ, ‘ಭ್ರಷ್ಟಾಚಾರ
ಚಾಂಪಿಯನ್’
ಪ್ರಶಸ್ತಿ ಸ್ಥಾಪಿಸುವುದಾದರೆ,
ಅದರದು ವಿಶ್ವರೂಪ!
(ಏನೇ ಇರಲಿ, ಅಂಜಲಿಗೆ ನಮ್ಮ
ಗೌರವಾಂಜಲಿ).

ಸಿ.ಪಿ.ಕೆ., ಮೈಸೂರು

ಅಧಿಕಾರಿಗಳಿಗೆ ಬೇಕು ಸಂವಹನ ತರಬೇತಿ

ಮೆಟ್ರೊ ರೈಲು ಪ್ರಯಾಣಿಕರಿಗೆ ಟೋಕನ್ ವಿತರಿಸಲು ಮುಂದಾಗದ ಬೆಂಗಳೂರು ಮೆಟ್ರೊ ರೈಲು ನಿಗಮದ ವಿರುದ್ಧ ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ (ಪ್ರ.ವಾ., ಮಾರ್ಚ್ 4). ಸ್ಮಾರ್ಟ್ ಕಾರ್ಡ್‌ನಲ್ಲಿ ಕನಿಷ್ಠ ₹ 50, ಕಾರ್ಡ್ ಖರೀದಿಸಲು ₹ 50, ಪಾರ್ಕಿಂಗ್ ಶುಲ್ಕ ಇತ್ಯಾದಿಗಳಿಂದಾಗಿ ಈಗಾಗಲೇ ದ್ವಿಚಕ್ರ ವಾಹನ ಪ್ರಯಾಣ ದರ ಹಾಗೂ ಮೆಟ್ರೊ ದರ ಎರಡೂ ಸಮನಾದಂತಿವೆ. ರಸ್ತೆಯ ಮೇಲಿನ ಒತ್ತಡ ಕಡಿಮೆ ಮಾಡಬೇಕು, ಕಡಿಮೆ ಅವಧಿಯಲ್ಲಿ, ಕಡಿಮೆ ಖರ್ಚಿನಲ್ಲಿ ಸುಖಕರ ಪ್ರಯಾಣ ಲಭ್ಯವಾಗಬೇಕು ಎಂಬ ಸದುದ್ದೇಶದಿಂದ ಆರಂಭವಾದ ಮೆಟ್ರೊ ತನ್ನ ಮೂಲ ಉದ್ದೇಶವನ್ನೇ ಮರೆತಂತಿದೆ.

ಟೋಕನ್ ಅವ್ಯವಸ್ಥೆಯ ಕುರಿತು ಮೆಟ್ರೊ ಅಧಿಕಾರಿಗಳು ತಾವೇ ಮುಂದೆ ಬಂದು ಸ್ಪಷ್ಟನೆ ನೀಡಬೇಕು. ತಾವು ಜನಸೇವಕರು ಎಂಬುದನ್ನು ಕೆಲವು ಅಧಿಕಾರಿಗಳು ಮರೆತುಬಿಡುತ್ತಾರೆ. ಸರ್ಕಾರ ಇಂತಹ ಅಧಿಕಾರಿಗಳಿಗೆ ಈ ಕೂಡಲೇ ಸಂವಹನ ತರಬೇತಿ ನೀಡುವುದು ಒಳಿತು.

ಸುಘೋಷ ಸ. ನಿಗಳೆ, ಬೆಂಗಳೂರು

ಕಸ ನಿರ್ವಹಣೆಗೆ ಪ್ರತ್ಯೇಕ ಕಂಪನಿ ತರವಲ್ಲ

ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ಕಸ ನಿರ್ವಹಣೆಗೆ ಪ್ರತ್ಯೇಕ ಕಂಪನಿ ಪ್ರಾರಂಭಿಸಲು ನಿರ್ಧರಿಸಿರುವುದು ಸರಿಯಲ್ಲ. ನಗರದ ಕಸ ನಿರ್ವಹಣೆಯನ್ನೂ ಮಾಡಲಾರದ ಪಾಲಿಕೆ ತನ್ನ ಮೂಲಭೂತ ಜವಾಬ್ದಾರಿಯಿಂದ ನುಣುಚಿಕೊಳ್ಳುವ ತಂತ್ರ ಇದಾಗಿದೆ. ರಾಜ್ಯ ಸರ್ಕಾರ ಇತ್ತೀಚೆಗೆ ಬಿಬಿಎಂಪಿಗೆ ಪ್ರತ್ಯೇಕ ಕಾಯ್ದೆ ರೂಪಿಸಿ ಅದರಲ್ಲಿ ಮಿಷನ್ ಬೆಂಗಳೂರು– 2022 ಹೆಸರಿನಲ್ಲಿ ಬೆಂಗಳೂರಿನ ಕಸ ನಿರ್ವಹಣೆಗೆ ಪ್ರತ್ಯೇಕ ಸಾಂಸ್ಥಿಕ ರೂಪ ನೀಡುವ ಪ್ರಸ್ತಾಪವನ್ನು ಇಟ್ಟಿತ್ತು. ಕಸ ನಿರ್ವಹಣೆಗೆ ಈಗ ವಿಧಿಸುವ ಸೆಸ್ ಜೊತೆ ಮನೆಯ ವಿದ್ಯುತ್ ಮೀಟರ್ ಸಂಖ್ಯೆಯ ಆಧಾರದಲ್ಲಿ ಮೀಟರ್ ಒಂದಕ್ಕೆ ₹ 200 ಶುಲ್ಕ ವಿಧಿಸುವ ಪ್ರಸ್ತಾಪವೂ ಇತ್ತು. ಜನಸಾಮಾನ್ಯರ ಬದುಕಿನ ಕಷ್ಟ ಗೊತ್ತಿರುವ ಹಲವರು ಇದನ್ನು ವಿರೋಧಿಸಿದ್ದರು. ಶುಲ್ಕ ವಿಧಿಸುವುದನ್ನು ತಾತ್ಕಾಲಿಕವಾಗಿ ಮುಂದೂಡುವ ಹೇಳಿಕೆ ಬಂದಿತ್ತು. ಆದರೆ ಈಗಿನ ಪ್ರಸ್ತಾಪ ಮೇಲ್ನೋಟಕ್ಕೆ ಬಹಳ ಆಕರ್ಷಕ ಎನಿಸುತ್ತಿದೆಯಾದರೂ ಬಿಬಿಎಂಪಿಯಿಂದ ಕಂಪನಿಯ ಹಿಡಿತಕ್ಕೆ ಕೊಡುವುದೆಂದರೆ ಜನಸಾಮಾನ್ಯರ ಮೇಲೆ ಹೊರೆ ಹೊರಿಸುವುದೇ ಆಗಿದೆ.


ಅಲ್ಲದೆ ಸಾವಿರಾರು ಪೌರ ಕಾರ್ಮಿಕರ ಬದುಕು ಈಗಲೇ ಅತಂತ್ರ. ಅದು ಮುಂದೆ ಪರತಂತ್ರವಾಗಲಿದೆ ಹಾಗೂ ವಾರ್ಷಿಕ ಸುಮಾರು ಸಾವಿರ ಕೋಟಿಯ ಹತ್ತಿರದ ವಹಿವಾಟಿನ ಕಸ ನಿರ್ವಹಣೆ ಸಂಪೂರ್ಣವಾಗಿ ಖಾಸಗಿಯವರ ಜೇಬು ತುಂಬುವ ವ್ಯವಹಾರವಾಗಲಿದೆ. ಇದರ ವಿರುದ್ಧ ನಾಗರಿಕರು ಮಾತನಾಡಲೇ ಬೇಕು.

ವಿಮಲಾ ಕೆ.ಎಸ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

• ರಾಜೇಶ್ ರೈ ಚಟ್ಲ

‘ಮೀಸಲಾತಿ ಶಿಫಾರಸು ನಮ್ಮದು, ಪ್ರಮಾಣ ಸರ್ಕಾರದ್ದು’



● ರಾಜ್ಯದಲ್ಲಿರುವ ಕೆಲವು ಜಾತಿಗಳು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿಯೂ ಇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಾತಿ ಪಟ್ಟಿಯಲ್ಲಿಯೂ ಇವೆ. ಎರಡೂ ಪಟ್ಟಿಯಲ್ಲಿ ಇರುವುದರಿಂದ ಜಾತಿಪ್ರಮಾಣ ಪತ್ರ ನೀಡಲು ಗೊಂದಲ ಉಂಟಾಗುತ್ತಿರುವ ವಿಷಯ ಆಯೋಗದ ಗಮನಕ್ಕೆ ಬಂದಿದೆಯೇ?

ಒಳ್ಳೆಯ ಪ್ರಶ್ನೆ. ಹೌದು, ಇದು ತುಂಬ ಸೂಕ್ಷ್ಮ, ಅಷ್ಟೇ ಗಂಭೀರ ವಿಷಯ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 10 ಮತ್ತು ಪರಿಶಿಷ್ಟ ಪಂಗಡದಲ್ಲಿರುವ 7 ಜಾತಿಗಳು ರಾಜ್ಯ ಹಿಂದುಳಿದ ವರ್ಗಗಳ ಜಾತಿ (ಒಬಿಸಿ) ಪಟ್ಟಿಯಲ್ಲೂ ಇವೆ. ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ಸ್ಪಷ್ಟನೆ ಬೇಕಾಗಿದೆ. ಹೀಗಾಗಿ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಈ ಬಗ್ಗೆ ಎಸ್‌ಸಿ, ಎಸ್‌ಟಿ ಆರ್ಯೋಗಕ್ಕೂ ಮಾಹಿತಿ ನೀಡಿದ್ದೇವೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರಿಗೂ ಪತ್ರ ಬರೆದಿದ್ದೇವೆ. ಎರಡೂ ಕಡೆ ಇರುವುದರಿಂದ ಜಾತಿ ಪ್ರಮಾಣಪತ್ರ ನೀಡುವ ಸಂದರ್ಭದಲ್ಲಿ ಗೊಂದಲ ಉಂಟಾಗುತ್ತಿದೆ. ಯಾವ ಪಟ್ಟಿಯಿಂದ ತೆಗೆಯಬೇಕು ಎಂದು ಸರ್ಕಾರ ತೀರ್ಮಾನಿಸಬೇಕು. ಎಸ್‌.ಸಿ, ಎಸ್‌.ಟಿ ಪಟ್ಟಿಗೆ ಸೇರಿಸುವ ಬಗ್ಗೆ ಕೇಂದ್ರ ಸರ್ಕಾರ ನಿರ್ಧರಿಸುತ್ತದೆ. ಈ ಜಾತಿಗಳು ಕೇಂದ್ರದ ಪಟ್ಟಿಯಲ್ಲಿ ಸೇರಿವೆ. ಹೀಗಾಗಿ, ಇಲ್ಲಿ ಹಿಂದುಳಿದ ಪಟ್ಟಿಯಲ್ಲಿಯೂ ಮುಂದುವರಿಯಬೇಕೇ ಎಂಬ ಬಗ್ಗೆ ತೀರ್ಮಾನ ಆಗಬೇಕಿದೆ. ಕೆಲವು ಎಸ್‌ಸಿ, ಎಸ್‌ಟಿ ಜಾತಿಗಳು ಕೆಲವು ಜಿಲ್ಲೆಗಳಿಗೆ ಸೀಮಿತವಾಗಿದೆ. ನಾವು ಸಂಪೂರ್ಣ ತೆಗದುಹಾಕಿದರೆ ಮತ್ತೆ ಗೊಂದಲ ಉಂಟಾಗಬಹುದು. ಹೀಗಾಗಿ, ಈ ವಿಷಯದಲ್ಲಿ ಸರ್ಕಾರದ ಮಟ್ಟದಲ್ಲಿ ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕಾಗಿದೆ.

ಪ್ರಜಾವಾಣಿ ಸಂದರ್ಶನ

ಕೆ. ಜಯಪ್ರಕಾಶ್ ಹೆಗ್ಡೆ
ಅಧ್ಯಕ್ಷರು, ರಾಜ್ಯ ಹಿಂದುಳಿದ ವರ್ಗಗಳ ಆಯೋಗ

● **ಅಧಿಕಾರ ಸ್ವೀಕರಿಸಿದ ಆರಂಭದ ದಿನಗಳಿಂದಲೇ ವಿವಿಧ ಸಮುದಾಯಗಳ ‘ಮೀಸಲಾತಿ’ ಬೇಡಿಕೆಯ ಇಕ್ಕಟ್ಟು- ಬಿಕ್ಕಟ್ಟಿನ ಸವಾಲು ನಿಮ್ಮೆದುರಿಗೆ ಬಂದಿದೆ. ನಿಮ್ಮ ಅಭಿಪ್ರಾಯವೇನು?**

ಮೀಸಲಾತಿ ಪಟ್ಟಿಯಲ್ಲಿ ಬದಲಾವಣೆ, ಪ್ರಮಾಣ ಹೆಚ್ಚಳ ಸೇರಿದಂತೆ ಹಲವು ಅಹವಾಲುಗಳನ್ನು ರಾಜ್ಯದ ವಿವಿಧ ಸಮುದಾಯಗಳು ನಮ್ಮ (ಆಯೋಗ) ಮುಂದಿಟ್ಟಿವೆ. ಪಂಚಮಸಾಲಿ ಸಮುದಾಯ ಈ ಹಿಂದೆಯೇ ತಮ್ಮನ್ನು ಪ್ರವರ್ಗ 2ಎಗೆ ಸೇರಿಸುವಂತೆ ಮನವಿ ಸಲ್ಲಿಸಿತ್ತು. ಇದೀಗ, ಈ ಬಗ್ಗೆ ಅಧ್ಯಯನ ಮಾಡಿ ವರದಿ ನೀಡುವಂತೆ ಮುಖ್ಯಮಂತ್ರಿ ಟಿಪ್ಪಣಿ ಮೇಲೆ ಸರ್ಕಾರದಿಂದ ಆದೇಶ ಬಂದಿದೆ. ಆ ನಿರ್ದೇಶನದಂತೆ ಆಯೋಗ ಕ್ರಮ ತೆಗೆದುಕೊಳ್ಳಲಿದೆ.

● **ಪಂಚಮಸಾಲಿ ಸಮುದಾಯದ ಪ್ರಮುಖರಿಂದ ಮಾಹಿತಿ, ದಾಖಲೆಗಳನ್ನು ಆಯೋಗ ಸಂಗ್ರಹಿಸಿದೆಯೇ?**

ಪಂಚಮಸಾಲಿ ಸಮುದಾಯದ ಬಗ್ಗೆ ಅಧ್ಯಯನ ಮಾಡುವಂತೆ ಸರ್ಕಾರದ ಆದೇಶ ಬರುವ ಮೊದಲೇ ಆ ಸಮುದಾಯದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ತಮ್ಮ ಸಮುದಾಯವನ್ನು ಪ್ರವರ್ಗ 2ಎಗೆ ಸೇರಿಸುವಂತೆ ಕೋರಿಕೆ ಸಲ್ಲಿಸಿದ್ದರು. ಹೀಗಾಗಿ, ಸಾರ್ವಜನಿಕ ವಿಚಾರಣೆಗೆ ಬರುವಂತೆ ಫೆ. 12ರಂದೇ ಸ್ವಾಮೀಜಿಯವರನ್ನು ಆಹ್ವಾನಿಸಿದ್ದೆವು. ಆದರೆ, ಅವರು ಬೇಡಿಕೆ ಮುಂದಿಟ್ಟು ಪಾದಯಾತ್ರೆಯಲ್ಲಿ ಇದ್ದುದರಿಂದ ವಿಚಾರಣೆಗೆ ಬಂದಿಲ್ಲ. ಹೀಗಾಗಿ, ಶೀಘ್ರದಲ್ಲಿಯೇ ಮತ್ತೊಂದು ದಿನ ನಿಗದಿಪಡಿಸಿ ಅವರ ಅಹವಾಲು ಆಲಿಸುತ್ತೇವೆ. ಬಳಿಕ ಅಧ್ಯಯನ ನಡೆಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

● **ಪಂಚಮಸಾಲಿಗಳ ಬೆನ್ನಲ್ಲೇ ಒಕ್ಕಲಿಗ ಸಮುದಾಯ ಕೂಡಾ ಮೀಸಲಾತಿ ಹೆಚ್ಚಳಕ್ಕೆ ಬೇಡಿಕೆ ಇಟ್ಟಿದೆ. ಜೊತೆಗೆ, 110 ಉಪ ಪಂಗಡಗಳನ್ನು ಕೇಂದ್ರದ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಗೆ ಸೇರಿಸುವಂತೆ ಒತ್ತಾಯಿಸುತ್ತಿದೆಯಲ್ಲ?**

ಹೌದು, ಒಕ್ಕಲಿಗ ಸಮುದಾಯ ಕೂಡಾ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕೆಂದು ಬೇಡಿಕೆ ಮಂದಿಟ್ಟದೆ. ಹೆಚ್ಚಿಸುವ ಬಗ್ಗೆ ಸರ್ಕಾರ ತೀರ್ಮಾನಿಸಬೇಕು. ಆ ಸಮುದಾಯದ 115 ಉಪ ಪಂಗಡಗಳ ಪೈಕಿ ಐದು ಈಗಾಗಲೇ ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಸೇರಿವೆ. ಉಳಿದ, ಎಲ್ಲ ಉಪ ಪಂಗಡಗಳನ್ನೂ ಸೇರಿಸಬೇಕು ಎನ್ನುವುದು ಬೇಡಿಕೆ. ಈ ವಿಷಯದಲ್ಲಿ ಕೇಂದ್ರಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡಬೇಕು.

● **ವೀರಶೈವ ಲಿಂಗಾಯತ ಸಮುದಾಯದ ಬಗ್ಗೆಯೂ ಅಧ್ಯಯನ ನಡೆಸುವಂತೆ ಸರ್ಕಾರದಿಂದ ಆಯೋಗಕ್ಕೆ ಸೂಚನೆ ಬಂದಿದೆಯಂತೆ, ಹೌದೇ?**

ಇಲ್ಲ. ಅಧ್ಯಯನ ನಡೆಸುವಂತೆ ಸರ್ಕಾರದಿಂದ ಈ ಕ್ಷಣದವರೆಗೂ ಯಾವುದೇ ಆದೇಶ ಬಂದಿಲ್ಲ. ಆದರೆ, ಆ ಸಮುದಾಯದವರೂ ಮನವಿ ಸಲ್ಲಿಸಿದ್ದಾರೆ. ಅವರನ್ನೂ ಸಾರ್ವಜನಿಕ ವಿಚಾರಣೆಗೆ ಆಹ್ವಾನಿಸುತ್ತೇವೆ.

● **ಮೀಸಲಾತಿ ಪ್ರಮಾಣ ಶೇ 50 ಮೀರಬಾರದೆಂದು ಸುಪ್ರೀಂ ಕೋರ್ಟ್ ಆದೇಶವಿದೆ. ಮೀಸಲಾತಿ ಹೆಚ್ಚಿಸುವಂತೆ ಬೇಡಿಕೆ ಮುಂದಿಟ್ಟಿರುವ ಸಮುದಾಯಗಳ ಬೇಡಿಕೆಗೆ ಪರಿಹಾರ ಹೇಗೆ?**

ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ ಅಧ್ಯಯನ ಮಾಡಿ ಯಾರಿಗೆ ಮೀಸಲಾತಿ ಕೊಡಬೇಕು, ಯಾರಿಗೆ ಕೊಡಬಾರದು ಎಂದು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡುವುದಷ್ಟೆ ನಮ್ಮ ಕೆಲಸ. ಎಷ್ಟು ಪ್ರಮಾಣದಲ್ಲಿ ಕೊಡಬೇಕು ಎಂದು ಸರ್ಕಾರ ತೀರ್ಮಾನಿಸುತ್ತದೆ. ಇದೀಗ ಕೆಲವು ಸಮುದಾಯಗಳು ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ಸರ್ಕಾರದ ಮುಂದೆ ಬೇಡಿಕೆ ಇಟ್ಟಿವೆ. ಮೀಸಲಾತಿ ಪ್ರಮಾಣದ ಹೆಚ್ಚಳಕ್ಕೆ ಇಟ್ಟಿರುವ ಬೇಡಿಕೆಗಳ ಬಗ್ಗೆ ಪರಿಶೀಲಿಸಿ ವರದಿ ನೀಡಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತ್ರಿಸದಸ್ಯ ಸಮಿತಿ ರಚಿಸಲು ಸಚಿವ ಸಂಪುಟ ಸಭೆಯಲ್ಲಿ ಸರ್ಕಾರ ತೀರ್ಮಾನಿಸಿದೆ.

● **ಮೀಸಲಾತಿ ವ್ಯಾಪ್ತಿಯ ಒಳಗೆ ಬರಲು ಏನು ಮಾಡಬೇಕು?**

ಯಾವುದೇ ಸಮುದಾಯ ಆಯೋಗಕ್ಕೆ ಬಂದು ಅಹವಾಲು ಸಲ್ಲಿಸಿದರೆ, ಆ ಬಗ್ಗೆ ನಮ್ಮ ಸಭೆಯಲ್ಲಿ ಪರಿಶೀಲಿಸುತ್ತೇವೆ. ಬಳಿಕ, ಸಾರ್ವಜನಿಕ ವಿಚಾರಣೆಗೆ ದಿನ ನಿಗದಿಪಡಿಸಿ, ಸೂಕ್ತ ದಾಖಲೆಗಳನ್ನು ಸಲ್ಲಿಸಲು ಅವಕಾಶ ಕೊಡುತ್ತೇವೆ. ಮೀಸಲಾತಿ ಬೇಡಿಕೆ ವಿರೋಧಿಸುವವರ ಅಹವಾಲನ್ನೂ ಆಲಿಸುತ್ತೇವೆ. ಅದಕ್ಕೂ ದಾಖಲೆ ಪಡೆಯುತ್ತೇವೆ. ಆ ನಂತರ ಅಧ್ಯಯನ ಕೈಗೊಳ್ಳುವ ಬಗ್ಗೆ ತೀರ್ಮಾನಕ್ಕೆ ಬರುತ್ತೇವೆ.

● **ಮೀಸಲಾತಿ ನಿರ್ಣಯಿಸುವಲ್ಲಿ ಆಯೋಗದ ಪಾತ್ರವೇನು?**

ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿ ಆಧಾರದಲ್ಲಿ ಸಮುದಾಯ ಮೀಸಲಾತಿಗೆ ಅರ್ಹವೇ, ಮೀಸಲಾತಿ ಬೇಡುವ ಸಮುದಾಯ ರಾಜ್ಯದ ಯಾವೆಲ್ಲ ಭಾಗದಲ್ಲಿದೆ, ಯಾವ ಸ್ಥಾನಮಾನ ಹೊಂದಿದೆ ಎನ್ನುವುದು ಮುಖ್ಯವಾಗುತ್ತದೆ. ಆ ಕುರಿತು ಸಮಗ್ರ ವರದಿಯನ್ನು ಸಂಗ್ರಹಿಸಿ, ಅಧ್ಯಯನ ವರದಿಯನ್ನು ಸರ್ಕಾರಕ್ಕೆ ಕೊಡುತ್ತೇವೆ. ಮೀಸಲಾತಿ ಬಗ್ಗೆ ಶಿಫಾರಸು ಮಾಡುತ್ತೇವೆ. ರಾಜ್ಯ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು.

● **ಈಗಾಗಲೇ ರಾಜ್ಯದಲ್ಲಿ ನಡೆದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವರದಿ ನಿಮ್ಮ ಬಳಿಯೇ ಇದೆಯಲ್ಲವೇ?**

ಆಯೋಗದ ಹಿಂದಿನ ಅವಧಿಯಲ್ಲಿ ನಡೆಸಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವರದಿ ನಮ್ಮಲ್ಲಿದೆ ನಿಜ. ಆದರೆ, ಆ ವರದಿಯ ವಿಚಾರ ಹೈಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿದೆ.

● **ಹಾಗಿದ್ದರೆ, ಮೀಸಲಾತಿಗಾಗಿ ಬೇಡಿಕೆ ಮುಂದಿಟ್ಟ ಎಲ್ಲ ಸಣ್ಣಪುಟ್ಟ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನವನ್ನು ಆಯೋಗ ಕೈಗೊಳ್ಳುವುದೇ?**

ಯಾರು, ಯಾರು ಬೇಡಿಕೆ ಇಡುತ್ತಾರೊ ಅವರಿಂದ ಮೊದಲು ಸಾರ್ವಜನಿಕ ಅಹವಾಲು ಸ್ವೀಕರಿಸಲಾಗುತ್ತದೆ. ಪೂರಕ ದಾಖಲೆಗಳನ್ನೂ ಪಡೆಯಲಾಗುತ್ತದೆ. ಬಳಿಕ, ಅಗತ್ಯಬಿದ್ದರೆ ಮಾತ್ರ ಕುಲಶಾಸ್ತ್ರೀಯ ಅಧ್ಯಯನಕ್ಕೆ ತೀರ್ಮಾನಿಸಲಾಗುತ್ತದೆ. ಈಗಾಗಲೇ ಕೆಲವು ಸಣ್ಣಪುಟ್ಟ ಜಾತಿಗಳೂ ಮೀಸಲಾತಿ ಬೇಡಿಕೆ ಇಟ್ಟಿವೆ.

● **ಕುಲಶಾಸ್ತ್ರೀಯ ಅಧ್ಯಯನ ಬಗ್ಗೆ ರಾಜ್ಯ ಸರ್ಕಾರದ ಅನುಮೋದನೆ ಅಗತ್ಯ ಇಲ್ಲ. ಆಯೋಗವೇ ಸ್ವಯಂ ನಿರ್ಧಾರ ತೆಗೆದುಕೊಳ್ಳಬಹುದೇ?**

ಖಂಡಿತ. ಆಯೋಗ ಸ್ವಾಯತ್ತ ಸಂಸ್ಥೆ. ಯಾವುದೇ ತೀರ್ಮಾನಗಳನ್ನು ಸ್ವಯಂಪ್ರೇರಿತವಾಗಿ ತೆಗೆದುಕೊಳ್ಳಲು ಅವಕಾಶವಿದೆ. ಜೊತೆಗೆ, ಸರ್ಕಾರದ ಸೂಚನೆಯಂತೆಯೂ ಅಧ್ಯಯನ ಕೈಗೊಂಡು ಸರ್ಕಾರಕ್ಕೆ ವರದಿ ನೀಡುತ್ತೇವೆ.

● **ಹಿಂದಿನ ಆಯೋಗ ನಡೆಸಿದ, ಭಾರಿ ಕುತೂಹಲ ಸೃಷ್ಟಿಸಿರುವ ಜಾತಿಗಣತಿ ಎಂದೇ ಬಿಂಬಿತವಾದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ಕಥೆ ಏನು?**

ಅದಕ್ಕೆ ತಾರ್ಕಿಕ ಅಂತ್ಯ ಕಂಡುಕೊಳ್ಳಬೇಕಿದೆ. ‘ಜಾತಿ ಗಣತಿಯನ್ನು ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲ. ಈ ರೀತಿ ಸಮೀಕ್ಷೆಯನ್ನೇ ಮಾಡಬಾರದು’ ಎಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ನಾವು ಪ್ರತಿವಾದಿಗಳು. ನಾವು ಮಾಡಿರುವುದು ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯೇ ಹೊರತು, ಜಾತಿ ಗಣತಿ ಅಲ್ಲ ಎಂದು ವಾದ ಮಂಡಿಸಿದ್ದೇವೆ. ಆ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಮತ್ತೆ ಮಾರ್ಚ್ 17ಕ್ಕೆ ವಿಚಾರಣೆ ನಡೆಯಲಿದೆ. ಹೈಕೋರ್ಟ್ ತೀರ್ಪು ನೋಡಿಕೊಂಡು ಕಾನೂನಿನ ಪ್ರಕಾರ ಮುಂದಿನ ನಡೆ ತೀರ್ಮಾನಿಸುತ್ತೇವೆ.

● **ಆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಮೊದಲು ಅದನ್ನು ಪರಾಮರ್ಶಿಸಲು ನಿಮ್ಮ ಅಧ್ಯಕ್ಷತೆಯ ಆಯೋಗಕ್ಕೆ ಅವಕಾಶ ಇದೆಯೇ?**

ಹಿಂದಿನ ಆಯೋಗ, ತನ್ನ ಅವಧಿ ಮುಗಿದ ಬಳಿಕ ಆಯೋಗದ ಸದಸ್ಯ ಕಾರ್ಯದರ್ಶಿಗೆ ವರದಿಯನ್ನು ಹಸ್ತಾಂತರಿಸಿದೆ. ನಾವಿನ್ನೂ ಆ ವರದಿಯನ್ನು ತೆರೆದಿಲ್ಲ. ಹೈಕೋರ್ಟ್ ತೀರ್ಪು ಬಂದ ನಂತರ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

● **ಈ ವಿಷಯದಲ್ಲಿ ನಿಮ್ಮ ಅಂದರೆ, ಆಯೋಗದ ನಿಲುವು ಏನು?**

ಹೈಕೋರ್ಟ್ ಏನು ತೀರ್ಪು ನೀಡುತ್ತದೆ ನೋಡೋಣ. ನಂತರ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ. ಆದರೆ, ಅದಕ್ಕೊಂದು ತಾರ್ಕಿಕ ಅಂತ್ಯ ಕಾಣಿಸಬೇಕಿದೆ.

● **ಕುಂಚಿಟಿಗ ಸಮುದಾಯವನ್ನು ಕುಲಶಾಸ್ತ್ರೀಯ ಅಧ್ಯಯನದ ಶಿಫಾರಸಿನಂತೆ ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಬೇಕೆಂದು ಸರ್ಕಾರ ಮಾಡಿದ ಶಿಫಾರಸು ವಾಪಸು ಬಂದಿದೆಯಂತೆ. ಹೌದೇ?**

ನಿಜ. ಸರ್ಕಾರ ನೇರವಾಗಿ ಅದನ್ನು ಕೇಂದ್ರಕ್ಕೆ ಕಳುಹಿಸಿತ್ತು. ರಾಜ್ಯ ಸರ್ಕಾರವು ರಾಜ್ಯ ಹಿಂದುಳಿದ ಆಯೋಗದ ಮೂಲಕ ಕೇಂದ್ರದ ಹಿಂದುಳಿದ ವರ್ಗಗಳ ಆಯೋಗಕ್ಕೆ ಕುಲಶಾಸ್ತ್ರೀಯ ಅಧ್ಯಯನ ವರದಿಯಲ್ಲಿನ ಶಿಫಾರಸುಗಳ ಸಮೇತ ಕಳುಹಿಸಬೇಕಿತ್ತು.

● **ಅಧಿಕಾರ ಸ್ವೀಕರಿಸಿದ ಮೂರು ತಿಂಗಳಲ್ಲಿ ಆಯೋಗ ಏನೇನು ಮಾಡಿದೆ?**

ನಿರಂತರ ಸಭೆಗಳನ್ನು ಮಾಡುತ್ತಿದ್ದೇವೆ. ಜಾತಿಗಳಿಗೆ ಸಂಬಂಧಿಸಿದ 44 ಪ್ರಕರಣಗಳನ್ನು ಫೆ. 12, 13, 14ರಂದು ನಡೆಸಿದ ಸಾರ್ವಜನಿಕ ವಿಚಾರಣೆಗಳಲ್ಲಿ ಇತ್ಯರ್ಥ ಪಡಿಸಿದ್ದೇವೆ. ಹಲವು ಸಾರ್ವಜನಿಕ ವಿಚಾರಣೆಗಳನ್ನು ನಡೆಸಿದ್ದೇವೆ. ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ, ಮೊರಾರ್ಜಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದೇವೆ. ಹಿಂದುಳಿದ ಸಮುದಾಯದ ಯೋಜನೆಗಳು, ಸೌಲಭ್ಯಗಳು ಸಮರ್ಪಕವಾಗಿ ಅನುಷ್ಠಾನವಾಗಿದೆಯೇ ಎಂದು ಪರಿಶೀಲಿಸುವುದೂ ನಮ್ಮ ಕರ್ತವ್ಯ.

● **ಕೇಂದ್ರದ ಮೀಸಲು ಪಟ್ಟಿಯ ಹಿಂದುಳಿದ ವರ್ಗಗಳಲ್ಲಿರುವ (ಒಬಿಸಿ) ಎಲ್ಲ ಜಾತಿ, ಉಪಜಾತಿಗಳನ್ನು ವೈಜ್ಞಾನಿಕವಾಗಿ ವರ್ಗೀಕರಿಸಲು ಕೇಂದ್ರ ಸರ್ಕಾರ ರಚಿಸಿದ ನ್ಯಾ.ಜಿ. ರೋಹಿಣಿ ಆಯೋಗ ಏನಾದರೂ ಸ್ಪಷ್ಟೀಕರಣ ಕೇಳಿದೆಯೇ?**

ಕೇಂದ್ರ ಒಬಿಸಿ ಮತ್ತು ರಾಜ್ಯದಲ್ಲಿರುವ ಒಬಿಸಿ ಪಟ್ಟಿಯಲ್ಲಿರುವ ಜಾತಿಗಳನ್ನು ಪರಿಶೀಲಿಸಿರುವ ನ್ಯಾ. ರೋಹಿಣಿ ಆಯೋಗ 156 ಪ್ರಶ್ನೆ ಮತ್ತು ಸ್ಪಷ್ಟನೆಗಳನ್ನು ಕೇಳಿದೆ. ಕೆಲವು ಜಾತಿಗಳು ಬೇರೆ ಬೇರೆ ಕೆಟಗರಿಯಲ್ಲಿವೆ. ಇನ್ನೂ ಕೆಲವು ಜಾತಿಗಳ ಪದಗಳು ವ್ಯತ್ಯಾಸವಿದೆ. ಹೆಸರುಗಳು ಹೊಂದಾಣಿಕೆ ಆಗುತ್ತಿಲ್ಲ, ಅವುಗಳ ಬಗ್ಗೆ ವಿವರಣೆ ಕೇಳಿದೆ. ಈಗಾಗಲೇ ಈ ಬಗ್ಗೆ ಚರ್ಚೆ ನಡೆಸಿದ್ದೇವೆ. ಶೀಘ್ರದಲ್ಲಿಯೇ ಕೇಂದ್ರಕ್ಕೆ ವಿವರಣೆ ಕೊಡುತ್ತೇವೆ.

● **ಒಟ್ಟಿನಲ್ಲಿ ಸಾಲು ಸಾಲು ಸವಾಲುಗಳ ನಡುವೆ ಇದ್ದೀರಿ ಎಂದಾಯಿತು...**

ದೊಡ್ಡ ಸವಾಲುಗಳಿವೆ ನಿಜ. ಸವಾಲುಗಳು ಇದ್ದಾಗಲೇ ಹೆಚ್ಚು ಕೆಲಸ ಮಾಡಲು ಸಾಧ್ಯವಾಗುತ್ತದೆ ಎನ್ನುವುದು ನನ್ನ ನಂಬಿಕೆ. ಯಾವುದೇ ಸಮಸ್ಯೆಗೂ ಪರಿಹಾರ ಇದೆ. ಆದರೆ, ಅದಕ್ಕೆ ಸರಿಯಾದ ಪರಿಹಾರ ಕಂಡುಹಿಡಿಯಬೇಕಾಗುತ್ತದೆ ಅಷ್ಟೆ, ಎಲ್ಲ ಸವಾಲುಗಳನ್ನು ಮೀರಿ ನಿಲ್ಲುವ ವಿಶ್ವಾಸವಿದೆ.

ಮೀಸಲಾತಿಗೆ ಕುತ್ತು



ಪ್ರಜಾವಾಣಿ ಮಾರ್ಚ್ 1ರ ಸಂಚಿಕೆಯ ಅನುಭವ ಮಂಟಪದ ‘ಮೀಸಲಾತಿ, ಹೋರಾಟವಲ್ಲ ಧಮ್ಕಿ’ ಎಂಬ ಲೇಖನದಲ್ಲಿ ಜೆ. ಶ್ರೀನಿವಾಸನ್ ಅವರು ಮೀಸಲಾತಿ ಹೋರಾಟದ ಹಿಂದಿನ ಹುನ್ನಾರಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಈ ಮೂಲಕ ವಾಸ್ತವಕ್ಕೆ ಕನ್ನಡಿ ಹಿಡಿದಿದ್ದಾರೆ.

ಸಮಾಜದ ಅವಕಾಶ ವಂಚಿತ ಸಮುದಾಯಗಳ ಉನ್ನತಿಗಾಗಿ ಅಸ್ತಿತ್ವಕ್ಕೆ ಬಂದ ಮೀಸಲು ವ್ಯವಸ್ಥೆ ರಾಜಕೀಯ ಅಸ್ತ್ರವಾಗಿ ಪರಿಣಮಿಸಿದೆ. ಸಾಮಾಜಿಕ ಅಸಮಾನತೆಯ ನಿವಾರಣೆಗಾಗಿ ಜಾರಿಗೆ ಬಂದ ಮೀಸಲಾತಿ ಈಗ ಮಠಾಧೀಶರ ಹೋರಾಟದ ಪರಿಣಾಮ ಇನ್ನಷ್ಟು ರಾಜಕೀಯ ಬಣ್ಣ ಪಡೆದುಕೊಂಡಿದೆ. ಮೇಲ್ನೋಟಕ್ಕೆ ಇದು ಮೀಸಲು ಬೇಡಿಕೆಯ ಹೋರಾಟವಾದರೂ ಒಳಸುಳಿಗಳಲ್ಲಿ ರಾಜಕೀಯವಿದೆ. ಸಮಾಜದಲ್ಲಿ ಸಾಕಷ್ಟು ಮಾನ್ಯತೆ ಪಡೆದಿರುವ ಪಂಚಮಸಾಲಿ ಸಮುದಾಯವು ಪ್ರವರ್ಗ 2ಎ ಅಡಿಯಲ್ಲಿ ಮೀಸಲಾತಿ ಕೇಳುತ್ತಿದ್ದರೆ, 2ಎ ಪ್ರವರ್ಗದ ಮೀಸಲಾತಿಯಲ್ಲಿ ಸಾಕಷ್ಟು ಲಾಭ ಪಡೆದಿರುವ ಕುರುಬರು ಪರಿಶಿಷ್ಟ ವರ್ಗದ ಮಾನ್ಯತೆ ಕೇಳುತ್ತಿದ್ದಾರೆ. ಮೀಸಲಾತಿ ಬೇಕು ಎನ್ನುವ ಪಟ್ಟಿಗೆ ವೈಶ್ಯ, ಒಕ್ಕಲಿಗ ಸೇರಿ ಬಹುತೇಕ ಎಲ್ಲಾ ಮುಂದುವರಿದ ಜಾತಿಗಳು ಸೇರಿವೆ; ಹೋರಾಟಕ್ಕೆ ಮುಂದಾಗಿವೆ. ಈ ಎಲ್ಲಾ ಸಮುದಾಯಗಳ ಕಣ್ಣು ಪ್ರವರ್ಗ 2ಎ ಮೇಲಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ಒಂದಕ್ಕಿಂತ ಕಡಿಮೆಯಿರುವ ನೂರಕ್ಕೂ ಹೆಚ್ಚು ಜಾತಿಗಳು ಈ ಪ್ರವರ್ಗದಲ್ಲಿ ಇವೆ. ಈ ಜಾತಿಗಳ ಪಾಲು ಕಸಿಯಲು ಪ್ರಯತ್ನ ನಡೆದಿದೆ ಎಂಬ ಆತಂಕವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಇದು ಮೇಲ್ನೋಟಕ್ಕೆ ಕಾಣುವ ಸತ್ಯ. ಆದರೆ ಇದರ ಹಿಂದೆ ಬೇರೆಯೇ ಹುನ್ನಾರವಿದೆ; ಈ ಹೋರಾಟಗಳ ಹಿಂದಿರುವ ಪ್ರಮುಖ ನಾಯಕರು ಸಂಘ ಪರಿವಾರದ ಹಿನ್ನೆಲೆಯುಳ್ಳವರು. ಮೀಸಲಾತಿ ಕುರಿತಂತೆ ಸಂಘ ಪರಿವಾರದ ನಿಲುವು ಕಾಲಕಾಲಕ್ಕೆ ಪ್ರಕಟವಾಗುತ್ತಲೇ ಸಾಗಿದೆ. 1981ರಲ್ಲಿ ನಡೆದ ಅರ್‌ಎಸ್‌ಎಸ್ ಪ್ರತಿನಿಧಿ ಸಭಾದಲ್ಲಿ ಮೀಸಲಾತಿ ಪುನರ್ ವಿಮರ್ಶೆ ಆಗಬೇಕೆಂಬ ನಿರ್ಣಯ ಕೈಗೊಳ್ಳಲಾಗಿತ್ತು. ಸರಸಂಘಚಾಲಕರಂತೂ ಹಲವು ಬಾರಿ ಈ ಬಗ್ಗೆ ಆಗ್ರಹ ಮಂಡಿಸಿದ್ದಾರೆ. ಈಗ ಎಲ್ಲಾ ಸಮುದಾಯಗಳ ಬೇಡಿಕೆ ಗಮನಿಸಿ ಸರ್ಕಾರ ಪುನರ್ ವಿಮರ್ಶೆಯ ತೀರ್ಮಾನ ಕೈಗೊಳ್ಳುವ ಸಾಧ್ಯತೆ ತಳ್ಳಿಹಾಕುವಂತಿಲ್ಲ. ಏಕೆಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೇಲೆ ಸಂಘ ಪರಿವಾರ ಹೊಂದಿರುವ ಹಿಡಿತವನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಇಂತಹ ತೀರ್ಮಾನ ಕೈಗೊಂಡು ಪುನರ್ ವಿಮರ್ಶೆಗೆ ತಜ್ಞರ ಸಮಿತಿ ರಚಿಸಿ, ಈ ಸಮಿತಿ ವರದಿ ನೀಡುವವರೆಗೆ ಮೀಸಲಾತಿ ಅಮಾನತಿನಲ್ಲಿಡುವ ನಿರ್ಧಾರ ಹೊರಬಿದ್ದರೂ ಅಚ್ಚರಿಯಿಲ್ಲ.

ಅತ್ಯಂತ ಹಿಂದುಳಿದ ಸಮುದಾಯಗಳಿಗೆ ಮೀಸಲು ಇನ್ನೂ ಕನಸಿನ ಗಂಟಾಗಿದೆ. ಧ್ವನಿಯಿಲ್ಲದವರನ್ನು ತುಳಿಯುವ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯ ಎಂಬುದು ಅರ್ಥ ಕಳೆದುಕೊಂಡಿದೆ. ಈ ಧ್ವನಿಯಿಲ್ಲದ ಸಮುದಾಯಗಳ ಮತದಾರರ ಸಂಖ್ಯೆ ಅತ್ಯಂತ ಕಡಿಮೆ. ಇವುಗಳ ಬಗ್ಗೆ ಮತಬ್ಯಾಂಕ್ ರಾಜಕಾರಣ ನಂಬಿಕೊಂಡಿರುವ ಆಡಳಿತ ಪಕ್ಷ ತಲೆಕೆಡಿಸಿಕೊಳ್ಳುವುದಿಲ್ಲ. ಹೀಗಾಗಿ, ಬಹುಸಂಖ್ಯಾತರ ಓಲೈಕೆಯ ತೀರ್ಮಾನ ಹೊರಬೀಳಬಹುದು. ಇದನ್ನು ಹೋರಾಟ ಬೆಂಬಲಿಸುವ ಎಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ.

ಆರು ಸಲ ಕುಲಶಾಸ್ತ್ರೀಯ ಅಧ್ಯಯನ ನಡೆದು ಲಿಂಗಾಯತ ಸಮುದಾಯವನ್ನು ಮೀಸಲು ವ್ಯವಸ್ಥೆಯಿಂದ ಹೊರಗಿಡಲಾಗಿದೆ. ಮಿಲ್ಲರ್ ಆಯೋಗ, ನಾಗನಗೌಡ ಆಯೋಗ, ವೆಂಕಟಸ್ವಾಮಿ ಆಯೋಗ ಇದನ್ನೇ ಹೇಳಿವೆ. ಆದರೆ, ಹಾವನೂರು ಆಯೋಗ ಮಾತ್ರ ಲಿಂಗಾಯತ ಸಮುದಾಯದಲ್ಲೂ ಸಾಮಾಜಿಕವಾಗಿ ಹಿಂದುಳಿದವರಿದ್ದಾರೆಂದು ಗುರುತಿಸಿ ಆ ಸಮುದಾಯದ ಕೆಲ ಕಾಯಕಜೀವಿ ಜನ ವಿಭಾಗಗಳಿಗೆ ಮೀಸಲು ವ್ಯವಸ್ಥೆ ನೀಡಲು ಶಿಪಾರಸು ಮಾಡಿದೆ. ಮೀಸಲಾತಿಯಿಂದ ಶಿಕ್ಷಣ ಮತ್ತು ಸರ್ಕಾರಿ ನೌಕರಿ ಸಿಗುತ್ತದೆ ಎಂಬುದು ಸಾರ್ವತ್ರಿಕವಾದ ಅಭಿಪ್ರಾಯ. ಆದರೆ, ಸರ್ಕಾರದ ನೀತಿಯಿಂದಾಗಿ ಈ ಸಾಧ್ಯತೆಗಳು ಕಮರುತ್ತಾ ಸಾಗಿವೆ. ಅತಿ ಹೆಚ್ಚು ಉದ್ಯೋಗ ಅವಕಾಶಗಳಿರುವ ಬ್ಯಾಂಕಿಂಗ್, ವಿಮೆ, ರೈಲ್ವೆ ಮೊದಲಾದ ವಲಯಗಳು ಖಾಸಗೀಕರಣಗೊಳ್ಳುತ್ತಿವೆ. ಹೀಗಾದರೆ, ಮೀಸಲಾತಿಯ ಆಶಯವೇ ಮರೆಯಾಗುತ್ತದೆ. ಖಾಲಿಯಿರುವ ಹುದ್ದೆಗಳನ್ನು ತುಂಬುವುದನ್ನು ಮಿತವ್ಯಯದ ಕಾರಣ ಹೇಳಿ ಸ್ಥಗಿತಗೊಳಿಸಲಾಗಿದೆ. ಹೊರಗುತ್ತಿಗೆಯ ಮೇಲೆಯೇ ಸರ್ಕಾರಿ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಇಂಥ ಸನ್ನಿವೇಶದಲ್ಲಿ ಯಾವುದೇ ಸಮುದಾಯಕ್ಕೆ ಮೀಸಲು ನೀಡಿದರೂ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಈ ಬಗ್ಗೆ ಮೀಸಲಾತಿಗಾಗಿ ಧ್ವನಿ ಎತ್ತುತ್ತಿರುವರು ಯೋಚಿಸಬೇಕಾಗಿದೆ.

ಖಾಸಗೀಕರಣದ ಹೊಡೆತಕ್ಕೆ ಸಿಕ್ಕು ತತ್ತರಿಸಿರುವ ಮೀಸಲು ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಚಿಂತನೆ ನಡೆಯಬೇಕಾಗಿದೆ. ಅದಕ್ಕಾಗಿ ನಮ್ಮ ಎಲ್ಲ ಸಮುದಾಯಗಳು ಖಾಸಗೀಕರಣದ ವಿರುದ್ಧ ಮೊದಲು ಧ್ವನಿಯೆತ್ತಬೇಕಾಗಿದೆ. ಇಲ್ಲವೇ ಖಾಸಗಿ ವಲಯದಲ್ಲಿ ಮೀಸಲಾತಿಗೆ ಆಗ್ರಹಿಸಿ ದೊಡ್ಡ ಮಟ್ಟದ ಹೋರಾಟ ಸಂಘಟಿಸಬೇಕಿದೆ. ಇಲ್ಲವಾದರೆ ಮೀಸಲಾತಿಯ ಸ್ವರೂಪವೇ ನಶಿಸಿಹೋಗುವ ಅಪಾಯವಿದೆ.

ಆರ್.ಎಚ್. ನಟರಾಜ್, ಬೆಂಗಳೂರು

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಅಗತ್ಯವಸ್ತುಗಳ ಬೆಲೆ ಏರಿಕೆಯಾಗಿದೆ ಎಂಬ ಕೂಗು ದೇಶದಾದ್ಯಂತ ಎದ್ದಿದೆ. ಆದರೆ 2014ರ ಯುಪಿಎ ಸರ್ಕಾರದ ಅವಧಿಗೆ ಹೋಲಿಸಿದರೆ, 2021ರಲ್ಲಿ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಬೆಲೆ ಕಡಿಮೆಯಿದೆ ಎಂದು ಹೇಳುವ ಕೆಲವು ಸಂದೇಶಗಳು ಟ್ವಿಟರ್‌ನಲ್ಲಿ ಹರಿದಾಡುತ್ತಿವೆ. 2014ರಲ್ಲಿ ₹210 ಇದ್ದ ತೊಗರಿಬೇಳೆ ಬೆಲೆ 2021ರಲ್ಲಿ ₹91ಕ್ಕೆ ಇಳಿಕೆಯಾಗಿದೆ ಎಂಬ ಸಂದೇಶವೂ ಅವುಗಳಲ್ಲಿ ಒಂದು.



ದೇಶದಾದ್ಯಂತ 22 ಅಗತ್ಯ ಆಹಾರ ಪದಾರ್ಥಗಳ ಚಿಲ್ಲರೆ ಮತ್ತು ಸಗಟು ಬೆಲೆಗಳನ್ನು ‘ಬೆಲೆ ನಿಗಾ ವಿಭಾಗ’ (ಪಿಎಂಡಿ) ದಾಖಲಿಸುತ್ತದೆ. ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆಯು ಪಿಎಂಡಿ 2014 ಹಾಗೂ 2021ರಲ್ಲಿ ದಾಖಲಿಸಿದ ಬೆಲೆಗಳನ್ನು ಹೋಲಿಕೆ ಮಾಡಿ ನೋಡಿದೆ. ಅದರ ಪ್ರಕಾರ, 2014ಕ್ಕಿಂತ 2021ರಲ್ಲಿ ಅಗತ್ಯ ವಸ್ತುಗಳ ಬೆಲೆಯಲ್ಲಿ ಏರಿಕೆ ಕಂಡುಬಂದಿದೆ. ತೊಗರಿ ಬೇಳೆ ದರ 2014ರಲ್ಲಿ ₹75.83 ಇದ್ದರೆ, ಅದು 2021ರಲ್ಲಿ ₹104.06 ಆಗಿದೆ ಎಂದು ತಿಳಿಸಿದೆ. ಹೋಲಿಕೆ ಮಾಡಲಾದ ಪಟ್ಟಿಯನ್ನೂ ನೀಡಿದೆ.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ 5 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪೂರ್ವಾಭಾದ್ರ ಸಪ್ತಮಿ ಗಂ.42-30 (ರಾ. 11-40) ಶುಕ್ರವಾರ ನಿತ್ಯ ನಕ್ಷತ್ರ ಅನುರಾಧಾ ಗಂ. 48-55 (ರಾ. 2-14) ಹರ್ಷ ನಾಮ ಯೋಗ ಗಂ. 44-1 ಭದ್ರೆ ಕರಣ ಗಂ. 15-25 ವಿಷ. ಗಂ. 2-16 ಅಮೃತ ಗಂ. 24-41: ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-39 ಸೂರ್ಯಾಸ್ತ: 6-25 ಅದೃಷ್ಟ ಸಂಖ್ಯೆ 3, 4

ಮೇಷ: ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶಗಳು ದೊರಕಲಿವೆ. ಹೆಚ್ಚಿನ ವ್ಯಾಸಂಗಕ್ಕಾಗಿ ಸ್ಥಳ ಬದಲಾವಣೆ ಸಾಧ್ಯತೆ. ವೃದ್ಧರಿಗೆ ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ. ಉದ್ಯೋಗಸ್ಥರಿಗೆ ವಿಶೇಷ ಆದಾಯದ ನಿರೀಕ್ಷೆ.

ವೃಷಭ: ಮಕ್ಕಳಿಗೆ ವಿದ್ಯಾರ್ಥಿಗಳಿಗೆ ಅದೃಷ್ಟದ ಬಾಗಿಲು ತೆರೆಯಲಿದೆ. ಹೂಡಿಕೆ ವ್ಯವಹಾರಗಳ ಆದಾಯದಲ್ಲಿ ಹೆಚ್ಚಳ. ಸಾಮಾಜಿಕ ಹಾಗೂ ಧಾರ್ಮಿಕ ಸಂಸ್ಥೆಗಳಲ್ಲಿ ಸನ್ಮಾನಿತರಾಗುವ ಸಾಧ್ಯತೆ. ಮನೆಯಲ್ಲಿ ಸಂತಸದ ವಾತಾವರಣ.

ಮಿಥುನ: ತೋಟದ ಬೆಳೆಗಾರರಿಗೆ ಹಾಗೂ ವಾಣಿಜ್ಯ ಬೆಳೆ ವ್ಯಾಪಾರಸ್ಥರಿಗೆ ವಿಶೇಷ ಲಾಭ. ಅರಣ್ಯ ರಕ್ಷಕರು, ಅರಣ್ಯಾಧಿಕಾರಿಗಳಿಗೆ ವಿಶೇಷ ಧನಾಗಮ ಸಾಧ್ಯತೆ. ಕ್ರೀಡಾಪಟುಗಳಿಗೆ ಹಂತ ಹಂತವಾಗಿ ಮೇಲೇರುವ ಅವಕಾಶ.

ಕರ್ಕಾಟಕ: ನೌಕರಿಯಲ್ಲಿರುವವರಿಗೆ ಉದ್ಯೋಗದಲ್ಲಿ ನಿರಾಸಕ್ತಿ. ಎಣ್ಣೆ ಮತ್ತು ಹತ್ತಿ ಮುಂತಾದ ವ್ಯಾಪಾರಸ್ಥರಿಗೆ ಲಾಭ. ಔಷಧ ವಿತರಕರು, ಮಾರಾಟಗಾರರಿಗೆ ಬಿಡುವಿಲ್ಲದ ಕೆಲಸ. ನೇಕಾರರಿಗೆ, ದರ್ಜಿಗಳಿಗೆ ಉತ್ತಮ ಆದಾಯ.

ಸಿಂಹ: ಜಂಟಿ ವ್ಯವಹಾರಗಳಲ್ಲಿ ಗೊಂದಲ ಸಾಧ್ಯತೆ. ಉದ್ಯೋಗಸ್ಥರಿಗೆ ಅಧಿಕಾರಿಗಳಿಂದ ಕಿರಿಕಿರಿ. ಬಹುದಿನಗಳಿಂದ ಬರಬೇಕಾದ ಬಾಕಿ ಹಣ ವಸೂಲಾಗುವ ಸಾಧ್ಯತೆ. ವೈದ್ಯ ವೃತ್ತಿಯವರಿಗೆ ಉದ್ಯೋಗದಲ್ಲಿ ಎಚ್ಚರಿಕೆ ಅಗತ್ಯ.

ಕನ್ಯಾ: ಲೇವಾದೇವಿ ವ್ಯವಹಾರದಲ್ಲಿ ತೊಡಗಿಕೊಂಡವರಿಗೆ ಉತ್ತಮ ಲಾಭ. ಮನಸ್ಸಿನ ಸಂಕಲ್ಪಗಳು ಈಡೇರಲಿವೆ. ದೇವತಾದರ್ಶನ ಭಾಗ್ಯ ಗೋಚರಿಸುತ್ತಿದೆ. ಕುಟುಂಬ ಸಮೇತ ಬಂಧುಗಳ ದರ್ಶನ ಮಾಡಲಿದ್ದೀರಿ.

ತುಲಾ: ಆಸ್ತಿ ಲಾಭವಾಗುವ ಸಾಧ್ಯತೆ. ಹೂಡಿಕೆಗಳಲ್ಲಿ ಹೆಚ್ಚಿನ ಆಸಕ್ತಿ. ವಿದ್ಯುತ್ ಗುತ್ತಿಗೆದಾರರಿಗೆ ಕೆಲಸಗಾರರಿಂದ ತೊಂದರೆ. ವೈದ್ಯಕೀಯ ಕ್ಷೇತ್ರದಲ್ಲಿ ದುಡಿಯುವವರಿಗೆ ಧನಲಾಭವಾಗುವ ಸಾಧ್ಯತೆ ಎದ್ದು ಕಾಣುತ್ತಿದೆ.

ವೃಶ್ಚಿಕ: ಪ್ರೇಮಿಗಳ ಇಷ್ಟಾರ್ಥ ಸಿದ್ಧಿಯಾಗುವ ಲಕ್ಷಣಗಳು ಕಂಡುಬರುತ್ತಿದೆ. ಸಂಗಾತಿಯೊಂದಿಗೆ ಪ್ರವಾಸ ಕ್ಷೇತ್ರದರ್ಶನ. ಜನ ಸೇವೆಯಲ್ಲಿಯೇ ಜನಾರ್ದನ ಸೇವೆಯನ್ನು ಕಾಣುವಿರಿ. ದಾನ ಧರ್ಮಾದಿಗಳಿಂದ ಮಾನಸಿಕ ಶಾಂತಿ.

ಧನು: ಉದ್ಯೋಗ ಮತ್ತು ವ್ಯವಹಾರಸ್ಥರಿಗೆ ಅಭಿವೃದ್ಧಿಯುಂಟಾಗಲಿದೆ. ದುಂದು ವೆಚ್ಚದಿಂದಾಗಿ ಆರ್ಥಿಕ ಹೊರೆ ಬೀಳುವ ಸಾಧ್ಯತೆ. ಖರೀದಿ ವ್ಯವಹಾರದಲ್ಲಿ ತೊಡಕು. ಸಮಾಧಾನದಿಂದಾಗಿ ಸಂಸಾರದಲ್ಲಿ ಸಾಮರಸ್ಯ.

ಮಕರ: ಸ್ವತಂತ್ರ ಉದ್ಯೋಗದಲ್ಲಿ ದಕ್ಷತೆಯಿಂದಾಗಿ ಯಶಸ್ಸು. ವ್ಯಾಪಾರ ಮತ್ತು ಕೌಟುಂಬಿಕ ವಿಷಯದಲ್ಲಿ ಬದಲಾವಣೆಯ ಗಾಳಿ ಬೀಸಲಿದೆ. ಜನಸಮೂಹ ಮುಂದಾಳತ್ವದಲ್ಲಿ ತೊಡಕು. ಹೆಣ್ಣುಮಕ್ಕಳಿಗೆ ವಿವಾಹ ನಿಶ್ಚಯ ಸಾಧ್ಯತೆ.

ಕುಂಭ: ಅಧಿಕಾರಕ್ಕಾಗಿ ಹೋರಾಟ ನಡೆಸಬೇಕಾದೀತು. ರಾಜಕೀಯ ಮುಖಂಡರಿಗೆ ವಿರೋಧಿಗಳಿಂದ ತೀವ್ರ ತರಹದ ತೊಂದರೆ. ಶೃಂಗಾರ ಸಾಮಗ್ರಿಗಳ ವ್ಯಾಪಾರಸ್ಥರಿಗೆ ವಿಶೇಷ ಲಾಭ ದೊರಕಲಿದೆ.

ಮೀನ: ಅಪೇಕ್ಷಿತರಿಗೆ ಸಂತಾನ ಭಾಗ್ಯದ ಲಕ್ಷಣಗಳು ಕಂಡುಬರುತ್ತಿವೆ. ಯಾವುದೇ ವಿಷಯದಲ್ಲಿ ಆತುರದ ನಡೆ ಸಲ್ಲ. ಆರೋಗ್ಯದ ಬಗ್ಗೆ ವೈದ್ಯರ ಸಲಹೆ ಪಡೆಯುವುದು ಉತ್ತಮ. ಮಕ್ಕಳ ಶ್ರೇಯಸ್ಸಿನಿಂದಾಗಿ ಮನಸ್ಸಿಗೆ ಸಂತೋಷ.

ನಿಮ್ಮ ಜನ್ಮದಿನ 5-ಮಾರ್ಚ್: ಈ ದಿನ ಅತ್ಯಂತ ಶುಭಕರ. ಉದ್ಯೋಗ ನಿಮಿತ್ತ ಆಗಾಗ್ಗೆ ದೂರದ ಪ್ರಯಾಣ ಹಾಗೂ ವಾಸ್ತವ್ಯ ಮಾಡಬೇಕಾದೀತು. ಕೆಲಸ-ಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸುವುದರೊಂದಿಗೆ ಆರ್ಥಿಕ ಅಭಿವೃದ್ಧಿಯನ್ನೂ ಸಾಧಿಸಲಿದ್ದೀರಿ. ಕಾರ್ಯಬಾಹುಳ್ಯದಿಂದಾಗಿ ಮಾನಸಿಕ ಆಯಾಸವನ್ನು ಅನುಭವಿಸಬೇಕಾದೀತು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಅಹಂಕಾರದ ಬೀಜ

ಮತ್ತೊಂದು ದಿನ ರಾಜ ವಿದೇಹ ಮಹೋಷಧಕುಮಾರನೊಂದಿಗೆ ರಾಜೋದ್ಯಾನಕ್ಕೆ ಬಂದ. ಅವನು ಅತ್ತಿತ್ತ ನೋಡುತ್ತಿರುವಾಗ ಪ್ರವೇಶದ್ವಾರದ ಮೇಲೆ ಒಂದು ಓತಿಕ್ಯಾತ ಕುಳಿತಿತ್ತು. ರಾಜ ಬರುವುದನ್ನು ಕಂಡು ಸರಸರನೆ ಕೆಳಗಿಳಿದು ಬಂದು ನೆಲದ ಮೇಲೆ ಮಲಗಿತು. ಅದರ ವಿನಯವನ್ನು ಕಂಡು ರಾಜ ಪಂಡಿತನನ್ನು ಕೇಳಿದ, ‘ಪಂಡಿತ ಈ ಓತಿಕ್ಯಾತ ಹೀಗೇಕೆ ಮಾಡಿತು?’

‘ಮಹಾರಾಜ, ಓತಿಕ್ಯಾತ ತಮ್ಮ ಸೇವೆಯಲ್ಲಿದೆ. ಅದಕ್ಕೇ ವಿನಯದಿಂದ ಹೀಗೆ ಕೆಳಗೆ ಬಂದು ಕುಳಿತಿತು’ ಎಂದ ಪಂಡಿತ.

‘ಹಾಗಾದರೆ, ನನಗೆ ಅದು ಮಾಡುವ ಸೇವೆ ವ್ಯರ್ಥವಾಗಬಾರದು. ಅದಕ್ಕೆ ಯಾವ ಭೋಗವಸ್ತು ಬೇಕೋ, ಅದನ್ನು ಕೊಡಿಸು’ ಎಂದ ರಾಜ.

‘ಪ್ರಭೂ, ಅದಕ್ಕೆ ಬೇರೆ ಯಾವ ವಸ್ತುಗಳ ಬಯಕೆಯೂ ಇಲ್ಲ. ಅದಕ್ಕೆ ಸರಿಯಾದ ಸಮಯಕ್ಕೆ ಊಟ ಸಿಕ್ಕರೆ ಸಾಕು’.

‘ಅದು ಏನನ್ನು ತಿನ್ನುತ್ತದೆ?’ ಕೇಳಿದ ರಾಜ.

‘ಅದಕ್ಕೆ ಕವಡೆ ಕಾಸಿನ ಮಾಂಸ ಸಿಕ್ಕರೆ ಸಾಕು’ ಎಂದ ಕುಮಾರ. ಆಗ ರಾಜ ಹೇಳಿದ, ‘ನೋಡು, ರಾಜ ಕೊಟ್ಟಿದ್ದು ಕವಡೆ ಕಾಸಿನ ಬೆಲೆಯದು ಎಂದು ಯಾರೂ ಎನ್ನಬಾರದು. ಅದಕ್ಕೆ ನಿತ್ಯವೂ ಆ ಓತಿಕ್ಯಾತಕ್ಕೆ ಅರ್ಧಮಾಸದ ಬೆಲೆಯ ಮಾಂಸವನ್ನು ಒದಗಿಸಬೇಕು. ಇದು ನನ್ನ ಆಜ್ಞೆ’. ಮಹೋಷಧಪಂಡಿತ ಒಬ್ಬ ಆಳನ್ನು ಕರೆದು, ನಿತ್ಯವೂ ಅರ್ಧ ಮಾಸದ ಮಾಂಸವನ್ನು ಈ ಪ್ರಾಣಿಗೆ ಕೊಡುವಂತೆ ಹೇಳಿ ವ್ಯವಸ್ಥೆ ಮಾಡಿದ. ಅಂದಿನಿಂದ ಆ ಓತಿಕ್ಯಾತಕ್ಕೆ ಅರ್ಧಮಾಸ ಮಾಂಸ ವ್ಯವಸ್ಥಿತವಾಗಿ ದೊರಕತೊಡಗಿತು.

ಮರುದಿನ ಉಪೋಸಥ ವ್ರತ ಇದ್ದುದರಿಂದ ಇಡೀ ಮಾರುಕಟ್ಟೆಯಲ್ಲಿ ಒಂದು ಚೂರು ಮಾಂಸವೂ ದೊರಕುವ ಸಾಧ್ಯತೆ ಇರಲಿಲ್ಲ. ಆದ್ದರಿಂದ ಆಳು ಮನುಷ್ಯ ಆ ಓತಿಕ್ಯಾತಕ್ಕೆ ಅಂದಿನ ಮಾಂಸವನ್ನು ಕೊಟ್ಟು ಮರುದಿನದ ಅರ್ಧಮಾಸದ ತುಣುಕನ್ನು ಅದರ ಕೊರಳಿಗೆ ಕಟ್ಟಿಬಿಟ್ಟ. ಅಂದರೆ ಮರುದಿನ ಅದು ಅದನ್ನು ತಿನ್ನಬಹುದಿತ್ತು. ಓತಿಕ್ಯಾತಕ್ಕೆ ಬಹಳ ಸಂತೋಷವಾಯಿತು. ಅದಕ್ಕೆ ಇಂದಿನ ಊಟದೊಂದಿಗೆ ನಾಳಿನ ಊಟವೂ ಮುಂಗಡವಾಗಿ ದೊರೆತಿತ್ತು.

ಅಂದು ರಾಜ ಮತ್ತೆ ಮಹೋಷಧಕುಮಾರನೊಂದಿಗೆ ರಾಜೋದ್ಯಾನಕ್ಕೆ ಬಂದ. ಆಗಲೂ ಓತಿಕ್ಯಾತ ಪ್ರವೇಶದ್ವಾರದ ಮೇಲೆಯೇ ಕುಳಿತಿತ್ತು. ಆದರೆ ಈ ಬಾರಿ ಅದು ಕೆಳಗೆ ಇಳಿದು ಬರದೆ, ತಲೆ, ಬಾಲ ಅಲ್ಲಾಡಿಸುತ್ತ ಸೊಕ್ಕಿನಿಂದ ಕುಳಿತಿತ್ತು. ರಾಜ ಆಶ್ಚರ್ಯದಿಂದ ಕೇಳಿದ, ‘ಏನಾಗಿದೆ ಈ ಓತಿಕ್ಯಾತಕ್ಕೆ? ಒಳ್ಳೆಯ ಗರ್ವದಿಂದ ಕುಳಿತಿದೆ. ನನ್ನನ್ನು ನೋಡಿಯೂ ನೋಡದಂತೆ, ನನಗೇ ಸವಾಲು ಹಾಕುವಂತೆ ನೋಡುತ್ತಿದೆ’. ಮಹೋಷಧಕುಮಾರ ಯೋಚಿಸಿದ. ಓತಿಕ್ಯಾತಕ್ಕೆ ಹೊಟ್ಟೆ ತುಂಬಿದಂತಿದೆ. ಮತ್ತೆ ಅದರ ಕೊರಳಲ್ಲಿ ನಾಳಿನ ಮಾಂಸವೂ ಇದೆ. ಆದ್ದರಿಂದಲೇ ಅದಕ್ಕೆ ಶ್ರೀಮಂತಿಕೆಯ ಸೊಕ್ಕು ಬಂದಿದೆ. ಅದನ್ನು ಕಂಡು ನಕ್ಕು ಕುಮಾರ ಹೇಳಿದ, ‘ಮಹಾರಾಜ, ಅದಕ್ಕೆ ಬೇಕಾದ್ದಕ್ಕಿಂತ ಸ್ವಲ್ಪ ಹೆಚ್ಚು ಮಾಂಸ ಇದ್ದುದರಿಂದ ಅಹಂಕಾರ ಬಂದಿದೆ. ಮನುಷ್ಯರಿಗೂ ಇದೇ ರೋಗ ಬರುತ್ತದೆ. ಅಗತ್ಯಕ್ಕಿಂತ ಕೊಂಚ ಹೆಚ್ಚು ಮಾಂಸ ಸಿಕ್ಕಾಗ ಈ ಓತಿಕ್ಯಾತಕ್ಕೇ ಇಷ್ಟು ಅಹಂಕಾರ ಬರುವುದಾದರೆ ಅಡ್ಡದಾರಿಯಿಂದ ಅಪಾರ ಸಂಪತ್ತನ್ನು ಗಳಿಸಿದವರಿಗೆ ಕಣ್ಣು ನೆತ್ತಿಗೇರುವುದರಲ್ಲಿ ಯಾವ ಆಶ್ಚರ್ಯವಿದೆ?’.


ಇದೇ ಅಹಂಕಾರ ಮರದ ಬೀಜ. ❖

ಪದಬಂಧ 4527

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಯಜಮಾನನ ಹುಟ್ಟುಗುಣ (4)
3. ಅಕ್ಕಿ ತೊಳೆದ ನೀರಿದು (4)
5. ಒಳ್ಳೆಯ ಸ್ವಭಾವವಿದು (3)
6. ಹರಿಯುವಂಥ ವಸ್ತು (2)
8. ಸಂಕಲನ ಮಾಡೆಂದರೆ ಈ ಜಗಳ! (3)
10. ತೊಂದರೆ ಹೊಂದಿದ ವ್ಯಕ್ತಿ (3)
11. ಆಮೇಲೂ ಇಳಿಯದಿರುವ ಮತ್ತು! (3)
12. ಚಿಕ್ಕ ಮಕ್ಕಳನ್ನು ಹೀಗೆ ಸಂತೈಸು (3)
15. ರಸನದಲ್ಲಿರುವ ದ್ರವ (2)
17. ದೃಷ್ಟಿಗೆ ದೂರವಾಗಿರುವುದು ಪಕ್ಷದಲ್ಲಿದೆ (3)
18. ಯಾಗದ ಸಮಾಪ್ತಿ (4)
19. ನಿಸ್ಸಾರವಾದುದನ್ನು ಹೀಗನ್ನಿ (4)

ಮೇಲಿಂದ ಕೆಳಕ್ಕೆ
1. ಗಾಳಿ ಸುಳಿದಾಡಲು ಮಾಡಿರುವ ಕಿಂಡಿ (3)
2. ಬೆಳಗಿನ ಜಾವವಿದು (3)
3. ಕಲೆಸಿದ ಗೋಧಿಹಿಟ್ಟು (3)
7. ಬೇರೆ ಬೇರೆ ಬಣ್ಣಗಳ ಬೆರಕೆ (5)
9. ಹರನೊಳಗಿದ್ದಾನಲ್ಲಾ ಈ ಮೋಸಗಾರ! (5)
13. ಒಳ್ಳೆಯ ದಾರಿಯಿದು (3)
14. ನಾಶವಿಲ್ಲದ ವರ್ಣ (3)
16. ದನವಿರುವ ಮನೆ (3)



4526ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಋಗ್ವೇದ 4.ಸಂಭವ
6.ಜವಾಬುದಾರಿ 7.ನಭ
9.ನವ 10.ಶಿಷ್ಯ 11.ಸುತ
13.ಮನೆವಾಳ್ತನ 16.ಮದುಳು
17.ನೆನಪು

ಮೇಲಿಂದ ಕೆಳಕ್ಕೆ:
1.ಋತುಮಾನ 2.ದನುಜ
3.ಸಬೂಬು 4.ಸಂಚಾರಿ
5.ವಜ್ರೋತ್ಸವ 8.ಭವಿಷ್ಯ
9.ನನಸು 10.ಶಿರೋನಾಮೆ
12.ತಲೆಗಾವು 13.ಮರಳು
14.ವಾಸನೆ 15.ನಮೂನೆ

ಸುಡೊಕು 4913

		6		4		3		5
	3		5		7			
	9	2		3		7		1
2	1		9		3	6		
				1				3
3	8			5			7	
9		8						7
	6			9			3	
4		3			1	2		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4912 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2


ಮೂಗಿನಿಂದ ಸಂಗ್ರಹಿಸಿದ ದ್ರವದ ಮಾದರಿ • ಐಐಎಸ್‌ಸಿ ಸಂಶೋಧಕರು ನಡೆಸಿದ ಅಧ್ಯಯನದಲ್ಲಿ ಪತ್ತೆ

ರೂಪಾಂತರ ವೈರಾಣು ಬೆಂಗಳೂರಲ್ಲೇ ಹೆಚ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರ ಪ್ರಮಾಣ ಬೆಂಗಳೂರು ನಗರದಲ್ಲಿ ಅತ್ಯಧಿಕ ಮಟ್ಟದಲ್ಲಿದೆ ಎಂಬುದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸಂಶೋಧಕರ ತಂಡ ನಡೆಸಿದ ಅಧ್ಯಯನದಲ್ಲಿ ಬೆಳಕಿಗೆ ಬಂದಿದೆ.

ಐಐಎಸ್‌ಸಿ ಜೀವ ರಸಾಯನ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ. ಉತ್ಪಲ್ ತಾತು ನೇತೃತ್ವದ ಸಂಶೋಧಕರ ತಂಡವು, ಕೋವಿಡ್ ಸೋಂಕು ದೃಢಪಟ್ಟ ವ್ಯಕ್ತಿಗಳ ಮೂಗಿನಿಂದ ಸಂಗ್ರಹಿಸಿದ ದ್ರವದ ಪ್ರತಿ ಮಾದರಿಯಲ್ಲಿ ಕೊರೊನಾ ವೈರಸ್‌ನ 11 ರೂಪಾಂತರಗಳು ಪತ್ತೆಯಾಗಿವೆ. ಜಾಗತಿಕ ಮಟ್ಟದಲ್ಲಿ ಈ ದರ ಶೇಕಡ 7.3ರಷ್ಟಿದ್ದರೆ, ರಾಷ್ಟ್ರೀಯ ಮಟ್ಟದಲ್ಲಿ ಶೇ 8.4ರಷ್ಟಿದೆ ಬೆಂಗಳೂರಿನಲ್ಲಿ ಕಂಡುಬಂದಿರುವ ಕೊರೊನಾ ವೈರಾಣು ರೂಪಾಂತರದ ದರ ಜಗತ್ತಿನಲ್ಲೇ ಅತ್ಯಧಿಕವಾಗಿದೆ ಎಂದು ಈ ಅಧ್ಯಯನ ಹೇಳಿದೆ.



‘ಕಳೆದ ವರ್ಷವೇ ಈ ಅಧ್ಯಯನ ನಡೆಸಲಾಗಿತ್ತು. ಆದ್ದರಿಂದ, ಕೊರೊನಾ ರೂಪಾಂತರದ ದರದಲ್ಲಿ ಬದಲಾವಣೆ ಇರಬಹುದು. ಈ ಅಧ್ಯಯನ ವರದಿ ಫೆಬ್ರುವರಿಯಲ್ಲಿ ‘ಪ್ರೊಟಿಯೋಮ್ ರೀಸರ್ಚ್’ ನಿಯತಕಾಲಿಕೆಯಲ್ಲಿ ಪ್ರಕಟವಾಗಿದೆ. 2020ರ ನವೆಂಬರ್‌ನಿಂದಲೂ ಈ ವರದಿ ಅಂತಿಮ ಹಂತದ ಪರಿಶೀಲನೆಗೆ ಬಾಕಿ ಇತ್ತು’ ಎಂದು ಪ್ರೊ. ಉತ್ಪಲ್ ಹೇಳುತ್ತಾರೆ.

‘ಬೆಂಗಳೂರಿನಲ್ಲಿ ಸೋಂಕಿತರಾದ ಹೆಚ್ಚು ಜನರಲ್ಲಿ ಕೊರೊನಾ ವೈರಾಣುವಿನ ರೂಪಾಂತರವಾಗಿರುವ D614G ಹೆಸರಿನ ವೈರಸ್ ಪತ್ತೆಯಾಗಿದೆ. ಬೆಂಗಳೂರಿನಲ್ಲಿ ಈಗ D614G ಸಾಮಾನ್ಯ ಎಂಬಂತಾಗಿದೆ. ನಗರದಲ್ಲಿ ಹೆಚ್ಚುತ್ತಿರುವ ಕೊರೊನಾ ವೈರಾಣು ರೂಪಾಂತರವು ಕೋವಿಡ್ ಲಸಿಕೆಗಳ ಸಾಮರ್ಥ್ಯ ಕುಗ್ಗಿಸಲಿವೆಯೆ? ಅಥವಾ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಪ್ರಮಾಣದ ಏರಿಕೆಗೆ ಕಾರಣವಾಗಲಿದೆಯೇ? ಎಂಬುದು ಇನ್ನಷ್ಟೇ ತಿಳಿಯಬೇಕಿದೆ’ ಎಂದರು.

ಇನ್‌ಸ್ಟಿಟ್ಯೂಟ್ ಆಫ್ ಜೆನೋಮಿಕ್ಸ್ ಅಂಡ್ ಇಂಟಿಗ್ರೇಟಿವ್ ಬಯಾಲಜಿ (ಸಿಎಸ್‌ಐಆರ್– ಐಜಿಐಬಿ) ಪ್ರಕಟಿಸಿರುವ ಮತ್ತೊಂದು ಸಂಶೋಧನಾ ಪ್ರಬಂಧದ ಪ್ರಕಾರ, ‘ವೈರಾಣುಗಳನ್ನು ಕೊಲ್ಲುವ ಶಕ್ತಿಯುಳ್ಳ ಪ್ರತಿಕಾಯಗಳಿಂದ ತಪ್ಪಿಸಿಕೊಳ್ಳುವ ಸಾಮರ್ಥ್ಯವುಳ್ಳ ಕೊರೊನಾ ವೈರಾಣು ರೂಪಾಂತರಗಳು ಹೆಚ್ಚುತ್ತಿವೆ. ಇಂತಹ 146 ಬಗೆಯ ‘ಎಸ್ಕೇಪ್ ರೂಪಾಂತರಿ’ ಕೊರೊನಾ ವೈರಾಣುಗಳ ಕುರಿತು ಇತ್ತೀಚೆಗೆ ಅಧ್ಯಯನ ನಡೆಸಲಾಗಿದೆ’.


‘ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿ N440K ಹೆಸರಿನ ‘ಎಸ್ಕೇಪ್’ ರೂಪಾಂತರಿ ಕೊರೊನಾ ವೈರಾಣು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗುತ್ತಿದೆ. ಇದು ಅತ್ಯಂತ ಕಳವಳಕ್ಕೆ ಎಡೆಮಾಡಿದೆ’ ಎನ್ನುತ್ತಾರೆ ಸಿಎಸ್‌ಐಆರ್– ಐಜಿಐಬಿ ಸಹ ಪ್ರಾಧ್ಯಾಪಕ ಪ್ರೊ. ವಿನೋದ್ ಸ್ಕಾರಿಯಾ.

ಉತ್ತಮ ಪರೀಕ್ಷಾ ವ್ಯವಸ್ಥೆ ಅಗತ್ಯ

ಕೊರೊನಾ ವೈರಾಣುವಿನ ರೂಪಾಂತರದ ವೇಗವನ್ನು ಗಮನಿಸಿದರೆ ಇನ್ನೂ ಅತ್ಯುತ್ತಮವಾದ ಪರೀಕ್ಷಾ ವ್ಯವಸ್ಥೆಯ ಅಗತ್ಯವಿದೆ ಎಂಬುದು ಮನದಟ್ಟಾಗುತ್ತದೆ ಎಂಬುದು ಪ್ರೊ. ಉತ್ಪಲ್ ಮತ್ತು ಅವರ ತಂಡದ ಅಭಿಪ್ರಾಯ.

ಈ ತಂಡ ‘ಪ್ರೊಟಿಯೋ– ಜೆನೋಮಿಕ್’ ಪರೀಕ್ಷಾ ವಿಧಾನವನ್ನು ಅಧ್ಯಯನಕ್ಕೆ ಆಯ್ದುಕೊಂಡಿತ್ತು. ವಂಶವಾಹಿ ಆಧಾರಿತ ‘ನೆಕ್ಸ್ಟ್ ಜೆನರೇಷನ್ ಸೀಕ್ವೆನ್ಸಿಂಗ್’ (ಎನ್‌ಜಿಎಸ್) ವಿಧಾನದ ಮೂಲಕ ಈ ಅಧ್ಯಯನ ನಡೆದಿದೆ.

ಕೊರೊನಾ ವೈರಾಣುವಿಗೆ ಮನುಷ್ಯರ ದೇಹ ಹೇಗೆ ಪ್ರತಿಕ್ರಿಯಿಸಿದೆ ಎಂಬುದನ್ನೂ ಐಐಎಸ್‌ಸಿ ತಜ್ಞರ ತಂಡ ಅಧ್ಯಯನ ಮಾಡಿದೆ. ಪ್ರೊಟೀನ್ ಆಧಾರದಲ್ಲಿ ಈ ಅಧ್ಯಯನ ಮಾಡಲಾಗಿದೆ. ಕೋವಿಡ್ ಪೀಡಿತರಲ್ಲಿ 441 ಬಗೆಯ ವಿಭಿನ್ನ ಪ್ರೊಟೀನ್‌ಗಳು ಪತ್ತೆಯಾಗಿವೆ ಎಂದು ವರದಿ ಹೇಳಿದೆ. ‘ಕೋವಿಡ್–19ನಂತಹ ಸೋಂಕುಗಳ ವಿಚಾರದಲ್ಲಿ ಪ್ರೊಟೀನ್ ಆಧಾರಿತ ಅಧ್ಯಯನಗಳು ಹೆಚ್ಚು ಖಚಿತವಾದ ವರದಿ ನೀಡುತ್ತವೆ. ಆರ್‌ಎನ್‌ಎ ಮಾಲಿಕ್ಯೂಲ್‌ಗಳನ್ನು ಆಧರಿಸಿದ ಆರ್‌ಟಿ–ಪಿಸಿಆರ್ ವಿಧಾನಕ್ಕಿಂತಲೂ ನಿಖರ ವರದಿ ಪಡೆಯುವುದು ಸಾಧ್ಯವಿದೆ’ ಎನ್ನುತ್ತಾರೆ ಸಂಶೋಧನಾ ಪ್ರಬಂಧದ ಮೊದಲ ಲೇಖಕಿಯೂ ಆಗಿರುವ ಪಿಎಚ್‌.ಡಿ ವಿದ್ಯಾರ್ಥಿನಿ ಶೀತಲ್ ತುಶಿರ್.



ಮೀಸಲಾತಿ ಪ್ರಮಾಣ ಶೇ 50 ಮೀರದಿರಲಿ: ಸುಪ್ರೀಂ

ನವದೆಹಲಿ: ಸ್ಥಳೀಯ ಸಂಸ್ಥೆಗಳಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ನಿಗದಿಪಡಿಸುವ ಮೀಸಲಾತಿಯೂ ಒಳಗೊಂಡು ಒಟ್ಟು ಮೀಸಲು ಪ್ರಮಾಣ ಶೇ 50 ಮೀರಬಾರದು ಎಂದು ಸುಪ್ರೀಂ ಕೋರ್ಟ್ ಗುರುವಾರ ಸ್ಪಷ್ಟಪಡಿಸಿದೆ.

ಒಬಿಸಿಗೆ ನಿಗದಿಪಡಿಸುವ ಮೀಸಲಾತಿ ಪ್ರಮಾಣ ನಿರ್ದಿಷ್ಟವಾಗಿರಬೇಕು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಒಬಿಸಿ ಒಳಗೊಂಡು ಶೇ 50 ಮೀರಬಾರದು ಎಂದು ಸುಪ್ರೀಂ ಕೋರ್ಟ್ ಪೀಠವು ವಿವರಿಸಿದೆ.

ನ್ಯಾಯಮೂರ್ತಿ ಎ.ಎಂ.ಖಾನ್ ವಿಲ್ಕರ್ ನೇತೃತ್ವದ ತ್ರಿಸದಸ್ಯರ ಪೀಠವು, ಮಹಾರಾಷ್ಟ್ರ ಜಿಲ್ಲಾ ಪರಿಷತ್ ಮತ್ತು ಪಂಚಾಯತ್ ಸಮಿತಿ ಕಾಯ್ದೆ 1961ರನ್ನು ಓದಿ ಹೇಳಿತು. ಇಲ್ಲಿ ಒಬಿಸಿಗೆ ಮೀಸಲಾತಿ ಪ್ರಮಾಣವು ಶೇ 27ರವರೆಗೂ ಇರಬಹುದು. ಆದರೆ, ಒಟ್ಟಾಗಿ ಗರಿಷ್ಠ ಪ್ರಮಾಣ ಶೇ 50ರ ಮಿತಿಯಲ್ಲಿದೆ ಎಂದು ಹೇಳಿತು.

ಮಹಾರಾಷ್ಟ್ರದ ವಾಶಿಂ, ಅಕೋಲಾ, ನಾಗಪುರ, ಭಂಡಾರ ಜಿಲ್ಲೆಗಳಲ್ಲಿ ಒಬಿಸಿಗೆ ನಿಗದಿಪಡಿಸಿದ್ದ ಸೀಟುಗಳ ಫಲಿತಾಂಶವನ್ನು ಅನೂರ್ಜಿತಗೊಳಿಸಿದ್ದು, ಎರಡು ವಾರಗಳಲ್ಲಿ ಈ ಸ್ಥಾನಗಳಿಗೆ ಹೊಸದಾಗಿ ಚುನಾವಣೆ ಘೋಷಿಸಬೇಕು ಎಂದು ಮಹಾರಾಷ್ಟ್ರ ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿತು.

ಒಬಿಸಿಗೆ ನಿಗದಿಪಡಿಸುವ ಮೀಸಲಾತಿ ಪ್ರಮಾಣವು ಕೇವಲ ‘ಶಾಸನಾತ್ಮಕ’. ರಾಜ್ಯಗಳು ರೂಪಿಸುವ ಕಾಯ್ದೆಯಡಿ ಇದನ್ನು ತೀರ್ಮಾನಿಸಬಹುದು. ಆದರೆ ಇದು, ಪರಿಶಿಷ್ಟ ಜಾತಿ ಮತ್ತು ಪಂಗಡ ವರ್ಗದವರಿಗೆ ಇರುವಂತೆ ಸಂವಿಧಾನಿಕ ಮೀಸಲಾತಿ ಅಲ್ಲ. ಈ ವರ್ಗಗಳಿಗೆ ಜನಸಂಖ್ಯೆಯನ್ನು ಆಧರಿಸಿ ಸಾಂವಿಧಾನಿಕ ಮೀಸಲಾತಿಯಂತೆ ನಿಗದಿಯಾಗಲಿದೆ ಎಂದಿತು.

ಒಂದು ವೇಳೆ, ಸ್ಥಳೀಯ ಸಂಸ್ಥೆಗಳಲ್ಲಿ ಸಾಂವಿಧಾನಿಕ ಮೀಸಲಾತಿಗೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೇ ಶೇ 50ರಷ್ಟು ಸೀಟುಗಳನ್ನು ಅಥವಾ ಕೆಲ ಶೆಡ್ಯೂಲ್ ವಲಯಗಳಲ್ಲಿ ಶೇ 50ರಷ್ಟು ಮೀರಿ ಬಳಸಿದರೆ, ಆಗ ಒಬಿಸಿ ವರ್ಗಕ್ಕೆ ಸೀಟು ಮೀಸಲಾತಿ ನಿಗದಿಪಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದೂ ವಿವರಿಸಿತು.

ಕೆ.ಕೃಷ್ಣಮೂರ್ತಿ (ಡಾ) ವರ್ಸಸ್ ಭಾರತ ಸರ್ಕಾರ (2019) ಪ್ರಕರಣ ಕುರಿತು ಸಂವಿಧಾನ ಪೀಠದ ನಿರ್ಧಾರವನ್ನು ಉಲ್ಲೇಖಿಸಿದ ಕೋರ್ಟ್, ಒಬಿಸಿ ವರ್ಗಕ್ಕೆ ಮೀಸಲಾತಿ ನೀಡುವ ಮುನ್ನ ಹಿಂದುಳಿರುವಿಕೆ ಕುರಿತ ಅಂಕಿ ಅಂಶಗಳು, ಮೀಸಲು, ಎಸ್‌ಸಿ,ಎಸ್‌ಟಿ, ಒಬಿಸಿ ಒಟ್ಟು ಪ್ರಮಾಣ ಶೇ 50 ಮೀರದು ಎಂದು ಖಾತರಿಪಡಿಸಿಕೊಳ್ಳಲು ಆಯೋಗ ರಚಿಸಲು ಪೀಠವು ಹೇಳಿದೆ.

ಸಂತ್ರಸ್ತೆ ವಿವಾಹ: ‘ಸುಪ್ರೀಂ’ ಬೆಂಬಲಕ್ಕೆ ಬಿಸಿಐ

ನವದೆಹಲಿ (ಪಿಟಿಐ): ಸಂತ್ರಸ್ತೆಯನ್ನು ವಿವಾಹವಾಗುತ್ತೀರಾ ಎಂಬುದಾಗಿ ಅತ್ಯಾಚಾರ ಪ್ರಕರಣದ ಆರೋಪಿಯನ್ನು ಪ್ರಶ್ನಿಸಿದ್ದ ಸುಪ್ರೀಂಕೋರ್ಟ್‌ನ ನ್ಯಾಯ ಪೀಠದ ಬೆಂಬಲಕ್ಕೆ ಬಾರ್ ಕೌನ್ಸಿಲ್ ಆಫ್ ಇಂಡಿಯಾ (ಬಿಸಿಐ) ನಿಂತಿದೆ.

‘ಆರೋಪಿಯನ್ನು ಉದ್ದೇಶಿಸಿ ಆಡಿರುವ ಮಾತುಗಳನ್ನು ಹಿಂಪಡೆಯುವಂತೆ ಆಗ್ರಹಿಸಿ ಮುಖ್ಯನ್ಯಾಯಮೂರ್ತಿ ಎಸ್‌.ಎ.ಬೊಬಡೆ ಅವರಿಗೆ ಪತ್ರ ಬರೆದಿರುವ ಕಾರ್ಯಕರ್ತರು ಈ ವಿಷಯವನ್ನು ಮುಂದಿಟ್ಟುಕೊಂಡು ಸುಪ್ರೀಂ ಕೋರ್ಟ್‌ಗೆ ಅಪವಾದ ಕೊಡುವುದನ್ನು ನಿಲ್ಲಿಸಬೇಕು’ ಎಂದು ಬಿಸಿಐ ಹೇಳಿದೆ.

‘ಸುಪ್ರೀಂಕೋರ್ಟ್‌ನ ಕಲಾಪಗಳನ್ನು ಬಳಸಿಕೊಂಡು ರಾಜಕೀಯ ಲಾಭ ಪಡೆಯುವ ಯತ್ನ ಬೇಡ’ ಎಂದು ಗುರುವಾರ ನಡೆದ ಬಿಸಿಐನ ಸಭೆಯಲ್ಲಿ ಅಂಗೀಕರಿಸಿರುವ ನಿರ್ಣಯದಲ್ಲಿ ಹೇಳಲಾಗಿದೆ.

‘ಸಿಪಿಎಂ ನಾಯಕಿ ಬೃಂದಾ ಕಾರಟ್ ಅವರು ಸಿಜೆಐ ಅವರಿಗೆ ಬರೆದಿರುವ ಪತ್ರ ನ್ಯಾಯಾಂಗದ ಮೇಲೆ ಮಾಡಿರುವ ದುರುದ್ದೇಶಪೂರಿತ ದಾಳಿ. ಅದನ್ನು ದುರ್ಬಲಗೊಳಿಸಲು ಅಭಿವ್ಯಕ್ತಿ ಹಾಗೂ ವಾಕ್ ಸ್ವಾತಂತ್ರ್ಯವನ್ನು ಬಳಸಿಕೊಳ್ಳಬಾರದು’ ಎಂದೂ ನಿರ್ಣಯದಲ್ಲಿ ಹೇಳಲಾಗಿದೆ.

ರಾಮಮಂದಿರ ಸಂಕೀರ್ಣ: ಹೆಚ್ಚುವರಿ ಭೂಮಿ ಖರೀದಿ

ಅಯೋಧ್ಯೆ (ಪಿಟಿಐ): ಪೂರ್ವ ಯೋಜನೆಯಂತೆ ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮಮಂದಿರ ದೇವಾಲಯ ಸಂಕೀರ್ಣ ವಿಸ್ತರಿಸುವ ಕಾರ್ಯ ಆರಂಭವಾಗಿದ್ದು, ಇದರ ಮೊದಲ ಹೆಜ್ಜೆಯಾಗಿ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ರಾಮಜನ್ಮಭೂಮಿ ಪಕ್ಕದಲ್ಲಿರುವ 7,285 ಚದರ ಅಡಿಯಷ್ಟು ಭೂಮಿಯನ್ನು ಖರೀದಿಸಿದೆ.



ರಾಮಮಂದಿರ ದೇವಾಲಯ ಸಂಕೀರ್ಣವನ್ನು 70 ಎಕರೆ ಪ್ರದೇಶದಿಂದ 107 ಎಕರೆ ಪ್ರದೇಶಕ್ಕೆ ವಿಸ್ತರಿಸಬೇಕೆಂಬ ಯೋಜನೆಗೆ ಅನುಗುಣವಾಗಿ ಅಯೋಧ್ಯೆಯ ಅಶರ್ಫಿ ಭವನದ ಪಕ್ಕದಲ್ಲಿದ್ದ 7,825 ಚ. ಅಡಿ ಭೂಮಿಯನ್ನು, ಚ.ಅಡಿಗೆ ₹1,373 ಬೆಲೆ ನೀಡಿ ಖರೀದಿಸಲಾಗಿದೆ ಎಂದು ಟ್ರಸ್ಟಿಯೊಬ್ಬರು ತಿಳಿಸಿದ್ದಾರೆ.

‘ರಾಮಮಂದಿರಕ್ಕೆ ಹೆಚ್ಚಿನ ಸ್ಥಳ ಬೇಕಾಗಿರುವುದರಿಂದ, ನಾವು ಭೂಮಿಯನ್ನು ಖರೀದಿಸಿದ್ದಾಗಿ’ ಟ್ರಸ್ಟಿ ಅನಿಲ್ ಮಿಶ್ರಾ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಮೂಲಗಳ ಪ್ರಕಾರ, ಟ್ರಸ್ಟ್ ಹೆಚ್ಚಿನ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಯೋಜಿಸಿದೆ ಮತ್ತು ರಾಮ ಮಂದಿರ ಸಂಕೀರ್ಣದ ಪಕ್ಕದಲ್ಲಿರುವ ದೇವಾಲಯಗಳು, ಮನೆಗಳು ಮತ್ತು ಖಾಲಿ ಇರುವ ಜಮೀನಿನ ಮಾಲೀಕರೊಂದಿಗೆ ಮಾತುಕತೆ ನಡೆಸುತ್ತಿದೆ.

ಈ ಯೋಜನೆಯನ್ನು 107 ಎಕರೆಗಳಿಗೆ ವಿಸ್ತರಿಸಲು ಟ್ರಸ್ಟ್ ಬಯಸಿದೆ. ಆ ಗುರಿ ತಲುಪಲು ಇನ್ನೂ 14,30,195 ಚದರ ಅಡಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ ಎಂದು ಮೂಲಗಳು ತಿಳಿಸಿವೆ.

ಐಟಿ ದಾಳಿ: ₹ 650 ಕೋಟಿ ಅಕ್ರಮ ಪತ್ತೆ

ನವದೆಹಲಿ (ಪಿಟಿಐ): ಎರಡು ಚಲನಚಿತ್ರ ನಿರ್ಮಾಣ ಕಂಪನಿಗಳು, ಎರಡು ಟ್ಯಾಲೆಂಟ್ ಮ್ಯಾನೇಜ್ಮೆಂಟ್ ಕಂಪನಿಗಳು ಮತ್ತು ಪ್ರಮುಖ ನಟಿಯ ಮನೆ ಮತ್ತು ಸಂಬಂಧಿತ ಪ್ರದೇಶಗಳಲ್ಲಿ ನಡೆದ ಆದಾಯ ತೆರಿಗೆ ಇಲಾಖೆಯ ದಾಳಿ ನಂತರ ₹ 650 ಕೋಟಿ ಆರ್ಥಿಕ ಅಕ್ರಮಗಳನ್ನು ಪತ್ತೆ ಮಾಡಿರುವುದಾಗಿ ಕೇಂದ್ರೀಯ ನೇರ ತೆರಿಗೆ ಮಂಡಳಿ ಗುರುವಾರ ಹೇಳಿದೆ.

ಬಾಲಿವುಡ್ ನಟ ತಾಪ್ಸಿ ಪನ್ನು, ಫ್ಯಾಂಟಮ್ ಫಿಲ್ಮ್ ಕಂಪನಿ ಸ್ಥಾಪಕರಾದ ನಿರ್ದೇಶಕ ಅನುರಾಗ್ ಕಶ್ಯಪ್ ಮತ್ತು ಅವರ ಪಾಲುದಾರರ ಮನೆಗಳು ಮತ್ತು ಕಚೇರಿಗಳ ಮೇಲೆ ದಾಳಿ ಬಳಿಕ ಸಿಬಿಡಿಟಿ ಈ ಹೇಳಿಕೆ ಬಿಡುಗಡೆ ಮಾಡಿದೆ.

ನಟಿ ತಾಪ್ಸಿ ಪನ್ನು ಮತ್ತು ನಿರ್ದೇಶಕ ಅನುರಾಗ್ ಕಶ್ಯಪ್ ಅವರ ಮೇಲೆ ನಡೆದ ಐ.ಟಿ. ಇಲಾಖೆ ದಾಳಿಯು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ವಾಗ್ವಾದಕ್ಕೆ ಕಾರಣವಾಗಿದೆ.

ಒಟಿಟಿಯಲ್ಲಿ ನೀಲಿ ಚಿತ್ರವೂ ಪ್ರಸಾರ: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಒಟಿಟಿ ವೇದಿಕೆಗಳ ಕೆಲವು ಕಾರ್ಯಕ್ರಮಗಳು ನೀಲಿ ಚಿತ್ರದಂತಿರುತ್ತವೆ (ಕಾಮಪ್ರಚೋದಕ ವಿಡಿಯೊ). ಹಾಗಾಗಿ, ಇಂತಹ ಕಾರ್ಯಕ್ರಮಗಳು ಪ್ರಸಾರವಾಗುವ ಮುನ್ನ ಪರಿಶೀಲನೆಗೆ ಒಳಪಡಿಸುವ ವ್ಯವಸ್ಥೆ ಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿದೆ.

ಸಾಮಾಜಿಕ ಜಾಲತಾಣಗಳನ್ನು ನಿಯಂತ್ರಿಸಲು ಇತ್ತೀಚೆಗೆ ಪ್ರಕಟಿಸಲಾದ ಮಾರ್ಗಸೂಚಿಗಳನ್ನು ನ್ಯಾಯಾಲಯಕ್ಕೆ ಶುಕ್ರವಾರ ಸಲ್ಲಿಸುವಂತೆ ನ್ಯಾಯಮೂರ್ತಿ ಅಶೋಕ್ ಭೂಷಣ್ ನೇತೃತ್ವದ ಪೀಠವು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚಿಸಿತು. ಅಮೆಜಾನ್ ಪ್ರೈಮ್ ವಿಡಿಯೊ ಭಾರತ ವಿಭಾಗದ ಮುಖ್ಯಸ್ಥೆ ಅಪರ್ಣಾ ಪುರೋಹಿತ್ ಅವರ ಜಾಮೀನು ಅರ್ಜಿಯ ವಿಚಾರಣೆಯೂ ಶುಕ್ರವಾರ ನಡೆಯಲಿದೆ.

‘ತಾಂಡವ್’ ವೆಬ್ ಸರಣಿಯ ವಿರುದ್ಧದಾಖಲಾಗಿರುವಎಫ್‌ಐಆರ್‌ಗೆ ಸಂಬಂಧಿಸಿ ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ತಳ್ಳಿ ಹಾಕಿತ್ತು. ಅದನ್ನು ಪ್ರಶ್ನಿಸಿ ಅಪರ್ಣಾ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

‘ಒಟಿಟಿ ವೇದಿಕೆಯಲ್ಲಿ ಪ್ರಸಾರವಾಗುವ ಸಿನಿಮಾಗಳು ಮತ್ತು ಕಾರ್ಯಕ್ರಮಗಳ ಮೇಲೆ ಒಂದು ಮಟ್ಟಿನ ನಿಗಾ ಬೇಕು ಎಂಬುದು ನಮ್ಮ ಅಭಿಪ್ರಾಯ. ಹಾಗಾಗಿಯೇ ನೀವು ಪ್ರಕಟಿಸಿರುವ ಮಾರ್ಗಸೂಚಿಗಳನ್ನು ನೋಡಬೇಕಿದೆ. ಅವರು (ಒಟಿಟಿ) ಏನು ತೋರಿಸುತ್ತಿದ್ದಾರೆ? ಕೆಲವೊಂದು ಸಿನಿಮಾಗಳು ನೀಲಿ ಚಿತ್ರಗಳಂತಿರುತ್ತವೆ. ಏನಾದರೊಂದು ನಿಯಂತ್ರಣ ಬೇಕು. ಸಮತೋಲನ ಇರಬೇಕು’ ಎಂದು ಪೀಠವು ಹೇಳಿದೆ. ಇಂತಹ ವೇದಿಕೆಗಳಲ್ಲಿ ಕೊಳಕು ಮತ್ತು ನಿಂದನಾತ್ಮಕವಾದ ಕಾರ್ಯಕ್ರಮಗಳೂ ಪ್ರಸಾರವಾಗುತ್ತವೆ ಎಂದು ತುಷಾರ್ ಮೆಹ್ತಾ ಹೇಳಿದರು.

ಅಪರ್ಣಾ ಅವರ ವಿರುದ್ಧ ಅಲಹಾಬಾದ್ ಹೈಕೋರ್ಟ್ ನೀಡಿರುವ ಆದೇಶವು ಒಟಿಟಿ ನಿಯಂತ್ರಣ ಮಾರ್ಗಸೂಚಿ ಆಧಾರಿತ ಅಲ್ಲ. ಅಪರ್ಣಾ ಅವರದ್ದು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವಿಚಾರ ಎಂದು ಅಪರ್ಣಾ ಪರ ವಕೀಲ ಮುಕುಲ್ ರೋಹಟಗಿ ವಾದಿಸಿದರು.

ತಾಂಡವ್ ವೆಬ್ ಸರಣಿಯ ನಟರು ಮತ್ತು ನಿರ್ಮಾಪಕರು ಮಧ್ಯಂತರ ರಕ್ಷಣೆ ಕೋರಿ ಸುಪ್ರೀಂ ಕೋರ್ಟ್‌ಗೆ ಮೊದಲು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಹೈಕೋರ್ಟ್‌ಗೆ ಹೋಗುವಂತೆ ಜನವರಿ 27ರಂದು ಸೂಚಿಸಿತ್ತು.

ದುಬೈ: ಶಿವಮೊಗ್ಗದ ಎಂಜಿನಿಯರ್‌ಗೆ ₹24 ಕೋಟಿ ಲಾಟರಿ

ದುಬೈ (ಪಿಟಿಐ): ದುಬೈನಲ್ಲಿ ನೆಲೆಸಿರುವ ಶಿವಮೊಗ್ಗ ಮೂಲದ ಮೆಕಾನಿಕಲ್ ಎಂಜಿನಿಯರ್ ಶಿವಮೂರ್ತಿ ಕೃಷ್ಣಪ್ಪ ಅವರಿಗೆ ಲಾಟರಿಯಲ್ಲಿ ₹ 24 ಕೋಟಿ ಬಹುಮಾನ ಬಂದಿದೆ.

‘ಇವರು, ಕಳೆದ 15 ವರ್ಷಗಳಿಂದ ದುಬೈನಲ್ಲಿ ವಾಸವಾಗಿದ್ದಾರೆ. ಬಹುಮಾನ ವಿಜೇತ 202511 ಸಂಖ್ಯೆಯ ಟಿಕೆಟ್ ಅನ್ನು ಅವರು ಫೆಬ್ರುವರಿ 17ರಂದು ಖರೀದಿಸಿದ್ದರು’ ಎಂದು ಗಲ್ಫ್ ನ್ಯೂಸ್ ವರದಿ ತಿಳಿಸಿದೆ.

ಮನೆಯಲ್ಲಿ ಕುಳಿತೇ ನೇರ ಪ್ರಸಾರದಲ್ಲಿ ಲಕ್ಕಿ ಡ್ರಾ ವೀಕ್ಷಿಸಿದ ಶಿವಮೂರ್ತಿ ಅವರು ಫಲಿತಾಂಶ ಕಂಡು ಉತ್ಸುಕರಾಗಿದ್ದರು. ‘ಡ್ರಾ ನಡೆಸಿಕೊಟ್ಟ ರಿಚರ್ಡ್ ಅವರು ದೂರವಾಣಿ ಮೂಲಕ ವಿಷಯ ತಿಳಿಸಿದಾಗ, ನಾನು ನೇರ ಪ್ರಸಾರ ವೀಕ್ಷಿಸುತ್ತಿದ್ದೇನೆ. ನನಗೆ ನಂಬಲಾಗುತ್ತಿಲ್ಲ’ ಎಂದು ಪ್ರತಿಕ್ರಿಯಿಸಿದರು ಎಂದು ವರದಿ ಉಲ್ಲೇಖಿಸಿದೆ.

ನನ್ನ ಕುಟುಂಬ ಸದಸ್ಯರಿಗಾಗಿ ಹುಟ್ಟೂರಿನಲ್ಲಿ ನಾನು ಮನೆ ನಿರ್ಮಿಸಲು ಬಯಸಿದ್ದೇನೆ. 10 ಮತ್ತು 4 ವರ್ಷದ ಇಬ್ಬರು ಮಕ್ಕಳಿದ್ದಾರೆ. ಬಹುಮಾನದಲ್ಲಿ ದೊಡ್ಡ ಮೊತ್ತವನ್ನು ಅವರ ಹೆಸರಿನಲ್ಲಿ ಠೇವಣಿ ಇರಿಸುತ್ತೇನೆ ಎಂದು ಹೇಳಿದರು. ಶಿವಮೂರ್ತಿ ಅವರು ಕಳೆದ ಮೂರು ವರ್ಷಗಳಿಂದ ದೊಡ್ಡ ಮೊತ್ತದ ಲಾಟರಿ ಖರೀದಿಸುತ್ತಲೇ ಇದ್ದರು.

ಇಂಟರ್‌ನೆಟ್ ಸ್ಥಗಿತ: ಅಗ್ರಸ್ಥಾನದಲ್ಲಿ ಭಾರತ

ಬೆಂಗಳೂರು: ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಸರ್ಕಾರಗಳು ಇಂಟರ್‌ನೆಟ್ ಸಂಪರ್ಕ ಸ್ಥಗಿತಗೊಳಿಸುವುದು ಇತ್ತೀಚೆಗೆ ಹೆಚ್ಚಾಗುತ್ತಿದೆ. ಆದರೆ ಜಾಗತಿಕವಾಗಿ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸುವ ದೇಶಗಳ ಪೈಕಿ, ಭಾರತ ನಂಬರ್ 1 ಸ್ಥಾನದಲ್ಲಿದೆ ಎಂದು ವರದಿಯೊಂದು ಹೇಳಿದೆ.

ವಿವಿಧ ಕಾರಣಗಳಿಗೆ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸುವ ರಾಷ್ಟ್ರಗಳ ಕುರಿತು ಅಕ್ಸೆಸ್ ನೌ ವರದಿ ತಯಾರಿಸಿದ್ದು, 2020ರಲ್ಲಿ ಒಟ್ಟು 109 ಬಾರಿ ವಿವಿಧ ತಾಣಗಳಲ್ಲಿ ದೇಶದಲ್ಲಿ ಇಂಟರ್‌ನೆಟ್ ಸ್ಥಗಿತವಾಗಿತ್ತು ಎಂದು ಹೇಳಿದೆ. ಅಲ್ಲದೆ, ಎರಡನೇ ಸ್ಥಾನದಲ್ಲಿರುವ ಯೆಮೆನ್‌ನಲ್ಲಿ ಒಟ್ಟು 6 ಬಾರಿ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಲಾಗಿತ್ತು ಎಂದು ಅಕ್ಸೆಸ್ ನೌ ಹೇಳಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಅತಿ ಹೆಚ್ಚು ಬಾರಿ, 18 ತಿಂಗಳ ಕಾಲ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಲಾಗಿತ್ತು, ಇದು ಪ್ರಜಾಪ್ರಭುತ್ವ ರಾಷ್ಟ್ರವೊಂದರಲ್ಲಿ ಅತಿ ಸುದೀರ್ಘ ಅವಧಿ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಭಾರತಕ್ಕೆ ಪ್ರಮುಖ ರಕ್ಷಣಾ ಸಾಮಗ್ರಿ ಮಾರಾಟ

ವಾಷಿಂಗ್ಟನ್ (ಪಿಟಿಐ): ಭಾರತಕ್ಕೆ ₹14547.50 ಕೋಟಿ ಮೌಲ್ಯದ (2000 ಕೋಟಿ ಡಾಲರ್) ಪ್ರಮುಖ ರಕ್ಷಣಾ ಸಾಮಗ್ರಿಗಳನ್ನು ಅಮೆರಿಕ ಮಾರಾಟ ಮಾಡಿದೆ. ಇದು ಭಾರತದ ಭದ್ರತೆ ಮತ್ತು ಸಾರ್ವಭೌಮತ್ವ ಕಾಪಾಡಲು ಬೆಂಬಲ ನೀಡಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಅಮೆರಿಕ ಪ್ರತಿಪಾದಿಸಿದೆ. ‘ಅತ್ಯಾಧುನಿಕ ರಕ್ಷಣಾ ಸಾಮಗ್ರಿಗಳನ್ನು ಭಾರತಕ್ಕೆ ಮಾರಾಟ ಮಾಡುವ ಮೂಲಕ ನಮ್ಮ ಸಹಭಾಗಿತ್ವವನ್ನು ಮತ್ತೊಮ್ಮೆ ಬಲವಾಗಿ ವ್ಯಕ್ತಪಡಿಸಿದ್ದೇವೆ’ ಎಂದು ಅಮೆರಿಕ ವಿದೇಶಾಂಗ ಇಲಾಖೆಯ ವಕ್ತಾರ ನೆಡ್ ಪ್ರೈಸ್ ತಿಳಿಸಿದ್ದಾರೆ.

ಖಲೀದಾ ಜಿಯಾ ಶಿಕ್ಷೆ ಪ್ರಮಾಣ ಕಡಿತ: ಪರಿಶೀಲನೆ

ಢಾಕಾ (ಪಿಟಿಐ): ಬಾಂಗ್ಲಾದೇಶದ ಮಾಜಿ ಪ್ರಧಾನಿ ಖಲಿದಾ ಜಿಯಾ ಅವರಿಗೆ ವಿಧಿಸಿರುವ ಶಿಕ್ಷೆಯ ಪ್ರಮಾಣವನ್ನು ಕಡಿಮೆಗೊಳಿಸುವುದು ಮತ್ತು ಜಾಮೀನು ಪಡೆಯಲು ವಿಧಿಸಿರುವ ಷರತ್ತುಗಳನ್ನು ಸಡಿಲಗೊಳಿಸುವ ಬಗ್ಗೆ ಸರ್ಕಾರ ಶೀಘ್ರ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.

ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಎರಡು ಪ್ರಕರಣಗಳಲ್ಲಿ 2018ರ ಫೆಬ್ರುವರಿ 8ರಿಂದ ಖಲಿದಾ ಜಿಯಾ ಅವರು 17 ವರ್ಷಗಳ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ. ಆದರೆ, ಅನಾರೋಗ್ಯದ ಕಾರಣ ಶಿಕ್ಷೆ ಪ್ರಮಾಣ ಮತ್ತು ಜಾಮೀನು ಪಡೆಯಲು ವಿಧಿಸಿರುವ ಷರತ್ತುಗಳನ್ನು ಸಡಿಲಿಸುವ ಬಗ್ಗೆ ಕಾನೂನು ಸಚಿವಾಲಯದ ಜತೆ ಚರ್ಚಿಸಲಾಗುವುದು ಎಂದು ಗೃಹ ಸಚಿವರು ಹೇಳಿದ್ದಾರೆ.

ಸೇನಾದಂಗೆ ವಿರುದ್ಧ ಜನಾಕ್ರೋಶ ತೀವ್ರ

ನೇ ಪೈ ಟೌ, ಮ್ಯಾನ್ಮಾರ್ (ಎಪಿ): ಮ್ಯಾನ್ಮಾರ್‌ನಲ್ಲಿ ಕಳೆದ ತಿಂಗಳು ನಡೆದಿದ್ದ ಸೇನಾ ದಂಗೆ ವಿರುದ್ಧ ಜನರ ಪ್ರತಿಭಟನೆ ತೀವ್ರಗೊಂಡಿದ್ದು, ಜನರು ಬೀದಿಗೆ ಬಂದಿದ್ದಾರೆ. ಭದ್ರತಾ ಪಡೆಗಳು, ಪೊಲೀಸರ ಗುಂಡಿಗೆ ಕನಿಷ್ಠ 38 ಮಂದಿ ಮೃತಪಟ್ಟಿದ್ದರೂ, ಜನರು ಗುಂಡಿಗೆ ಹೆದರದೆ ಮುನ್ನುಗ್ಗಿದ್ದಾರೆ.

ದೇಶದ ಅತಿದೊಡ್ಡ ನಗರವಾದ ಯಂಗೋನ್‌ನ ಮೂರು ಕಡೆ ಪ್ರತಿಭಟನೆ ನಡೆದಿದೆ. ಪ್ರತಿಭಟನೆ ಹತ್ತಿಕ್ಕಲು ಪೊಲೀಸರು, ಭದ್ರತಾ ಪಡೆಗಳ ಯತ್ನ ವಿಫಲವಾಗಿದ್ದು, ನಾಗರಿಕರು ಪೊಲೀಸರ ಗುಂಡಿಗೂ ಜಗ್ಗದೇ ಪ್ರತಿಭಟನೆ ಮುಂದುವರಿಸಿದ್ದಾರೆ.

ಮ್ಯಾಂಡಲೇ ನಗರದಲ್ಲಿಯೂ ಪ್ರತಿಭಟನೆ ತೀವ್ರಗೊಂಡಿದೆ. ಮ್ಯಾನ್ಮಾರ್‌ಗೆ ವಿಶ್ವಸಂಸ್ಥೆಯ ವಿಶೇಷ ಪ್ರತಿನಿಧಿಯಾಗಿರುವ ಕ್ರಿಸ್ಟೈನ್ ಸ್ಕ್ಯಾನೆರ್ ಬರ್ಗನರ್ ಅವರು, ಬುಧವಾರ ಕನಿಷ್ಠ 38 ಜನರು ಸತ್ತಿರದ್ದಾರೆ ಎಂದು ತಿಳಿಸಿದ್ದಾರೆ.

ಸೇನಾದಂಗೆ ವಿರುದ್ಧ ಪ್ರತಿಭಟನೆ ಆರಂಭಗೊಂಡಂತೆ ಕಳೆದ ಫೆಬ್ರುವರಿ 1ಕ್ಕೆ ಹೋಲಿಸಿದರೆ ಸಾವಿನ ಸಂಖ್ಯೆ ಇದು ಅತ್ಯಧಿಕ. ಈವರೆಗೆ ಕನಿಷ್ಠ 50 ಮಂದಿ ಸತ್ತಿದ್ದಾರೆ. ಇವರೆಲ್ಲರೂ, ಬಹುತೇಕ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದವರು ಎನ್ನಲಾಗಿದೆ.

ವಿಶ್ವಾಸಮತ ಯಾಚಿಸಲು ಇಮ್ರಾನ್ ನಿರ್ಧಾರ

ಇಸ್ಲಾಮಾಬಾದ್ (ಪಿಟಿಐ): ಸಂಸತ್ ಚುನಾವಣೆಯಲ್ಲಿ ಹಣಕಾಸು ಸಚಿವ ಸೋಲು ಕಂಡಿರುವ ಬೆನ್ನಲ್ಲೇ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಸಂಸತ್ತಿನಲ್ಲಿ ವಿಶ್ವಾಸ ಮತಯಾಚಿಸಲು ನಿರ್ಧರಿಸಿದ್ದಾರೆ.

ಚುನಾವಣೆಯಲ್ಲಿ ಮಾಜಿ ಪ್ರಧಾನಿ ಯೂಸುಫ್ ರಾಜಾ ಗಿಲಾನಿ ಎದುರು ಇಮ್ರಾನ್ ಆಪ್ತ ಮತ್ತು ಹಣಕಾಸು ಸಚಿವ ಅಬ್ದುಲ್ ಹಫೀಜ್ ಶೇಖ್ ಬುಧವಾರ ಸೋಲು ಅನುಭವಿಸಿದರು. ಪಾಕಿಸ್ತಾನ್ ತೆಹ್ರೀಕ್–ಇ–ಇನ್ಸಾಫ್ (ಪಿಟಿಐ) ಅಧ್ಯಕ್ಷರೂ ಆಗಿರುವ ಇಮ್ರಾನ್ ಪ್ರಚಾರ ಕೈಗೊಂಡಿದ್ದರು.

ಸಿಡ್ನಿ: ಸಿಖ್ಖರ ಮೇಲೆ ಭಾರತೀಯರಿಂದಲೇ ದಾಳಿ

ಮೆಲ್ಬರ್ನ್ (ಪಿಟಿಐ): ಭಾರತದಲ್ಲಿನ ನೂತನ ಕೃಷಿ ಕಾಯ್ದೆಗಳಿಗೆ ಸಂಬಂಧಿಸಿದಂತೆ ಆಸ್ಟ್ರೇಲಿಯಾದಲ್ಲಿರುವ ಭಾರತೀಯರ ನಡುವೆ ಸಂಘರ್ಷ ಆರಂಭಗೊಂಡಿದ್ದು, ಸಿಖ್ಖರ ಗುಂಪೊಂದರ ಮೇಲೆ ಗುಂಪೊಂದು ಹಲ್ಲೆ ನಡೆಸಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ. ‘ಸಿಡ್ನಿಯ ಹ್ಯಾರಿಸ್ ಪಾರ್ಕ್‌ನಲ್ಲಿ ಅಪರಿಚಿತರ ಗುಂಪೊಂದು ಸುತ್ತಿಗೆ, ಬೇಸ್‌ಬಾಲ್ ಬ್ಯಾಟ್ ಹಾಗೂ ಬಡಿಗೆಗಳಿಂದ ನಮ್ಮ ಕಾರಿನ ಮೇಲೆ ದಾಳಿ ನಡೆಸಿತು’ ಎಂದು ದಾಳಿಗೆ ಒಳಗಾದ ವ್ಯಕ್ತಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ ‘7ನ್ಯೂಸ್’ ಎಂಬ ಸುದ್ದಿವಾಹಿನಿ ವರದಿ ಮಾಡಿದೆ.

ಮೊಟೇರಾದಲ್ಲಿ ನಾಲ್ಕನೇ ಟೆಸ್ಟ್: ಅಕ್ಷರ್ ಪಟೇಲ್‌ಗೆ ನಾಲ್ಕು, ಅಶ್ವಿನ್‌ಗೆ ಮೂರು ವಿಕೆಟ್: ಬೆನ್ ಸ್ಟೋಕ್ಸ್ ಅರ್ಧಶತಕ

ಸ್ಪಿನ್ ಭಯಕ್ಕೆ ಲಯ ತಪ್ಪಿದ ಇಂಗ್ಲೆಂಡ್

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಇಂಗ್ಲೆಂಡ್ ತಂಡದ ಬ್ಯಾಟ್ಸ್‌ಮನ್‌ಗಳು ಗುರುವಾರ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮತ್ತೊಮ್ಮೆ ಮನೋದಾರ್ಢ್ಯ ಮತ್ತು ಕೌಶಲಗಳ ಸತ್ವಪರೀಕ್ಷೆಯಲ್ಲಿ ಅನುತ್ತೀರ್ಣರಾದರು.

ಮತ್ತೊಮ್ಮೆ ಅಕ್ಷರ್ ಪಟೇಲ್ ಮತ್ತು ರವಿಚಂದ್ರನ್ ಅಶ್ವಿನ್ ಅವರ ಕೈಚಳಕದ ಮುಂದೆ ಶರಣಾದರು. ಮೊದಲ ಇನಿಂಗ್ಸ್‌ನಲ್ಲಿ 75.5 ಓವರ್‌ಗಳಲ್ಲಿ 205 ರನ್‌ಗಳಿಗೆ ಎಲ್ಲ ವಿಕೆಟ್‌ಗಳನ್ನೂ ಕಳೆದುಕೊಂಡಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಇಂಗ್ಲೆಂಡ್ ನಾಯಕ ಜೋ ರೂಟ್ ಅವರ ಲೆಕ್ಕಾಚಾರಕ್ಕೆ ತಕ್ಕಂತಹ ಮೊತ್ತ ಗಳಿಕೆಯಾಗಲಿಲ್ಲ. ಅದಕ್ಕುತ್ತರವಾಗಿ ಭಾರತ ತಂಡವು ದಿನದಾಟದ ಅಂತ್ಯಕ್ಕೆ 12 ಓವರ್‌ಗಳಲ್ಲಿ 1ವಿಕೆಟ್‌ಗೆ 24 ರನ್ ಗಳಿಸಿದೆ. ರೋಹಿತ್ ಶರ್ಮಾ (ಬ್ಯಾಟಿಂಗ್ 8, 34ಎಸೆತ) ಮತ್ತು ಚೇತೇಶ್ವರ್ ಪೂಜಾರ (ಬ್ಯಾಟಿಂಗ್ 15; 36) ಕ್ರೀಸ್‌ನಲ್ಲಿದ್ದಾರೆ.

ಜೇಮ್ಸ್ ಆ್ಯಂಡರ್ಸನ್ ಹಾಕಿದ ಇನಿಂಗ್ಸ್‌ನ ಮೊದಲ ಓವರ್‌ನ ಮೂರನೇ ಎಸೆತದಲ್ಲಿಯೇ ಶುಭಮನ್ ಗಿಲ್ ಎಲ್‌ಬಿಡಬ್ಲ್ಯು ಆದರು. ಆಗ ಕ್ರೀಸ್‌ಗೆ ಬಂದ ಪೂಜಾರ ಆತ್ಮವಿಶ್ವಾಸದಿಂದ ಬ್ಯಾಟಿಂಗ್‌ಗೆ ಕುದುರಿಕೊಂಡರು. ರೋಹಿತ್‌ಗಿಂತಲೂ ತುಸು ವೇಗವಾಗಿ ರನ್ ಗಳಿಸಿದರು.

ಈ ಪಂದ್ಯಕ್ಕೆ ಸಿದ್ಧಪಡಿಸಲಾಗಿರುವ ಪಿಚ್‌ನಲ್ಲಿ ಕೆಂಪು ಚೆಂಡು ಉತ್ತಮವಾಗಿ ತಿರುವು ಪಡೆಯುತ್ತಿತ್ತು. ಬೌನ್ಸ್ ಕೂಡ ಆಗುತ್ತಿತ್ತು. ಏಕಾಗ್ರತೆಯಿಂದ ಆಡುವ ಬ್ಯಾಟ್ಸ್‌ಮನ್‌ಗಳಿಗೆ ರನ್ ಗಳಿಸಲು ಕೂಡ ಸಾಧ್ಯವಾಯಿತು. ಅದಕ್ಕೆ ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್ (55; 121ಎಸೆತ, 6ಬೌಂಡರಿ, 2ಸಿಕ್ಸರ್) ಅವರ ಆಟವೇ ಸಾಕ್ಷಿ. ಆದರೆ, ಪ್ರವಾಸಿ ಆಟಗಾರರ ಮನಸ್ಥಿತಿ ಮತ್ತು ಪಿಚ್‌ನಲ್ಲಿದ್ದ ಸತ್ವವನ್ನು ಸೂಕ್ತವಾಗಿ ಬಳಸಿಕೊಂಡ ಸ್ಥಳೀಯ ಹೀರೊ ಅಕ್ಷರ್ (68ಕ್ಕೆ4), ಅಶ್ವಿನ್ (47ಕ್ಕೆ3) ಮತ್ತು ವಾಷಿಂಗ್ಟನ್ ಸುಂದರ್ (14ಕ್ಕೆ1) ತಮ್ಮ ಸ್ಪಿನ್ ಕೈಚಳಕವನ್ನು ಮೆರೆದರು.

ಇಂಗ್ಲೆಂಡ್ ಆರಂಭಿಕ ಜೋಡಿ ಜ್ಯಾಕ್ ಕ್ರಾಲಿ ಮತ್ತು ಡಾನ್ ಸಿಬ್ಲಿ ಅವರಿಬ್ಬರ ವಿಕೆಟ್‌ಗಳನ್ನೂ ಅಕ್ಷರ್ ಕಬಳಿಸಿದಾಗ ತಂಡದ ಮೊತ್ತವು 15 ರನ್‌ಗಳಾಗಿತ್ತು. ನಂತರ ಮಧ್ಯಮವೇಗಿ ಸಿರಾಜ್ ಕೂಡ ತಮ್ಮ ಸಾಮರ್ಥ್ಯ ಮೆರೆದರು. ತಮ್ಮ 'ಮದುವೆ' ಸಿದ್ಧತೆಗೆ ತೆರಳಿರುವ ಜಸ್‌ಪ್ರೀತ್ ಬೂಮ್ರಾ ಬದಲು ಕಣಕ್ಕಿಳಿದ ಸಿರಾಜ್ (45ಕ್ಕೆ2) ತಮ್ಮ ಹೊಣೆಯನ್ನು ಸಮರ್ಥವಾಗಿ ನಿಭಾಯಿಸಿದರು. ಜಾನಿ ಬೆಸ್ಟೊ ಮತ್ತು ನಾಯಕ ಜೋ ರೂಟ್ ಅವರಿಬ್ಬರನ್ನೂ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿ, ಇಂಗ್ಲೆಂಡ್ ಬ್ಯಾಟಿಂಗ್‌ಗೆ ಬಲವಾದ ಹೊಡೆತ ಕೊಟ್ಟರು.

ಬೆಸ್ಟೊ, ಡ್ಯಾನ್ ಲಾರೆನ್ಸ್ (46, 74ಎಸೆತ) ಮತ್ತು ಓಲಿ ಪೋಪ್ (29, 87ಎ) ಭರವಸೆ ಮೂಡಿಸಿದರು. ಆದರೆ, ದೊಡ್ಡ ಇನಿಂಗ್ಸ್ ಕಟ್ಟುವಲ್ಲಿ ಎಡವಿದರು. ಇದ್ದುದರಲ್ಲಿ ಸ್ಟೋಕ್ಸ್ ಉತ್ತಮವಾಗಿ ಆಡಿದರು. ಆದರೆ, ವಾಷಿಂಗ್ಟನ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಇದರಿಂದಾಗಿ ಚಹಾ ವಿರಾಮದ ನಂತರ ತಂಡವು ಕುಸಿಯಿತು.

ಬಹುತೇಕ ಬ್ಯಾಟ್ಸ್‌ಮನ್‌ಗಳು ಸ್ಪಿನ್ ಎಸೆತಗಳ ಎದುರು ಸರಿಯಾದ ಪಾದಚಲನೆ ಮಾಡುವಲ್ಲಿ ಮತ್ತು ಸೂಕ್ತ ಹೊಡೆತಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ವಿಫಲರಾದರು.



ವಿಕೆಟ್ ಗಳಿಸಿದ ಅಕ್ಷರ್ ಪಟೇಲ್ ಅವರನ್ನು ಅಭಿನಂದಿಸಿದ ನಾಯಕ ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ಇಂಗ್ಲೆಂಡ್ (ಮೊದಲ ಇನಿಂಗ್ಸ್) 205 (75.5 ಓವರ್‌ಗಳಲ್ಲಿ)

ಜಾಕ್ ಕ್ರಾಲಿ ಸಿ ಮೊಹಮ್ಮದ್ ಸಿರಾಜ್ ಬಿ ಅಕ್ಷರ್ ಪಟೇಲ್	9
ಡಾಮ್ ಸಿಬ್ಲಿ ಬಿ ಅಕ್ಷರ್ ಪಟೇಲ್	2
ಜಾನಿ ಬೆಸ್ಟೊ ಎಲ್‌ಬಿಡಬ್ಲ್ಯು ಬಿ ಮೊಹಮ್ಮದ್ ಸಿರಾಜ್	28
ಜೋ ರೂಟ್ ಎಲ್‌ಬಿಡಬ್ಲ್ಯು ಬಿ ಮೊಹಮ್ಮದ್ ಸಿರಾಜ್	5
ಬೆನ್ ಸ್ಟೋಕ್ಸ್ ಎಲ್‌ಬಿಡಬ್ಲ್ಯು ವಾಷಿಂಗ್ಟನ್ ಸುಂದರ್	55
ಒಲಿ ಪೋಪ್ ಸಿ ಶುಭಮನ್ ಗಿಲ್ ಬಿ ಆರ್. ಅಶ್ವಿನ್	29
ಡ್ಯಾನ್ ಲಾರೆನ್ಸ್ ಸ್ಟಂಪ್ಡ್ ರಿಷಭ್ ಪಂತ್ ಬಿ ಅಕ್ಷರ್ ಪಟೇಲ್	46
ಬೆನ್ ಫೋಕ್ಸ್ ಸಿ ಅಜಿಂಕ್ಯ ರಹಾನೆ ಬಿ ಆರ್.ಅಶ್ವಿನ್	1
ಡಾಮ್ ಬೆಸ್ ಎಲ್‌ಬಿಡಬ್ಲ್ಯು ಬಿ ಅಕ್ಷರ್ ಪಟೇಲ್	3
ಜ್ಯಾಕ್ ಲೀಚ್ ಎಲ್‌ಬಿಡಬ್ಲ್ಯು ಬಿ ಆರ್. ಅಶ್ವಿನ್	7
ಜೇಮ್ಸ್ ಆ್ಯಂಡರ್ಸನ್ ಔಟಾಗದೆ	10
ಇತರೆ (ಬೈ 3 , ಲೆಗ್‌ಬೈ 5, ನೋಬಾಲ್ 1, ವೈಡ್ 1)	10

ವಿಕೆಟ್ ಪತನ: 1-10 (ಡಾಮ್ ಸಿಬ್ಲಿ, 5.2), 2-15 (ಜ್ಯಾಕ್ ಕ್ರಾಲಿ, 7.5), 3-30 (ಜೋ ರೂಟ್, 12.1), 4-78 (ಜಾನಿ ಬೆಸ್ಟೊ, 28.1), 5-121 (ಬೆನ್ ಸ್ಟೋಕ್ಸ್, 46.4), 6-166 (ಒಲಿ ಪೋಪ್, 61.3), 7-170 (ಬೆನ್ ಫೋಕ್ಸ್, 65.4), 8-188 (ಡ್ಯಾನ್ ಲಾರೆನ್ಸ್, 70.1), 9-189 (ಡಾಮ್ ಬೆಸ್, 70.4), 10-205 (ಜ್ಯಾಕ್ ಲೀಚ್, 75.5)

ಬೌಲಿಂಗ್: ಇಶಾಂತ್ ಶರ್ಮಾ 9–2–23–0, ಮೊಹಮ್ಮದ್ ಸಿರಾಜ್ 14–2–45–2, ಅಕ್ಷರ್ ಪಟೇಲ್ 26–7–68–4, ಆರ್.ಅಶ್ವಿನ್ 19.5–4–47–3, ವಾಷಿಂಗ್ಟನ್ ಸುಂದರ್ 7–1–14–1

ಭಾರತ (ಮೊದಲ ಇನಿಂಗ್ಸ್) 1ಕ್ಕೆ 24 (12 ಓವರ್‌ಗಳಲ್ಲಿ)

ಶುಭಮನ್ ಗಿಲ್ ಎಲ್‌ಬಿಡಬ್ಲ್ಯು ಜೇಮ್ಸ್ ಆ್ಯಂಡರ್ಸನ್	0
ರೋಹಿತ್ ಶರ್ಮಾ ಬ್ಯಾಟಿಂಗ್	8
ಚೇತೇಶ್ವರ್ ಪೂಜಾರ ಬ್ಯಾಟಿಂಗ್	15
ಇತರೆ (ನೋಬಾಲ್ 1)	1

ವಿಕೆಟ್ ಪತನ: 1-0 (ಶುಭಮನ್ ಗಿಲ್, 0.3)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 5–5–0–1, ಬೆನ್ ಸ್ಟೋಕ್ಸ್ 2–1–4–0, ಜ್ಯಾಕ್ ಲೀಚ್ 4–0–16–0, ಡಾಮ್ ಬೆಸ್ 1–0–4–0

ಇದು ಬ್ಯಾಟಿಂಗ್ ಸ್ನೇಹಿ ವಿಕೆಟ್. ತಂಡದಲ್ಲಿ ಇಬ್ಬರೇ ಮಧ್ಯಮವೇಗಿಗಳಿದ್ದ ಕಾರಣ ಸ್ಪಿನ್ನರ್ ಜೊತೆ ರೊಟೇಷನ್ ಮಾಡಿ ವಿಶ್ರಾಂತಿ ಸಿಗುವಂತೆ ತಂತ್ರ ಹೆಣೆಯಲಾಗಿತ್ತು.

ಮೊಹಮ್ಮದ್ ಸಿರಾಜ್ ಭಾರತದ ಬೌಲರ್

ಮುಖ್ಯಾಂಶಗಳು

- ಸೊನ್ನೆ ಸುತ್ತಿದ ಶುಭಮನ್ ಗಿಲ್
- ಮೊಹಮ್ಮದ್ ಸಿರಾಜ್‌ಗೆ ಎರಡು ವಿಕೆಟ್
- ಮೊದಲ ದಿನವೇ ಒಟ್ಟು 11 ವಿಕೆಟ್ ಪತನ

ಬೌನ್ಸರ್‌ಗೆ ಕುಪಿತಗೊಂಡ ಸ್ಟೋಕ್ಸ್

ಅಹಮದಾಬಾದ್: ಇಂಗ್ಲೆಂಡ್‌ನ ಬ್ಯಾಟ್ಸ್‌ಮನ್ ಬೆನ್ ಸ್ಟೋಕ್ಸ್ ತಮ್ಮನ್ನು ನಿಂದಿಸುತ್ತಿದ್ದರು. ಆಗ ಧಾವಿಸಿದ ನಾಯಕ ವಿರಾಟ್ ಕೊಹ್ಲಿ ಪರಿಸ್ಥಿತಿಯನ್ನು ಚೆನ್ನಾಗಿ ನಿಭಾಯಿಸಿದರು ಎಂದು ಭಾರತ ಕ್ರಿಕೆಟ್ ತಂಡದ ಮಧ್ಯಮವೇಗಿ ಮೊಹಮ್ಮದ್ ಸಿರಾಜ್ ಹೇಳಿದರು.

ಇಂಗ್ಲೆಂಡ್ 30 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿದ್ದಾಗ ಬೆನ್ ಸ್ಟೋಕ್ಸ್ ಅವರಿಗೆ ಸಿರಾಜ್ ಬೌನ್ಸರ್ ಹಾಕಿದರು. ಆಗ ಕುಪಿತಗೊಂಡ ಸ್ಟೋಕ್ಸ್ ಅವರು ಸಿರಾಜ್ ಅವರನ್ನು ದುರುಗುಟ್ಟಿ ನೋಡಿದರು. ತಕ್ಷಣ ಸಿರಾಜ್ ಬೆಂಬಲಕ್ಕೆ ಧಾವಿಸಿದ ನಾಯಕ ವಿರಾಟ್ ಕೊಹ್ಲಿ, ಇಂಗ್ಲೆಂಡ್ ಆಟಗಾರ ಬೆನ್ ಸ್ಟೋಕ್ಸ್ ವಿರುದ್ಧ ವಾಗ್ವಾದಕ್ಕಿಳಿದರು. ಪರಿಣಾಮ ಕೊಹ್ಲಿ-ಸ್ಟೋಕ್ಸ್ ನಡುವೆ ಮಾತಿನ ಚಕಮಕಿ ನಡೆಯಿತು. ಬಳಿಕ ಅಂಪೈರ್ ಮಧ್ಯೆ ಪ್ರವೇಶಿಸಿ ವಾತಾವರಣವನ್ನು ಶಾಂತಗೊಳಿಸಿದರು.

ದಿನದಾಟದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿರಾಜ್ 'ಇವೆಲ್ಲವೂ ಆಟದಲ್ಲಿ ಸಾಮಾನ್ಯವಾಗಿ ನಡೆಯುತ್ತವೆ. ವಿರಾಟ್ ಈ ಸಂದರ್ಭವನ್ನು ಉತ್ತಮವಾಗಿ ನಿಭಾಯಿಸಿದರು' ಎಂದು ಹೇಳಿದರು.

ವಿರಾಟ್ ಕೊಹ್ಲಿ ಹಾವಭಾವಗಳನ್ನು ಗಮನಿಸಿರುವ ಅಭಿಮಾನಿಗಳು, 'ವಿಂಟೇಜ್' ಶೈಲಿಗೆ ಮರಳಿದ್ದಾರೆ ಎಂದು ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ. ಇನ್ನು ಕೆಲವರು ಆಸ್ಟ್ರೇಲಿಯಾ ಸರಣಿಯಲ್ಲಿ ಸಿರಾಜ್ ಜನಾಂಗೀಯ ನಿಂದನೆ ಎದುರಿಸಿದ್ದಾಗ ವಿರಾಟ್ ಕೊಹ್ಲಿ ಅಲ್ಲಿರಬೇಕಿತ್ತು ಎಂದು ಹೇಳಿದ್ದಾರೆ.

ಜೋಫ್ರಾಗೆ ಗಾಯ: ಇಂಗ್ಲೆಂಡ್ ತಂಡದ ವೇಗಿ ಜೋಫ್ರಾ ಆರ್ಚರ್ ಮೊಣಕೈ ನೋವಿನಿಂದಾಗಿ ನಾಲ್ಕನೇ ಟೆಸ್ಟ್ ನಲ್ಲಿ ಕಣಕ್ಕಿಳಿಯಲಿಲ್ಲ. ಇಂಗ್ಲೆಂಡ್ ತಂಡದಲ್ಲಿ ಬೆನ್ ಸ್ಟೋಕ್ಸ್ ಮತ್ತು ಇನ್ನೂ ಕೆಲವು ಆಟಗಾರರಿಗೆ ಹೊಟ್ಟೆ ನೋವಿತ್ತು ಎಂದು ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ತಿಳಿಸಿದೆ.

ಚೆನ್ನೈಗೆ ಬಂದ ಧೋನಿ

ಚೆನ್ನೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರಸಿಂಗ್ ಧೋನಿ ಬುಧವಾರ ರಾತ್ರಿ ಚೆನ್ನೈಗೆ ಬಂದಿಳಿದಿದ್ದಾರೆ.

ಇದೇ 9ರಿಂದ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಅಭ್ಯಾಸ ಆರಂಭಿಸುವ ನಿರೀಕ್ಷೆ ಇದೆ. ಧೋನಿ ಈಗ ಐದು ದಿನಗಳ ಕ್ವಾರಂಟೈನ್ ನಿಯಮ ಪಾಲಿಸಲಿದ್ದಾರೆ.

ಬುಧವಾರ ಅವರು ಚೆನ್ನೈ ವಿಮಾನನಿಲ್ದಾಣಕ್ಕೆ ಬಂದಿಳಿದ ಚಿತ್ರವನ್ನು ಸಿಎಸ್‌ಕೆಯು ಟ್ವಿಟರ್‌ನಲ್ಲಿ ಹಾಕಿದೆ.

ತಂಡದ ಮತ್ತೊಬ್ಬ ಆಟಗಾರ ಅಂಬಟಿ ರಾಯುಡು ಕೂಡ ಚೆನ್ನಗೆ ತಲುಪಿದ್ದಾರೆ.

'ಮಾರ್ಚ್ 9ರಂದು ಶಿಬಿರ ಶುರುವಾಗುವ ಸಾಧ್ಯತೆ ಇದೆ. ಸದ್ಯ ಲಭ್ಯವಿರುವ ಆಟಗಾರರು ತರಬೇತಿ ಮತ್ತು ಅಭ್ಯಾಸದಲ್ಲಿ ಭಾಗವಹಿಸುವರು. ಅದಕ್ಕೂ ಮುನ್ನ ಎಲ್ಲರೂ ತಲಾ ಮೂರು ಸಲ ಕೋವಿಡ್ ಪರೀಕ್ಷೆಗೊಳಗಾಗಬೇಕು. ನೆಗೆಟಿವ್ ಟೆಸ್ಟ್ ವರದಿಯಾಗಬೇಕು' ಎಂದು ತಂಡದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಾಶಿ ವಿಶ್ವನಾಥ್ ತಿಳಿಸಿದ್ದಾರೆ. ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ ಚೆನ್ನೈ ತಂಡವು ಇಂಗ್ಲೆಂಡ್ ಆಲ್‌ರೌಂಡರ್ ಮೋಯಿನ್ ಅಲಿ (₹ 7 ಕೋಟಿ), ಕರ್ನಾಟಕದ ಆಲ್‌ರೌಂಡರ್ ಕೆ. ಗೌತಮ್ (₹ 9.25 ಕೋಟಿ) ಮತ್ತು ಚೇತೇಶ್ವರ್ ಪೂಜಾರ (₹ 50 ಲಕ್ಷ) ಅವರನ್ನು ಖರೀದಿಸಿತ್ತು.



ಚೆನ್ನೈ ವಿಮಾನ ನಿಲ್ದಾಣದಲ್ಲಿ ಧೋನಿ –ಸಿಎಸ್‌ಕೆ ಟ್ವಿಟರ್ ಚಿತ್ರ

ವ್ಹೀಲ್‌ಚೇರ್ ಟೆನಿಸ್: ನಾಲ್ಕರ ಘಟ್ಟಕ್ಕೆ ವೀರಸಾಮಿ ಶೇಖರ್

ಬೆಂಗಳೂರು: ಕರ್ನಾಟಕದ ವೀರ ಸಾಮಿ ಶೇಖರ್, ಇಲ್ಲಿ ನಡೆಯುತ್ತಿರುವ ಕೆಎಸ್ ಎಲ್‌ಟಿಎ–ಎಐಟಿಎ ವ್ಹೀಲ್‌ಚೇರ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ಎರಡನೇ ಶ್ರೇಯಾಂಕದ ವೀರ ಸಾಮಿ ಕರ್ನಾಟಕದವರೇ ಆದ ಅನಿಲ್ ಅಲ್ಮೇಡಾ ಅವರನ್ನು 9–1ರಲ್ಲಿ ಮಣಿಸಿದರು.

ಪುರುಷರ ವಿಭಾಗದ ಕ್ವಾರ್ಟರ್ ಫೈನಲ್ ಹಂತದ ಇತರ ಪಂದ್ಯಗಳಲ್ಲಿ ತಮಿಳುನಾಡಿನ ದುರೈ ಮರಿಯಪ್ಪ ಉತ್ತರಪ್ರದೇಶದ ಇಂದ್ರಜೀತ್ ಪಾಂಡೆ ವಿರುದ್ಧ 9–5ರಲ್ಲಿ, ನಾಲ್ಕನೇ ಶ್ರೇಯಾಂಕಿತ ತಮಿಳುನಾಡಿನ ಸುಬ್ರಮಣಿಯನ್ ಬಾಲಚಂದ್ರ ಕರ್ನಾಟಕದ ಎಚ್.ಮಧುಸೂದನ್ ವಿರುದ್ಧ 9–3ರಲ್ಲಿ, ಮೂರನೇ ಶ್ರೇಯಾಂಕಿತ ತಮಿಳುನಾಡಿನ ಕರುಣಾಕರನ್ ಕಾರ್ತಿಕ್ ಕರ್ನಾಟಕದ ಶಿವಪ್ರಸಾದ್ ವಿರುದ್ಧ 9–3ರಲ್ಲಿ ಗೆಲುವು ಸಾಧಿಸಿದರು.

ಮಹಿಳೆಯರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕದ ಅಗ್ರ ಶ್ರೇಯಾಂಕಿತೆ ಪ್ರತಿಮಾ ರಾವ್ ಕರ್ನಾಟಕದವರೇ ಆದ ಎಂ.ಕೆ. ಮುಬೀನಾ ಅವರನ್ನು 9–0ಯಿಂದ, ಕರ್ನಾಟಕದ ಮೂರನೇ ಶ್ರೇಯಾಂಕಿತೆ ನಳಿನ ಕುಮಾರಿ ಕರ್ನಾಟಕದ ಕೆ.ಶಿಲ್ಪಾ ವಿರುದ್ಧ 9–3ರಲ್ಲಿ, ಕರ್ನಾಟಕದ ಆರನೇ ಶ್ರೇಯಾಂಕಿತೆ ಎ.ಸುಧಾ ತಮಿಳುನಾಡಿನ ರೂತ್ ರಾಜೇಶ್ವರಿ ಅವರನ್ನು 9–7ರಲ್ಲಿ ಮತ್ತು ಕರ್ನಾಟಕದ ಕೆ.ಪಿ.ಶಿಲ್ಪಾ ತಮಿಳುನಾಡಿನ ಶೇರಂತಿ ಅವರನ್ನು 9–0ಯಿಂದ ಮಣಿಸಿದರು.

ರಾಜ್ಯ ಈಜು ಸ್ಪರ್ಧೆ ಇಂದಿನಿಂದ

ಬೆಂಗಳೂರು: ರಾಜ್ಯ ಈಜು ಸಂಸ್ಥೆ ಆಯೋಜಿಸಿರುವ ಜೂನಿಯರ್ ಮತ್ತು ಸೀನಿಯರ್ ಈಜು ಕೂಟ ಶುಕ್ರವಾರದಿಂದ ಇದೇ ಏಳರ ವರೆಗೆ ನಗರದ ಡಾಲ್ಫಿನ್ ಅಕ್ವಾಟಿಕ್ಸ್ ಮತ್ತು ಪಡುಕೋಣೆ–ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ನಡೆಯಲಿದೆ.

ಕೋವಿಡ್–19 ನಿಯಮಾವಳಿಗಳನ್ನು ಪಾಲಿಸಿ ಸ್ಪರ್ಧೆಗಳು ನಡೆಯಲಿವೆ. ರಾಜ್‌ಕೋಟ್‌ನಲ್ಲಿ ಇದೇ 24ರಿಂದ 27ರ ವರೆಗೆ ನಡೆಯಲಿರುವ ರಾಷ್ಟ್ರೀಯ ಸ್ಪರ್ಧೆಗೆ ರಾಜ್ಯ ತಂಡಗಳ ಆಯ್ಕೆಯೂ ಈ ಕೂಟದಲ್ಲಿ ನಡೆಯಲಿದೆ ಎಂದು ತಿಳಿಸಲಾಗಿದೆ.

ಐಎಸ್‌ಎಲ್: ಗೋವಾ–ಮುಂಬೈ ಹಣಾಹಣಿ

ಫತೋರ್ಡ, ಗೋವಾ (ಪಿಟಿಐ): ಮುಂಬೈ ಸಿಟಿ ಎಫ್‌ಸಿ ಆತಿಥೇಯ ಎಫ್‌ಸಿ ಗೋವಾ ತಂಡವನ್ನು ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಮೊದಲ ಲೆಗ್ ಸೆಮಿಫೈನಲ್ ಪಂದ್ಯದಲ್ಲಿ ಶುಕ್ರವಾರ ಎದುರಿಸಲಿದೆ.

ಗೋವಾ, ಸತತ 13 ಪಂದ್ಯಗಳಲ್ಲಿ ಅಜೇಯವಾಗಿ ಉಳಿದು ಐಎಸ್‌ಎಲ್‌ನಲ್ಲಿ ದಾಖಲೆ ಬರೆದಿದ್ದರೆ ಬಲಿಷ್ಠ ಎಟಿಕೆ ಮೋಹನ್ ಬಾಗನ್ ತಂಡವನ್ನು ಅಂತಿಮ ಲೀಗ್ ಪಂದ್ಯದಲ್ಲಿ ಮಣಿಸಿದ ಮುಂಬೈ ಎಎಫ್‌ಸಿ ಚಾಂಪಿಯನ್ಸ್ ಲೀಗ್‌ನಲ್ಲಿ ಆಡುವ ಅವಕಾಶ ಪಡೆದ ಹುಮ್ಮಸ್ಸಿನಲ್ಲಿದೆ.

ಮುಂಬೈ ಎದುರಿನ ಪಂದ್ಯಕ್ಕೆ ಆಲ್ಬರ್ಟೊ ನೊಗುವೆರಾ ಮತ್ತು ಇವಾನ್ ಗೊಂಜಾಲೆಸ್ ಇಲ್ಲ ಎಂಬುದು ಆ ತಂಡದಲ್ಲಿ ಆತಂಕ ಉಂಟುಮಾಡಿದೆ. ಇವರಿಬ್ಬರೂ ಅಮಾನತುಗೊಂಡು ಹೊರಗೆ ಉಳಿದಿದ್ದಾರೆ. ಆದರೆ ಗಾಯಗೊಂಡಿದ್ದ ಜಾರ್ಜ್ ಒರ್ಟಿಜ್ ವಾಪಸಾಗಿರುವುದು ಭರವಸೆ ಮೂಡಿಸಿದೆ. ಅಮಾನತುಗೊಂಡು ಹಿಂದಿನ ನಾಲ್ಕು ಪಂದ್ಯಗಳಲ್ಲಿ ಆಡದೇ ಇದ್ದ ಹ್ಯೂಗೊ ಬೌಮೋಸ್ ತಂಡಕ್ಕೆ ಮರಳಿರುವುದು ಮುಂಬೈ ಸಿಟಿ ಎಫ್‌ಸಿಯ ಬಲ ಹೆಚ್ಚಿಸಿದೆ. ಗೋವಾ ವಿರುದ್ಧ ಈ ಆವೃತ್ತಿಯಲ್ಲಿ ಮುಂಬೈ ಒಮ್ಮೆಯೂ ಸೋತಿಲ್ಲ.

ಪಂದ್ಯ ಆರಂಭ ಸಂಜೆ 7.30

ಸ್ಥಳ: ಫತೋರ್ಡ ಕ್ರೀಡಾಂಗಣ

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಸಿಂಧು, ಶ್ರೀಕಾಂತ್ ಜಯಭೇರಿ

ಬಾಸೆಲ್, ಸ್ವಿಟ್ಜರ್ಲೆಂಡ್ (ಪಿಟಿಐ): ಭಾರತದ ಪಿ.ವಿ.ಸಿಂಧು, ಕಿದಂಬಿ ಶ್ರೀಕಾಂತ್ ಮತ್ತು ಅಜಯ್ ಜಯರಾಮ್ ಇಲ್ಲಿ ನಡೆಯುತ್ತಿರುವ ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅಶ್ವಿನಿ ಪೊನ್ನಪ್ಪ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮಿಶ್ರ ಡಬಲ್ಸ್‌ನಲ್ಲಿ ಜಯ ಗಳಿಸಿದರೆ ಸೈನಾ ನೆಹ್ವಾಲ್ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು.


ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ.ಸಿಂಧು ಅಮೆರಿಕದ ಐರಿಸ್ ವ್ಯಾಂಗ್ ವಿರುದ್ಧ 21-13, 21-14ರಲ್ಲಿ ಜಯ ಗಳಿಸಿದರು. ಶ್ರೀಕಾಂತ್ ಫ್ರಾನ್ಸ್‌ನ ಥಾಮಸ್ ರಕ್ಸೆಲ್ ಸವಾಲನ್ನು 21-10, 14-21, 21-14ರಲ್ಲಿ ಮೀರಿ ನಿಂತರು. ಮೂರನೇ ಶ್ರೇಯಾಂಕದ ಡೇನ್ ರಸ್ಮುಸ್ ಗೆಮ್ಕೆ ವಿರುದ್ಧ ಅಜಯ್ ಜಯರಾಂ 21-18, 17-21, 21-13ರಲ್ಲಿ ಗೆಲುವು ಸಾಧಿಸಿದರು. ಸಾತ್ವಿಕ್ ಮತ್ತು ಅಶ್ವಿನಿ ಜೋಡಿ ಇಂಡೊ ನೇಷ್ಯಾದ ರಿನೊವ್ ರಿವಾಲ್ಡಿ ಮತ್ತು ಪೀತಾ ಮೆಂತಾರಿ ವಿರುದ್ಧ 21-18, 21-16ರಲ್ಲಿ ಜಯ ಗಳಿಸಿದರು.

ಸೈನಾ, ಸೌರಭ್‌ಗೆ ಸೋಲು: ಮಾಜಿ ಚಾಂಪಿಯನ್ ಸೈನಾ ನೆಹ್ವಾಲ್ ಸೋತು ಹೊರಬಿದ್ದರು. 58 ನಿಮಿಷಗಳ ಪಂದ್ಯದಲ್ಲಿ ಥಾಯ್ಲೆಂಡ್‌ನ ಫಿಟಯ ಪೊರ್ನ್ ಚೈವಾನ್‌ಗೆ 21–16, 17–21, 21–23ರಲ್ಲಿ ಸೈನಾ ಮಣಿದರು. ಪರುಪಳ್ಳಿ ಕಶ್ಯಪ್ ಪುರುಷರ ಸಿಂಗಲ್ಸ್‌ನಲ್ಲಿ ಸ್ಪೇನ್‌ನ ಪ್ಯಾಬ್ಲೊ ಅಬಿಯನ್ ವಿರುದ್ಧ 15-21, 10-21ರಲ್ಲಿ ಸೋತು ಹೊರಬಿದ್ದರು. ಪುರುಷರ ಸಿಂಗಲ್ಸ್‌ನಲ್ಲಿ ಸೌರಭ್ ವರ್ಮಾ ಕೂಡ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಯುವರಾಜ್ ದಾಖಲೆ ಸರಿಗಟ್ಟಿದ ಪೊಲಾರ್ಡ್

ಆ್ಯಂಟಿಗಾ: ಭಾರತದ ಯುವರಾಜ್ ಸಿಂಗ್ ಅವರ 'ಸಿಕ್ಸರ್‌ಗಳ ಸಿಕ್ಸರ್' ದಾಖಲೆಯನ್ನು ವೆಸ್ಟ್ ಇಂಡೀಸ್‌ನ ಕೀರನ್ ಪೊಲಾರ್ಡ್ ಸರಿಗಟ್ಟಿದರು.

ಬುಧವಾರ ತಡರಾತ್ರಿ ನಡೆದ ಶ್ರೀಲಂಕಾ ಎದುರಿನ ಟಿ20 ಪಂದ್ಯದಲ್ಲಿ ಪೊಲಾರ್ಡ್ ಅಖಿಲ ಧನಂಜಯ ಅವರ ಒಂದೇ ಓವರ್‌ನ ಆರು ಎಸೆತಗಳನ್ನೂ ಸಿಕ್ಸರ್‌ಗೆ ಎತ್ತಿದರು. ದಕ್ಷಿಣ ಆಫ್ರಿಕಾದಲ್ಲಿ 2007ರಲ್ಲಿ ನಡೆದಿದ್ದ ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಯುವರಾಜ್ ಸಿಂಗ್ ಇಂಗ್ಲೆಂಡ್ ಎದುರು ಒಂದೇ ಓವರ್‌ನಲ್ಲಿ ಆರು ಸಿಕ್ಸರ್ ಹೊಡೆದಿದ್ದರು.



ಕೀರನ್ ಪೊಲಾರ್ಡ್

ಮೊದಲು ಬ್ಯಾಟಿಂಗ್ ಮಾಡಿದ್ದ ಶ್ರೀಲಂಕಾ 20 ಓವರ್‌ಗಳಲ್ಲಿ ಒಂಬತ್ತು ವಿಕೆಟ್‌ಗಳಿಗೆ 131 ರನ್ ಗಳಿಸಿತ್ತು. ಗುರಿ ಬೆನ್ನಟ್ಟಿದ ವಿಂಡೀಸ್‌ಗೆ ಅಖಿಲ ಧನಂಜಯ್ ಪೆಟ್ಟು ಕೊಟ್ಟರು. ಅವರು ಇನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿ ಹ್ಯಾಟ್ರಿಕ್ ಸಾಧಿಸಿದರು.

ಪೊಲಾರ್ಡ್ ಅವರು ಧನಂಜಯ ಹಾಕಿದ ಆರನೇ ಓವರ್‌ನಲ್ಲಿ ಆರು ಸಿಕ್ಸರ್‌ಗಳನ್ನು ಎತ್ತಿದರು. ವಿಂಡೀಸ್ ತಂಡವು ನಾಲ್ಕು ವಿಕೆಟ್‌ಗಳ ಜಯ ಸಾಧಿಸಲು ಕಾರಣರಾದರು. ವಿಂಡೀಸ್ ತಂಡವು 13.1 ಓವರ್‌ಗಳಲ್ಲಿ ಆರು ವಿಕೆಟ್‌ಗಳಿಗೆ 134 ರನ್ ಗಳಿಸಿ ಗೆದ್ದಿತು.

ಅಶ್ವಿನಿ ಕ್ರೀಡಾ ಅಕಾಡೆಮಿಯಲ್ಲಿ ಆಯ್ಕೆ ಟ್ರಯಲ್ಸ್ 13ರಂದು

ಬೆಂಗಳೂರು: ಮಾಜಿ ಅಂತರರಾಷ್ಟ್ರೀಯ ಅಥ್ಲೀಟ್ ಅಶ್ವಿನಿ ನಾಚಪ್ಪ ಅವರ ಅಶ್ವಿನಿ ಸ್ಪೋರ್ಟ್ಸ್ ಫೌಂಡೇಷನ್ ಇದೇ ಮೊದಲ ಬಾರಿಗೆ ಸಾಯ್ ಸಹಯೋಗದಲ್ಲಿ ತರಬೇತಿ ನೀಡಲು 13 ರಿಂದ 18 ವರ್ಷದೊಳಗಿನವರ ಅಥ್ಲೆಟಿಕ್ಸ್ ಹಾಕಿ ಆಟಗಾರರಿಗೆ ಆಯ್ಕೆ ಟ್ರಯಲ್ಸ್ ಆಯೋಜಿಸಿದೆ.

ಮಾರ್ಚ್ 13ರಂದು ದಕ್ಷಿಣ ಕೊಡಗಿನ ಗೋಣಿಕೊಪ್ಪಲು, ಕೈಕೇರಿಯಲ್ಲಿರುವ ಸಾಯ್–ಎಎಸ್‌ಎಫ್ ಅಥ್ಲೆಟಿಕ್ ಅರೆನಾದಲ್ಲಿ ಟ್ರಯಲ್ಸ್ ನಡೆಯಲಿದೆ.

ಅಥ್ಲೆಟಿಕ್ಸ್‌ನಲ್ಲಿ ವೇಗದ ಮತ್ತು ಮಧ್ಯಮ ಅಂತರದ ಓಟಗಾರರನ್ನು ಆಯ್ಕೆ ಮಾಡಲಾಗುವುದು. ಅವರ ಕೌಶಲಗಳನ್ನು ಪರೀಕ್ಷಿಸಿ ಆಯ್ಕೆ ಮಾಡಲಾಗುವುದು. ಹಾಕಿ ಕ್ರೀಡೆಯಲ್ಲಿ ಆಟದ ಕೌಶಲಗಳು, ಮೋಟರ್ ಸ್ಕಿಲ್ಸ್ ಮತ್ತು ವೇಗದ ಪರೀಕ್ಷೆ ನಡೆಯಲಿದೆ

ಆಯ್ಕೆಯಾದವರಿಗೆ ಎರಡು ವರ್ಷ ಅವಧಿಯ ಭಾಗಶಃ ಅಥವಾ ಪೂರ್ಣಾವಧಿಯ ಶಿಷ್ಯವೇತನ ನೀಡಲಾಗುವುದು. ಶಾಲೆ, ಕಾಲೇಜು ಶುಲ್ಕವೂ ಇರಲಿದೆ.

ಮಾಹಿತಿಗಾಗಿ ಮತ್ತು ಆನ್‌ಲೈನ್ ಮೂಲಕ ನೋಂದಾಯಿಸಿಕೊಳ್ಳಲು ಈ ಲಿಂಕ್ https://docs.google.com/forms/d/1aKsKeGCIHtCD--Bjb7O8ggRUOGS0U ಬಳಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚೆನ್ನೈ ರೇಸ್

'ಫನ್ ಸ್ಟಾರ್ಮ್' ಗೆಲ್ಲುವ ನಿರೀಕ್ಷೆ

ತಮಿಳುನಾಡು ರೇಸ್‌ಹಾರ್ಸ್ ಓನರ್ಸ್ ಅಸೋಸಿಯೇಷನ್ ಕಪ್‌ನ ಮೊದಲನೇ ಡಿವಿಷನ್ ಶುಕ್ರವಾರದ ಚೆನ್ನೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು 'ಫನ್ ಸ್ಟಾರ್ಮ್' ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗೋಲ್ಡನ್ ಸ್ಟ್ರೀಕ್ 5, ಮೆಜೆಸ್ಟಿಕ್ ಚಾರ್ಮರ್ 7, ಡಾ.ಫೀಲ್‌ಗುಡ್ 1
2ನೇ ರೇಸ್: ಪಾಲ್ಸಿ ವಾಲ್ಸಿ 6, ಇನ್‌ಟಾಕ್ಸ್ 9, ಪ್ಯಾರೀಸ್ ಗ್ಲೋರಿ 6
3ನೇ ರೇಸ್: ಅಬ್ಸೊಲ್ಯೂಟ್ ಅಥಾರಿಟಿ 3, ಆಕ್ಸಿಜನ್ 2, ಸಾಂಗ್ ಆಫ್ ಗ್ಲೋರಿ 1
4ನೇ ರೇಸ್: ಇಂಕ್ರೆಡಿಬಲ್ ಸ್ಟಾರ್ 1, ಒಬೆರಾನ್ 4, ಡಾಮಿನೆಂಟ್ 3
5ನೇ ರೇಸ್: ಗ್ರ್ಯಾಂಡ್ ರಾಯಲ್ 4, ಚಾರ್ಲಿ ಏಂಜೆಲ್ 10, ಲಾರ್ಡ್‌ಶಿಪ್ 2
6ನೇ ರೇಸ್: ಫನ್ ಸ್ಟಾರ್ಮ್ 6, ಏಂಜೆಲ್ ಹಾರ್ಟ್ 7, ವಿಂಟೇಜ್ ಬ್ರಟ್ 4
7ನೇ ರೇಸ್: ಗ್ಲೋರಿಯಸ್ ಸನ್‌ಲೈಟ್ 1, ಫುಲ್ ಆಫ್ ಸರ್ಪ್ರೈಸ್ 2, ಮೊಮೆಂಟ್ ಆಫ್ ಲೈಫ್ 7
8ನೇ ರೇಸ್: ಸಿಂಫನಿ ಇನ್ ಸ್ಟೈಲ್ 8, ಡ್ರಿಫ್ಟ್‌ವುಡ್ ಪೆಸಿಫಿಕ್ 5, ಅಜೇರಿಯಾ 10

ಉತ್ತಮ ಬೆಟ್: ಗ್ಲೋರಿಯಸ್ ಸನ್‌ಲೈಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	4,5,6	6,7,8

‘ಎನ್‌ಬಿಎಫ್‌ಸಿ, ಎಚ್‌ಎಫ್‌ಸಿ ನಿರ್ವಹಣಾ ಸಂಪತ್ತು ಹೆಚ್ಚಲಿದೆ’

ಮುಂಬೈ (ಪಿಟಿಐ): 2021-22ನೇ ಹಣಕಾಸು ವರ್ಷದಲ್ಲಿ ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ಮತ್ತು ಗೃಹ ಹಣಕಾಸು ಕಂಪನಿಗಳ (ಎಚ್‌ಎಫ್‌ಸಿ) ನಿರ್ವಹಣಾ ಸಂಪತ್ತು ಹೆಚ್ಚಾಗಲಿದೆ ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಹೇಳಿದೆ.

ಎನ್‌ಬಿಎಫ್‌ಸಿ ಸಂಪತ್ತು ಶೇಕಡ 9.5ರಷ್ಟು ಮತ್ತು ಎಚ್‌ಎಫ್‌ಸಿಗಳ ನಿರ್ವಹಣಾ ಸಂಪತ್ತು ಶೇ 10ರಷ್ಟು ವೃದ್ಧಿಯಾಗಲಿದೆ ಎಂದು ತಿಳಿಸಿದೆ. ಎರಡೂ ವಲಯಗಳ ಕಂಪನಿಗಳ ಮುನ್ನೋಟವು ಸ್ಥಿರವಾಗಿರಲಿದೆ ಎಂದೂ ಹೇಳಿದೆ.



ಕೋವಿಡ್–19 ಸಾಂಕ್ರಾಮಿಕದಿಂದಾಗಿ 2020–21ನೇ ಹಣಕಾಸು ವರ್ಷದಲ್ಲಿ ಎನ್‌ಬಿಎಫ್‌ಸಿ ಬೆಳವಣಿಗೆಯು ಶೇ 4ರಿಂದ ಶೇ 5ರ ಆಸುಪಾಸಿನಲ್ಲಿ ಹಾಗೂ ಎಚ್‌ಎಫ್‌ಸಿ ಬೆಳವಣಿಗೆ ಶೇ 6.5ರಷ್ಟು ಇಳಿಕೆ ಆಗುವ ಅಂದಾಜು ಇದೆ.

ಮುಂಬೈ ಧಾರಣೆ

ಶೇಂಗಾ

4-3-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	8800-8900
ದಪ್ಪ ಗುಜರಾತ್(ಹೊಸ)	9700-9800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1540)
ಒಂದು ವಾರದ ಡೆಲಿವರಿ	1525 (1535)
ಸೋಯಾ ಕಚ್ಚಾ	1140 (1155)
ಪಾಮ್ ವಾರದ ಡೆಲಿವರಿ	1173 (1173)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1570)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 44,600 (44,600)

ಬೆಳ್ಳಿ ಕೆ.ಜಿ 66,200 (67,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	1000-1050
ನಡುಗೋಲು	1150-1250
ರಾಶಿ	1400-1450
ರಾಶಿ ಉತ್ತಮ	1500-1600
ಜರಡಿ	1700-1750
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	2000-2050
ಕಾಳು ಮೆಣಸು	325

ಅಡಿಕೆ

ಬಂಟ್ವಾಳ

ಕೋಕ	10000-22500
ಹೊಸತು	23500-40500
ಹಳತು	42500-50500

ಕುಮಟ

ಚಿಪ್ಪು	25509-31928
ಕೋಕ	20669-27919
ಹಳೆಚಾಲಿ	37199-41599
ಹೊಸಚಾಲಿ	34501-38279

ಸಿದ್ದಾಪುರ

ಬಿಳಿಗೋಟು	21899-29608
ಕೋಕ	18099-29808
ಚಾಲಿ	34872-38266
ಕೆಂಪುಗೋಟು	23111-29389
ರಾಶಿ	39899-41399
ತಟ್ಟಿಬೆಟ್ಟೆ	27799-37099

ಯಲ್ಲಾಪುರ

ಬಿಳಿಗೋಟು	24899-30269
ಕೋಕ	20122-29126
ಚಾಲಿ	31299-41389
ಕೆಂಪುಗೋಟು	24899-32969
ರಾಶಿ	39989-46519
ತಟ್ಟಿಬೆಟ್ಟೆ	34899-39729

ಶಿವಮೊಗ್ಗ ಎಪಿಎಂಸಿ

ಬೆಟ್ಟೆ	40000-43569
ಗೊರಬಲು	17019-31479
ರಾಶಿ	37609-42099
ಸರಕು	45509-72009

ಸಾಗರ

ಬಿಳಿಗೋಟು	22599-31471
ಚಾಲಿ	30601-33689
ಕೋಕ	18899-31099
ಕೆಂಪುಗೋಟು	22899-32900
ರಾಶಿ	34199-42399
ಸಿಪ್ಪೆಗೋಟು	9589-17605

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10050	9900	9950	132.80 ಸೆಂಟ್ಸ್
ಎಸಿ	4030	3900	3925	
ಆರ್‌ಪಿ	5250	5200	5250	
ಆರ್‌ಸಿ	3000	3100	2975	1426 ಡಾಲರ್ಸ್

ಟಿಯಾಗೊ ಎಕ್ಸ್‌ಟಿಎ ಮಾರುಕಟ್ಟೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಮೋಟಾರ್ಸ್ ಕಂಪನಿಯು ಟಿಯಾಗೊದ ಹೊಸ ಟ್ರಿಮ್ ಅನ್ನು ಆಟೊಮೆಟೆಡ್ ಮ್ಯಾನುಯಲ್ ಟ್ರಾನ್ಸ್‌ಮಿಷನ್ (ಎಎಂಟಿ) ಆಯ್ಕೆಯೊಂದಿಗೆ ಬಿಡುಗಡೆ ಮಾಡಿದೆ. ದೆಹಲಿಯಲ್ಲಿ ಇದರ ಎಕ್ಸ್ ಷೋರೂಂ ಬೆಲೆ ₹ 5.99 ಲಕ್ಷದಿಂದ ಆರಂಭವಾಗಲಿದೆ ಎಂದು ಕಂಪನಿ ತಿಳಿಸಿದೆ.

ಈ ಮೂಲಕ ಕಂಪನಿಯ ಆಟೊಮ್ಯಾಟಿಕ್ ಶ್ರೇಣಿಯನ್ನು ಬಲಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.




‘ಎಲ್ಲಾ ಪ್ರದೇಶಗಳಿಂದಲೂ ಟಿಯಾಗೊ ಹ್ಯಾಚ್‌ಬ್ಯಾಕ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಭಾರತದಲ್ಲಿ ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ವಿಭಾಗವು ಹೆಚ್ಚು ಬೇಡಿಕೆಯಲ್ಲಿದ್ದು ಟಿಯಾಗೊದ ಮಾರಾಟವು ಅದನ್ನು ಸಾಬೀತುಪಡಿಸಿದೆ’ ಎಂದು ಕಂಪನಿಯ ಪ್ರಯಾಣಿಕ ವಾಹನ ವ್ಯವಹಾರದ ಮಾರುಕಟ್ಟೆ ಮುಖ್ಯಸ್ಥ ವಿವೇಕ್ ಶ್ರೀವತ್ಸ ತಿಳಿಸಿದ್ದಾರೆ.

7 ಇಂಚಿನ ಇನ್ಫೊಟೇನ್‌ಮೆಂಟ್ ಟಚ್ ಸ್ಕ್ರೀನ್, 15 ಇಂಚಿನ ಅಲಾಯ್ ವೀಲ್ಸ್, ಸ್ವಯಂಚಾಲಿತ ಹವಾನಿಯಂತ್ರಣ ವ್ಯವಸ್ಥೆ ಮತ್ತು ಡಿಜಿಟಲ್ ಇನ್‌ಸ್ಟ್ರುಮೆಂಟ್ ಕ್ಲಸ್ಟರ್ ನಂತಹ ವೈಶಿಷ್ಟ್ಯಗಳನ್ನು ಈ ಕಾರು ಹೊಂದಿದೆ ಎಂದು ಕಂಪನಿ ತಿಳಿಸಿದೆ.

ಷೇರುಪೇಟೆ ವಹಿವಾಟು ▼ 598



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,246
ಇಂದಿನ ಅಂತ್ಯ	15,081
▼	165
ದಿನದ ಕನಿಷ್ಠ	14,980

ವಿನಿಮಯ ದರ

$ ಡಾಲರ್	72.83
£ ಪೌಂಡ್	101.44
€ ಯುರೊ	87.63
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹415
12 ಮೊಟ್ಟೆಗೆ	₹55

ಮೈಸೂರು

100 ಮೊಟ್ಟೆಗೆ	₹418

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1520 (1530)
ಸೋಯಾ (ರಿಫೈನ್ಡ್)	₹1182 (1182)
ಸೂರ್ಯಕಾಂತಿ (ರಿಫೈನ್ಡ್)	₹1610 (1610)
ಪಾಮೋಲಿನ್	₹1175 (1175)